ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

**23ನೇ ಡಿಸೆಂಬರ್ 2022**

**ಶುಕ್ರವಾರ**

## ವಿಷಯಾನುಕ್ರಮಣಿಕೆ (INDEX)

**01. ಉಪ ಸಭಾಪತಿ ಸ್ಥಾನಕ್ಕೆ ಚುನಾವಣೆ**

-ಶ್ರೀ ಪಿ.ಆರ್.ರಮೇಶ್
-ಶ್ರೀ ಎಸ್.ಎಲ್.ಭೋಜೇಗೌಡ
-ಶ್ರೀ ಯು.ಬಿ.ವೆಂಕಟೇಶ್

**02. ಅಭಿನಂದನೆ**

**"ನೂತನ ಉಪ ಸಭಾಪತಿಗಳಾಗಿ ಶ್ರೀ ಎಂ.ಕೆ.ಪ್ರಾಣೇಶ್ ರವರು ಆಯ್ಕೆಯಾಗಿರುವ ಕುರಿತು"**

-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)

**03. ಪ್ರಕಟಣೆಗಳು**

ಅ) ಕರ್ನಾಟಕ ವಿಧಾನ ಸಭೆಯು "ಕರ್ನಾಟಕ ಭೂ ಕಂದಾಯ(2ನೇ ತಿದ್ದುಪಡಿ) ವಿಧೇಯಕ, 2022 ಮತ್ತು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022" ನ್ನು ದಿನಾಂಕ 22.12.2022ರಂದು ಅಂಗೀಕರಿಸಿರುವ ಬಗ್ಗೆ.

ಆ)ಕರ್ನಾಟಕ ವಿಧಾನ ಸಭೆಯು 2021ನೇ ಸಾಲಿನ ಕರ್ನಾಟಕ ಬಂಧಿಗಳ ಗುರುತಿಸುವಿಕೆ ವಿಧೇಯಕವನ್ನು ದಿನಾಂಕ: 22.12.2022ರಂದು ಹಿಂಪಡೆದಿರುವ ಬಗ್ಗೆ.

**೦4. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**638–ಜಾತಿ ಜನಗಣತಿ ವರದಿಯನ್ನು ಬಹಿರಂಗಪಡಿಸುವ ಕುರಿತು**

–ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
–ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**676–ಕೃಷಿ ಯಂತ್ರಧಾರೆ ಯೋಜನೆಯ ಬಗ್ಗೆ**

–ಶ್ರೀ ಮುನಿರಾಜು ಗೌಡ ಪಿ.ಎಂ.
–ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**592–ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ**

–ಶ್ರೀ ಕೆ.ಎ.ತಿಪ್ಪೇಸ್ವಾಮಿ(ಶ್ರೀ ಟಿ.ಎ.ಶರವಣರವರ ಪರವಾಗಿ)
–ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)
–ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**622–ರಾಜ್ಯದಲ್ಲಿ ಬ್ರಾಹ್ಮಣ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ಈವರೆಗೆ ನೀಡಿರುವ ಅನುದಾನದ ಕುರಿತು**

–ಶ್ರೀ ಯು.ಬಿ.ವೆಂಕಟೇಶ್
–ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು)
–ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ(ಕಾರ್ಮಿಕ ಸಚಿವರು)

**611–ರೇಷ್ಮೆ ಬಿತ್ತನೆ ಕೋಠಿಯ ಬಗ್ಗೆ**

–ಶ್ರೀ ಎಂ.ಎಲ್.ಅನಿಲ್ ಕುಮಾರ್
–ಡಾ: ನಾರಾಯಣಗೌಡ(ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

**697–ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ಕ್ರೀಡಾಪಟುಗಳ ಸೌಲಭ್ಯಗಳ ಬಗ್ಗೆ**

–ಶ್ರೀ ಹೆಚ್.ಎಸ್.ಗೋಪಿನಾಥ್
–ಡಾ: ನಾರಾಯಣಗೌಡ(ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

**695-ಗೊಲ್ಲ ಸಮುದಾಯದ ಏಳಿಗೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ**

-ಶ್ರೀ ಎಂ.ನಾಗರಾಜು

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**566-ರಾಜ್ಯದಲ್ಲಿ ರೈತರು ಕೃಷಿ ಚಟುವಟಿಕೆಗಳನ್ನು ನಡೆಸಲು ಯಾಂತ್ರಿಕ ಸಾಮಗ್ರಿಗಳನ್ನು ಸಹಾಯಧನದೊಂದಿಗೆ ಪಡೆಯಲು ಸಲ್ಲಿಸಿರುವ ಅರ್ಜಿಯ ಬಗ್ಗೆ**

-ಶ್ರೀ ಅ.ದೇವೇಗೌಡ

-ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**708-ಕೋಲಿ/ಕಬ್ಬಲಿಗಾ/ಬೆಸ್ತ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ ಕುರಿತು**

-ಡಾ: ತಳವಾರ್ ಸಾಬಣ್ಣ

-ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**679- 2021-22ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಎಲ್ಲಾ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಹಣ ನೀಡುವ ಕುರಿತು**

- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು)

**587-ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ತುಂಬೆಯಲ್ಲಿರುವ ನೀರಾ ಘಟಕದ ಬಗ್ಗೆ**

-ಶ್ರೀ ಕೆ.ಹರೀಶ್ ಕುಮಾರ್

-ಶ್ರೀ ಮುನಿರತ್ನ(ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**629-ದೇವನಹಳ್ಳಿ ತಾಲ್ಲೂಕಿನಲ್ಲಿ ಗಣಿಧೂಳಿನಿಂದ ರೇಷ್ಮೆ ಕೃಷಿಗೆ ಹಾನಿಯಾಗುತ್ತಿರುವ ಬಗ್ಗೆ**

-ಶ್ರೀ ಎಸ್.ರವಿ

-ಡಾ: ನಾರಾಯಣಗೌಡ(ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦೫. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಶಹಾಪೂರ ಗ್ರಾಮದಲ್ಲಿ 2019ರಲ್ಲಿ ಉಂಟಾದ ನೆರೆ ಹಾವಳಿಯಿಂದ ನದಿ ಪಾತ್ರದ ಜನರ ಜೀವನ ಬೀದಿ ಪಾಲಾಗಿದ್ದು ಅವರುಗಳಿಗೆ ಪರಿಹಾರವನ್ನು ಒದಗಿಸುವ ಕುರಿತು.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಕಂದಾಯ ಸಚಿವರ ಪರವಾಗಿ)

**ಆ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಮತ್ತು ಮಹಾಲಿಂಗಪೂರ ಪಟ್ಟಣಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಿಸುವ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಕಂದಾಯ ಸಚಿವರ ಪರವಾಗಿ)

**ಇ) ರಾಜ್ಯದಲ್ಲಿ 2019 ರಿಂದ 2022 ರವರೆಗೆ ಪ್ರವಾಹದಿಂದ ಉಂಟಾದ ಮನೆಹಾನಿಯನ್ನು ಪುನರ್ ನಿರ್ಮಾಣ ಕಾಮಗಾರಿಗಳು ಪೂರ್ಣವಾಗಿಲ್ಲದಿರುವ ಕುರಿತು**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಕಂದಾಯ ಸಚಿವರ ಪರವಾಗಿ)

**ಈ) ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸುವ ಮತ್ತು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಭಷ್ಟಾಚಾರಕ್ಕೆ ಅವಕಾಶವಿಲ್ಲದಂತೆ ಸರ್ಕಾರ ಕ್ರಮ ಕೈಗೊಳ್ಳುವ ಕುರಿತು**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಉ) ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸುವ ಕುರಿತು**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಮುಖ್ಯಮಂತ್ರಿಗಳ ಪರವಾಗಿ)

**ಊ) ಗದಗ ಜಿಲ್ಲೆಯ ರೋಣ, ಮುಂಡರಗಿ ಮತ್ತು ಗಜೇಂದ್ರಗಡಗಳಲ್ಲಿ ಶಾಲಾ ಸಮಯಕ್ಕೆ ಸರಿಯಾಗಿ ಬಸ್ ಸಂಚಾರಕ್ಕೆ ವ್ಯವಸ್ಥೆ ಒದಗಿಸಲು ಸಾರಿಗೆ ಘಟಕದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಕುರಿತು.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

**೦6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ವರ್ಗಾವಣೆ ಕೌನ್ಸಿಲಿಂಗ್ ಮುಖಾಂತರ ನಡೆಯುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ತೊಂದರೆ ಕುರಿತು.**

-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ತುಮಕೂರು ಜಿಲ್ಲೆ ಕೋಲೂರು ದಿಣ್ಣೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮತಾಂತರದ ಕುರಿತು.**

- ಶ್ರೀ ಎಸ್.ಕೇಶವ ಪ್ರಸಾದ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಾಗರಿಕರು ಪಾವತಿಸಿದ ನೀರಿನ ಬಿಲ್ ಹಣದ ದುರ್ಬಳಕೆ ಕುರಿತು**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಅನುದಾನ ಪಡೆಯುವಲ್ಲಿ ಪರಿಶಿಷ್ಟ ಜಾತಿ/ಪಂಗಡ ವರ್ಗದವರು ವಂಚಿತರಾಗುತ್ತಿರುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಉ) ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು**

-ಶ್ರೀ ಎಂ.ನಾಗರಾಜು
-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಊ) ವಿದ್ಯುತ್ ದರ ಏರಿಕೆ ಕುರಿತು**

-ಶ್ರೀ ಮಂಜುನಾಥ್ ಭಂಡಾರಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಋ) ರಾಜ್ಯದಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ**

-ಶ್ರೀ ಡಿ.ಎಸ್.ಅರುಣ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಎ) ಕುಡಚಿ-ಬಾಗಲಕೋಟೆ ರೈಲು ಮಾರ್ಗದ ಅನುಷ್ಠಾನದ ನಿರ್ಲಕ್ಷತೆ ಬಗ್ಗೆ**

-ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**07. ಸಭೆಯ ಮುಂದಿಡಲಾದ ಕಾಗದಪತ್ರಗಳು**

**08. ವರದಿಯನ್ನೊಪ್ಪಿಸುವುದು**

**09. ಖಾಸಗಿ ಸದಸ್ಯರ ಕಾರ್ಯಕಲಾಪ**

**ಖಾಸಗಿ ನಿರ್ಣಯ**

**"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ಕುರಿತು ಸಂವಿಧಾನ ತಿದ್ದುಪಡಿಗಾಗಿ ಕೋರಿ ಖಾಸಗಿ ನಿರ್ಣಯದ ಮಂಡನೆ**

-ಶ್ರೀ ಯು.ಬಿ.ವೆಂಕಟೇಶ್

**(ನಿರ್ಣಯ ಮಂಡಿಸಲಾಯಿತು)**

~ * ~ ~ * ~

(1139) 23/12/2022/ಎಸ್‌ಪಿಆರ್-ಬಿಎನ್‌ಎಸ್/11:10

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 23ನೇ ಡಿಸೆಂಬರ್ 2022**

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ**
**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 11 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**
**ಪೀಠದಲ್ಲಿ ಉಪಸ್ಥಿತರಾದರು**

**ಸಭಾಪತಿಯವರು:-** ಈಗ ಉಪ ಸಭಾಪತಿಯವರ ಚುನಾವಣೆ ಪ್ರಕ್ರಿಯೆಯನ್ನು ತೆಗೆದುಕೊಳ್ಳಲಾಗುವುದು. ನಮ್ಮ ಮುಂದೆ ಒಟ್ಟು 5 ಪ್ರಸ್ತಾವನೆಗಳಿವೆ.

01. **ಉಪ ಸಭಾಪತಿ ಸ್ಥಾನಕ್ಕೆ ಚುನಾವಣೆ**

**ಮೊದಲನೇ ಪ್ರಸ್ತಾವ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್ ಎಂ.ಕೆ.ರವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸೂಚಿಸಿರುವ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

**ಎರಡನೇ ಪ್ರಸ್ತಾವ**

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್ ಎಂ.ಕೆ. ರವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ರುದ್ರೇಗೌಡರವರು ಸೂಚಿಸಿರುವ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

**ಮೂರನೇ ಪ್ರಸ್ತಾವ**

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್ ಎಂ.ಕೆ.ರವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ:-** ಮಾನ್ಯ ಸಭಾಪತಿಯವರೇ, ಡಾ॥ ತಳವಾರ್ ಸಾಬಣ್ಣರವರು ಸೂಚಿಸಿರುವ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

## ನಾಲ್ಕನೇ ಪ್ರಸ್ತಾವ

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್ ಎಂ.ಕೆ.ರವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ನವೀನ್ ಕೆ.ಎಸ್.:-** ಮಾನ್ಯ ಸಭಾಪತಿಯವರೇ, ಶ್ರೀ ಡಿ.ಎಸ್.ಅರುಣ್‌ರವರು ಸೂಚಿಸಿರುವ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

## ಐದನೇ ಪ್ರಸ್ತಾವ

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಅರವಿಂದ ಕುಮಾರ್ ಅರಳಿರವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಸೂಚಿಸಿರುವ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

## ಪ್ರಸ್ತಾವಗಳನ್ನು ಮಂಡಿಸಲಾಯಿತು

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇಲ್ಲಿ ಒಟ್ಟು 5 ಅರ್ಜಿಗಳಿದ್ದು, ಆ ಪೈಕಿ 4 ಅರ್ಜಿಗಳನ್ನು ಭಾರತೀಯ ಜನತಾ ಪಕ್ಷದವರೇ ಸಲ್ಲಿಸಿದ್ದಾರೆ. ಅವರು ಯಾವುದಾದರೂ ತಪ್ಪಾಗಿದೆ ಎಂದು ಭಾವಿಸಿ 4 ಅರ್ಜಿಗಳನ್ನು ಸಲ್ಲಿಸಿದರೇ ಎಂದು ಕೇಳಬಯಸುತ್ತೇನೆ!

**ಸಭಾಪತಿಯವರು:-** ಉಪ ಸಭಾಪತಿಯವರ ಚುನಾವಣೆ ಮುಗಿದ ನಂತರ ನೀವು ಅವರನ್ನು ಕೇಳಿಕೊಳ್ಳಿ; ತಾವೀಗ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಒಂದು ನಿಮಿಷ. ಉಪ ಸಭಾಪತಿಯವರ ಚುನಾವಣೆಗೆ ಬಂದಿರುವ ಒಟ್ಟು 5 ಪ್ರಸ್ತಾವನೆಗಳ ಪೈಕಿ, ಶ್ರೀ ಪ್ರಾಣೇಶ್ ಎಂ.ಕೆ.ರವರ ಹೆಸರಿನಲ್ಲಿರುವ ಮೊದಲನೇ ಪ್ರಸ್ತಾವನೆಯನ್ನು ಸದನದಲ್ಲಿ ಮತಕ್ಕೆ ಹಾಕುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಚುನಾವಣೆಯ ಬಗ್ಗೆ ನಾನು ಎರಡು ಮಾತುಗಳನ್ನಾಡಲು ಬಯಸುತ್ತೇನೆ. ನಮ್ಮ ಪಕ್ಷದ ಪರವಾಗಿ ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ನೀವು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಎರಡೂ ರಾಷ್ಟ್ರೀಯ ಪಕ್ಷಗಳು ಉಪ ಸಭಾಪತಿಯವರ ಸ್ಥಾನಕ್ಕೆ ಅರ್ಜಿಗಳನ್ನು ಸಲ್ಲಿಸಿರುವ ಸಂದರ್ಭದಲ್ಲಿ ಚುನಾವಣೆಗೆ ಮುಂದಾಗಿವೆ. ಈ ವಿಚಾರದಲ್ಲಿನ ನಮ್ಮ ಅನಿಸಿಕೆ ಏನೆಂದರೆ, ಈ ವಿಚಾರದಲ್ಲಿ ಪರಂಪರೆಯು ಇದೆ. ಆಡಳಿತ ಪಕ್ಷದವರು ಸಭಾಪತಿ ಸ್ಥಾನವನ್ನು ತೆಗೆದುಕೊಂಡ ಸಂದರ್ಭದಲ್ಲಿ... ಈ ರೀತಿಯಾಗಿ ಈ ಹಿಂದೆ ಆಗಿದೆ. ಆದರೆ ನಾನು ಹೊಸಬನಿದ್ದೇನೆ. ನನ್ನ ತಿಳುವಳಿಕೆಯ ಪ್ರಕಾರ, ಉಪ ಸಭಾಪತಿಯವರ ಸ್ಥಾನಕ್ಕೆ ಚುನಾವಣೆ ಬಂದ ಸಂದರ್ಭದಲ್ಲಿ ಆಡಳಿತ ಪಕ್ಷದವರು ಸೌಜನ್ಯಕ್ಕಾದರೂ ಸರಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಉಪ ಸಭಾಪತಿ ಸ್ಥಾನವನ್ನು ಬಿಟ್ಟುಕೊಟ್ಟಿರುವ ಅನೇಕ ಉದಾಹರಣೆಗಳು ಈ ಹಿಂದೆ ಆಗಿವೆ. ಆದರೆ, ಈಗ ಆಡಳಿತ ಪಕ್ಷದವರು ನಮ್ಮನ್ನು ಕೇಳಿಲ್ಲ. ಆದರೆ ಕಾಂಗ್ರೆಸ್ ಪಕ್ಷದವರನ್ನು ಕೇಳಿದ್ದಾರೆಯೇ ಅಥವಾ ಇಲ್ಲವೇ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಒಮ್ಮೆ ಚುನಾವಣೆಗೆ ಸ್ಪರ್ಧಿಸುತ್ತೇವೆ ಎನ್ನುವ ಸಂದರ್ಭದಲ್ಲಿ ಆಡಳಿತ ಪಕ್ಷದವರು "ನಾವು ಉಪ ಸಭಾಪತಿ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇವೆ; ನಾಮಪತ್ರ ಸಲ್ಲಿಕೆ ಮಾಡುತ್ತಿದ್ದೇವೆ; ದಯಮಾಡಿ ನಮಗೆ ಸ್ವಲ್ಪ ಸಹಕಾರ ನೀಡಿ" ಎಂದು ನಮ್ಮ ಪಕ್ಷದವರನ್ನು ಸೌಜನ್ಯಕ್ಕಾದರೂ ಕೇಳಿದ್ದರೆ ಅವರಿಗೆ ಸ್ವಲ್ಪ ಗೌರವ ಇರುತ್ತಿತ್ತು ಎನ್ನುವುದು ನಮ್ಮ ಪಕ್ಷದವರೆಲ್ಲರ ಹಾಗೂ ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದವರೂ ಸಹ ಉಪ ಸಭಾಪತಿಯವರ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ. ಸಭಾಪತಿಯವರ ಸ್ಥಾನಕ್ಕೆ ಈಗ್ಗೆ ಎರಡು

ದಿನಗಳ ಹಿಂದೆ ಚುನಾವಣೆಯು ನಡೆಯಿತು. ಇದಕ್ಕೆ ಈ ಪಕ್ಷದವರು ಏಕೆ ನಾಮಪತ್ರವನ್ನು ಸಲ್ಲಿಸಲಿಲ್ಲ ಎಂದು ಪ್ರಶ್ನಿಸುತ್ತೇನೆ. ಅವತ್ತಿಗೂ ಸಹ ಇದೇ ವಾತಾವರಣ ಮತ್ತು ಪರಿಸ್ಥಿತಿಯಿತ್ತು.

(ಮುಂದು)

(1140) 23-12-2022/11-20/bkp-bns

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):**

ಸಭಾಪತಿಯವರ ಸ್ಥಾನಕ್ಕೆ ಏತಕ್ಕೆ ಅರ್ಜಿ ಹಾಕಲಿಲ್ಲ? ಸಭಾಪತಿಯವರು ಮೇಲ್ವರ್ಗದ ಜಾತಿಗೆ ಸೇರಿದವರೆಂದು ಹೇಳಿ ಏನಾದರೂ ಮಾರ್ಜಿನ್ ಕೊಟ್ಟಿದ್ದಾರೆಯೇ ಅಥವಾ ಬೇರೆ ಬೇರೆ ವಿಚಾರದಲ್ಲಿ ಏನಾದರೂ ಮಾರ್ಜಿನ್ ಕೊಟ್ಟಿದ್ದಾರೆಯೇ? ಇವತ್ತು ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹೊರಗಡೆ ಕಾರಿಡಾರ್‌ನಲ್ಲಿ ಬಂದಿರುವ ವಿಚಾರವಾಗಿರುವುದರಿಂದ ನಾನು ಮಾತಾನಾಡುತ್ತಿದ್ದೇನೆ. ಇಲ್ಲದಿದ್ದರೆ, ನಾನು ಬೇರೆ ಬೇರೆ ವಿಚಾರದಲ್ಲಿ ಮಾತನಾಡಲಿಕ್ಕೆ ಹೋಗುವುದಿಲ್ಲ. ದಯಮಾಡಿ ಅದು ತಪ್ಪಾಗಿದ್ದರೆ ಕ್ಷಮಿಸಿ. **(ಗೊಂದಲ)** ಇಲ್ಲಿ ವಿಚಾರ ಬಂದಿದ್ದರಿಂದ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಶ್ರೀಯುತ ಭೋಜೇಗೌಡರು ಒಂದು ನಿಮಿಷ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನಿದೆಯೋ ಅದನ್ನು ಹೇಳುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ನಿಮ್ಮ political stand ಏನಾದರೂ ಮಾಡಿಕೊಳ್ಳಿ. ಆದರೆ, ಸಭಾಪತಿಯವರ ಬಗ್ಗೆ ಅವರು ಆ ವರ್ಗ, ಮೇಲ್ವರ್ಗ, ಕೆಳ ವರ್ಗ ಅಥವಾ ಉಪ ಸಭಾಪತಿಯವರ ಬಗ್ಗೆ ಮೇಲ್ವರ್ಗ ಎಂದು ಈ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ವೈಯಕ್ತಿಕವಾಗಿ ನಾನು ಹೇಳಲಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ವೈಯಕ್ತಿಕ ಎನ್ನುವುದಲ್ಲ. ನಿನ್ನೆತಾನೆ ಆಗಿರುವಂತಹ ಚುನಾವಣೆ ಬಗ್ಗೆ ಅವರ ನಿಲುವು ಈ ಕಾರಣಕ್ಕಾಗಿ ಈ ರೀತಿ ಆಗಿದೆ ಎನ್ನುವಂತಹದ್ದು, it is not in good taste. ಇದು ಸತ್ಸಂಪ್ರದಾಯವಲ್ಲ. ನಾನು ಅಷ್ಟೇ ಹೇಳಲಿಕ್ಕೆ ಎದ್ದು ನಿಂತೆ. ಇನ್ನುಳಿದ ವಿಚಾರವನ್ನು ಹೇಳಬಹುದು.

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ. ಅವರದ್ದು ಮುಗಿಯಲಿ, ಅಲ್ಲಿಯವರೆಗೂ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಹೀಗಾಗಿ, ನನ್ನ ನಿಲುವನ್ನು ನಾನು ಹೇಳಿದ್ದೇನೆ. ಒಂದು ನಿಮಿಷ ಕೇಳಿ. ನಾವೆಲ್ಲರೂ ತಿಳಿದದ್ದು...

(ಗೊಂದಲ)

**ಸಭಾಪತಿಯವರು:–** ಇಲ್ಲಿ ಒಂದು ನಿಮಿಷ ಕೇಳಿ. ಎಲ್ಲರೂ ಕುಳಿತುಕೊಳ್ಳಿ. ಚುನಾವಣೆ ಪ್ರಕ್ರಿಯೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಶ್ರೀಯುತ ಪುಟ್ಟಣ್ಣನವರೆ, ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಚುನಾವಣೆ ಪ್ರಾರಂಭವಾದ ಮೇಲೆ ಮಾತನಾಡಲಿಕ್ಕೆ ಅವಕಾಶ ಇದೆಯೇ?

**ಸಭಾಪತಿಯವರು:–** ಇಲ್ಲ, ಇಲ್ಲ, ನಾನು ಇನ್ನು ಪ್ರಾರಂಭ ಮಾಡಿಲ್ಲ. ಅವರು ಏನು ಹೇಳುತ್ತಾರೆ ಕೇಳೋಣ.

**ಶ್ರೀ ಪುಟ್ಟಣ್ಣ:-** ತಾವು ಹಿರಿಯರಿದ್ದೀರಿ. ಚುನಾವಣೆ ಪ್ರಾರಂಭವಾಗಿದೆ. ಚುನಾವಣೆ ಪ್ರಾರಂಭವಾದ ಮೇಲೆ ವಾಪಸ್ಸು ತೆಗೆದುಕೊಳ್ಳುವುದು ಮುಗಿದು ಹೋಗಿದೆ. ಈಗ ಚುನಾವಣೆ ಮಾತ್ರ ಆಗಬೇಕು. ಈಗ ಮಾತನಾಡಿದರೆ ಏನೂ ಉಪಯೋಗವಿಲ್ಲ. ಚುನಾವಣೆ ಮಾಡಿ.

**ಡಾ||ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೆ,

**ಶ್ರೀ ಎಸ್.ಎಲ್.ಭೋಜೇಗೌಡ:-** ಒಂದು ನಿಮಿಷ, ಗೋವಿಂದರಾಜು ರವರೆ, ನಮ್ಮ ನಿಲುವಿನ ಬಗ್ಗೆ ಹೇಳಬೇಕು. ಏಕೆಂದರೆ ನಾಳೆ ಬೆಳಗ್ಗೆ ...

**ಸಭಾಪತಿಯವರು:-** ಒಂದು ನಿಮಿಷ. ನೀವು ನಿಮ್ಮ ನಿಲುವನ್ನು ವ್ಯಕ್ತ ಮಾಡುವಾಗ ನನಗೆ ಜಾತಿ ಬಣ್ಣ ಹಚ್ಚಬೇಡಿ. ಈ ವಿಚಾರವಾಗಿ ನನಗೆ ಬಹಳ ಜನ ಹೇಳಿದ್ದಾರೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ತಮ್ಮನ್ನು ನಾನು ಆ ರೀತಿಯಲ್ಲಿ ಯಾವತ್ತು ನೋಡಿಲ್ಲ.

**ಸಭಾಪತಿಯವರು:-** ಒಂದು ನಿಮಿಷ. ನೀವು ನಾನು ಹೇಳುವುದನ್ನು ಕೇಳಿ. ನೀವು ನಾನು ಹೇಳುವುದನ್ನು ಕೇಳುವುದಿಲ್ಲವೆಂದರೆ ಹೇಗೆ?

**ಶ್ರೀ ಯು.ಬಿ. ವೆಂಕಟೇಶ್(ನಾಮ ನಿರ್ದೇಶಿತರು):-** ಶ್ರೀಯುತ ಭೋಜೇಗೌಡ ರವರೆ, ನೀವು ನಿಮ್ಮ ಪಕ್ಷದ ನಿಲುವಿನ ಬಗ್ಗೆ ಮಾತನಾಡಬೇಕು. ನಮ್ಮ ಪಕ್ಷದ ನಿಲುವಿನ ಬಗ್ಗೆ ನೀವು ಏತಕ್ಕೆ ಮಾತನಾಡುತ್ತೀರಿ. ನಮ್ಮ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ನೀವು ಯಾರು? ನಮ್ಮ ಪಕ್ಷದ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಏನು ಹಕ್ಕು ಇದೆ?

**ಶ್ರೀ ಎಸ್.ಎಲ್.ಭೋಜೇಗೌಡ:–** ಅವರ ಪಕ್ಷದ್ದು double standard. ಆ double standard ಬೇಡ.

**(ಗೊಂದಲ)**

**ಸಭಾಪತಿಯವರು:–** ಇದ್ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿನ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ನಾನು ಚುನಾವಣೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ಎರಡೂ ರಾಷ್ಟ್ರೀಯ ಪಕ್ಷಗಳು ನಮ್ಮನ್ನು ಕೇಳಲಿಲ್ಲ. ಅರ್ಜಿ ಹಾಕಲಿಲ್ಲ. ಹಾಗಾಗಿ, ಈ ಚುನಾವಣೆಯಲ್ಲಿ ನಾವು ಮತದಾನಕ್ಕೆ ಬಂದಂತಹ ಸಂದರ್ಭದಲ್ಲಿ ನಮ್ಮ ಪಕ್ಷ ಸಂಪೂರ್ಣವಾಗಿ ತಟಸ್ಥವಾಗಿ, ನಾವು ಹೊರಗಡೆ ಹೋಗದೇ ಇಲ್ಲಿಯೇ ಕುಳಿತಿರುತ್ತೇವೆ.

**ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:– ಅವರ ಪಕ್ಷಕ್ಕೆ ಸ್ಟ್ಯಾಂಡ್ ಇಲ್ಲ. (ಗೊಂದಲ) ಇವರದ್ದು ಯಾವ ಸ್ಟ್ಯಾಂಡ್ ಆಗಿರುತ್ತದೆ?

**ಶ್ರೀ ಎಸ್.ಎಲ್.ಭೋಜೇಗೌಡ:–** ನಿಮಗೆ ಯಾವ standard ಇದೆ? ನಿಮ್ಮದು double standard ಇದೆ.

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ನೀವು ಏನೇನೊ ಹೇಳುವುದು ಬೇಡ, ಹೇಳಬೇಕಾದ ವಿಚಾರ ಹೇಳಿ. ನಿಮ್ಮದು ಸ್ಟ್ಯಾಂಡ್ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಮ್ಮ ವೈಯಕ್ತಿಕ ತೂಕವನ್ನು ನಾವು ಇಟ್ಟುಕೊಂಡಿದ್ದೇವೆ. ನಿಮ್ಮ ತೂಕ ಇದ್ದರೆ ನಿಮ್ಮಲ್ಲಿ ಇಟ್ಟುಕೊಳ್ಳಿ. ನಮ್ಮ standard ಬಗ್ಗೆ ಮಾತನಾಡುವುದಕ್ಕೆ ಇವರು ಯಾರು? ನಿಮ್ಮದು double standard.

**ಶ್ರೀ ಎಸ್.ರವಿ:-** ನಮ್ಮ ಪಕ್ಷದ ಬಗ್ಗೆ ಹೇಳುವುದಕ್ಕೆ ಇವರಿಗೆ ಏನು ಅಧಿಕಾರ ಇದೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವಾಗಿ ಮಾತನಾಡಲಿಕ್ಕೆ ಪ್ರಾರಂಭ ಮಾಡಬೇಕೆಂದೇನೂ ಇರಲಿಲ್ಲ. ಮಾನ್ಯ ಶ್ರೀ ಎಸ್.ಎಲ್.ಭೋಜೇಗೌಡರವರು ಗಂಭೀರವಾದ ಆರೋಪವನ್ನು ನಮ್ಮ ಮೇಲೆ ಮಾಡಿದರು. ಕಾಂಗ್ರೆಸ್ ಪಕ್ಷ ನೀವು ಮೇಲ್ಜಾತಿಯವರೆಂದು ಹೇಳಿ ಬೆಂಬಲ ಕೊಟ್ಟಿದ್ದೀರಿ ಎಂದು ಹೇಳಿದರು. ಶ್ರೀಯುತ ಎಂ.ಕೆ. ಪ್ರಾಣೇಶ್ ರವರು ಯಾವ ಜಾತಿ? ಅವರು ಸಹ ಮೇಲ್ಜಾತಿಯವರಲ್ಲವೇ?

**ಸಭಾಪತಿಯವರು:-** ಇದರ ಬಗ್ಗೆ ನಾನು ಒಂದು ಸೆಕೆಂಡ್‌ನಲ್ಲಿ ಹೇಳುತ್ತೇನೆ. ಆ ಕಡೆ ಇರುವಂತಹ ಬಹಳ ಮಂದಿ ನನ್ನನ್ನು ಒಕ್ಕಲಿಗರು ಎಂದು ತಿಳಿದುಕೊಂಡಿದ್ದರು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವು ಎಲ್ಲರಿಗೂ ಗೌಡರೆ, ಎಂದು ಕರೆಯುತ್ತೇವೆ, ಲಿಂಗಾಯಿತರಿಗೂ ಗೌಡ್ರು ಎಂದು ಕರೆಯುತ್ತೇವೆ. ಗೌಡರಿಗೂ ಗೌಡ್ರು ಎಂದು ಕರೆಯುತ್ತೇವೆ.

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೆ, ಮೊನ್ನೆ ಇಡೀ ಸದನ ತಮ್ಮನ್ನು ಹೊಗಳಿ, ಎಲ್ಲವನ್ನೂ ಮಾಡಿ, ಈಗ ಅದರ ವಿಷಯವನ್ನು ಮಾತನಾಡುವುದು ತಪ್ಪು ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಎಲ್ಲರೂ ಸಹ appreciate ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕಾಂಗ್ರೆಸ್ ಪಕ್ಷ ಧರ್ಮ, ಜಾತಿಗಳಗಿಂತ ಮೇಲೆ ಇದೆ. ಅದನ್ನು ಮೀರಿ ಇರತಕ್ಕವರು. ನಾವು ಯಾವುದೇ ಜಾತಿ, ಧರ್ಮವನ್ನು ನೋಡುವುದಿಲ್ಲ. ನಮ್ಮಲ್ಲೂ ಕೂಡ ಹೈಕಮಾಂಡ್ ಎನ್ನುವುದು ಇದೆ . ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಏನಾದರೂ ಮಹಿಳೆಯರಿಗೆ ಅವಕಾಶ ಕೊಡುವುದಾದರೆ ನೀವು ಅಭ್ಯರ್ಥಿಯನ್ನು ಹಾಕಬೇಡಿ. ಇಲ್ಲದಿದ್ದರೆ, ಯಾರನ್ನಾದರೂ ಅಭ್ಯರ್ಥಿಯನ್ನು ಹಾಕಿ ಎಂದು ಹೇಳಿದ್ದರು. ಆ ವಿಚಾರವನ್ನು ಕೆಲವರಿಗೆ ಹೇಳಿಯೂ ಆಗಿದೆ. ನಾನು ಪತ್ರಿಕೆಯಲ್ಲಿಯೂ ಸಹ ಹೇಳಿದ್ದೇನೆ. ಹೀಗಾಗಿ double standard ನಮಗೆ ಬರುವುದಿಲ್ಲ. ಇದೇ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರಿಗೆ ಕಾಂಗ್ರೆಸ್ ಪಕ್ಷದಿಂದ ಬೆಂಬಲಕೊಟ್ಟು ಮುಖ್ಯಮಂತ್ರಿ ಮಾಡಿದಾಗ ಆಗ ಮೇಲ್ಜಾತಿ ಇರಲಿಲ್ಲವೇ? ಇದೇ ಶ್ರೀ ಹೆಚ್.ಡಿ. ದೇವೇಗೌಡರವರಿಗೆ ಪ್ರಧಾನ ಮಂತ್ರಿ ಮಾಡುವಾಗ ಆಗ ಮೇಲ್ಜಾತಿ ಇರಲಿಲ್ಲವೇ? ಅವಕಾಶವಾದಿಗಳು ನಾವು ಅಲ್ಲ. ನಾವು ಕಾಲಕ್ಕೆ ತಕ್ಕಂತೆ ಸಂದರ್ಭವನ್ನು ನೋಡಿ ನಾವು ಮಾಡತಕ್ಕಂತಹದ್ದರ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ, ನಮ್ಮ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುವುದು, double standard, single standard ಎಂದು ಹೇಳುವುದು ಸೂಕ್ತವಲ್ಲ. ನಾವು ನೇರವಾಗಿ ಇರುವವರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಸೋಲುವ ಸಂದರ್ಭದಲ್ಲಿ ನಮ್ಮನ್ನು scope out ಮಾಡುವುದು, ಬೇರೆ ಸಮಯದಲ್ಲಿ ಬೇರೆ ರೀತಿ ಮಾಡುವುದು.

(ಗೊಂದಲ)

**ಸಭಾಪತಿಯವರು:-** ಶ್ರೀಯುತ ಭೋಜೇಗೌಡ ರವರೆ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾವುಗಳು ಅವಕಾಶವಾದಿಗಳು ಎಂದ ಮೇಲೆ ಅದರ ಬಗ್ಗೆ ನಾವು ಹೇಳಬೇಕಲ್ಲವೇ? ನಮ್ಮ ಮನೆ ಬಾಗಿಲಿಗೆ ಬಂದವರು ಇವರು. ನಾವು ಅವರ ಮನೆ ಬಾಗಿಲಿಗೆ ಹೋಗಲಿಲ್ಲ.

**ಸಭಾಪತಿಯವರು:–** ಶ್ರೀಯುತ ಭೋಜೇಗೌಡ ರವರೆ, ಒಂದು ನಿಮಿಷ ಕುಳಿತುಕೊಳ್ಳಿ. ನೀವು ವಕೀಲರಿದ್ದೀರಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಉಪ ಸಭಾಪತಿ ಸ್ಥಾನಕ್ಕೆ ಬಂದಿರುವ ಐದು ಪ್ರಸ್ತಾವಗಳಲ್ಲಿ ಮೊದಲನೆಯ ಪ್ರಸ್ತಾವವನ್ನು ಮತಕ್ಕೆ ಹಾಕುತ್ತಿದ್ದೇನೆ;

**" ಪ್ರಸ್ತಾವ ಏನೆಂದರೆ;**

**"ಶ್ರೀ ಎಂ.ಕೆ.ಪ್ರಾಣೇಶ್ ಇವರನ್ನು ವಿಧಾನ ಪರಿಷತ್ತಿನ
ಉಪ ಸಭಾಪತಿಗಳಾಗಿ ಚುನಾಯಿಸುವುದು"**

ಈಗ ಸಭೆಯನ್ನು ವಿಭಜಿಸಲಾಗುತ್ತಿದೆ. ಪ್ರಸ್ತಾವದ ಪರವಾಗಿರುವವರು ಮತ್ತು ಪ್ರಸ್ತಾವದ ವಿರುದ್ಧವಾಗಿರುವವರು ಎದ್ದು ನಿಂತು ತಮ್ಮ ಒಪ್ಪಿಗೆಯನ್ನು ಸೂಚಿಸಬೇಕಾಗುತ್ತದೆ.

**(ಈ ಹಂತದಲ್ಲಿ ಸದನದ ಕೋರಂ ಬೆಲ್ ಅನ್ನು ಎರಡು ನಿಮಿಷಗಳ ಕಾಲ ಹಾಕಿ, ಸದನದ ಬಾಗಿಲುಗಳನ್ನು ತೆರೆಯಲಾಯಿತು. ಎರಡು ನಿಮಿಷಗಳ ನಂತರ ಬೆಲ್ ಅನ್ನು ನಿಲ್ಲಿಸಿ ಸದನದ ಬಾಗಿಲುಗಳನ್ನು ಮುಚ್ಚಲಾಯಿತು)**

**ಸಭಾಪತಿಯವರು:–** ಪ್ರಸ್ತಾವದ ಪರವಾಗಿ ಇರುವವರು ಎದ್ದು ನಿಲ್ಲತಕ್ಕದ್ದು, ಮತ ಎಣಿಕೆ ನಂತರ ಫಲಿತಾಂಶ ಪ್ರಕಟಿಸಲಾಗುವುದು.

**ಸಭೆಯನ್ನು ವಿಭಜಿಸಲಾಯಿತು**

**ಸಭಾಪತಿಯವರು:- ಸಭೆಯನ್ನು ವಿಭಜಿಸಿದಾಗ ಬಂದಂತಹ ಫಲಿತಾಂಶ ಹೀಗಿದೆ;**

**ಹೌದು : 39**

**ಇಲ್ಲ : 26**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 7(5)ರ ಅನ್ವಯ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಂಡಿಸಿರುವ ಮತ್ತು ಡಾ||ವೈ.ಎ.ನಾರಾಯಣಸ್ವಾಮಿಯವರು ಅನುಮೋದಿಸಿರುವ ಮೊದಲನೆಯ ಪ್ರಸ್ತಾವಕ್ಕೆ ಸದನವು ಅಂಗೀಕಾರ ನೀಡಿರುವುದರಿಂದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪ ಸಭಾಪತಿಯವರಾಗಿ ಚುನಾಯಿಸಲ್ಪಟ್ಟಿರುತ್ತಾರೆಂದು ಘೋಷಿಸುತ್ತಿದ್ದೇನೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು**

## ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಲಾಯಿತು

**(ಸದನದ ಎಲ್ಲ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಭಾನಾಯಕರು, ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು ನೂತನ ಉಪ ಸಭಾಪತಿಗಳನ್ನು ಉಪ ಸಭಾಪತಿಗಳ ಪೀಠಕ್ಕೆ ಕರೆತರಬೇಕು.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಮತ್ತು ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ಉಪಸಭಾಪತಿಗಳ ಪೀಠಕ್ಕೆ ಕರೆತಂದರು)**

**(ನೂತನ ಉಪ ಸಭಾಪತಿಗಳಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಗಳ ಪೀಠವನ್ನು ಅಲಂಕರಿಸಿದರು)**

**(1141) 23.12.2022 11.30 ಎಸ್‌ವಿ-ಜಿಆರ್** (ಸಭಾಪತಿಯವರ ಉಪಸ್ಥಿತಿ)

**(ಮಾನ್ಯ ಮುಖ್ಯಮಂತ್ರಿಯವರು ಉಪ ಸಭಾಪತಿ ಸ್ಥಾನದ ಬಳಿಗೆ ತೆರಳಿ ಮಾನ್ಯ ಶ್ರೀ ಎಂ.ಕೆ.ಪ್ರಾಣೇಶ್ ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಇತರ ಮಾನ್ಯ ಸದಸ್ಯರುಗಳು ಸಹ ನೂತನ ಉಪ ಸಭಾಪತಿಯವರ ಬಳಿಗೆ ತೆರಳಿ ಅಭಿನಂದನೆಯನ್ನು ಸಲ್ಲಿಸಿದರು)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಮಾತನಾಡುವಾಗ ಯಾವ ಮಾನದಂಡವನ್ನು ಇಟ್ಟುಕೊಂಡು ನೀವು ಅವರನ್ನು ಬೆಂಬಲಿಸಿದಿರಿ ಎಂದು ನಮ್ಮನ್ನು ಕೇಳಿದರು. ನಮ್ಮ ಪಕ್ಷದಲ್ಲಿ ನಾವು ಬಹಳಷ್ಟು ಚರ್ಚೆ ಮಾಡಿದ ನಂತರ ತಾವು ಸದನದಲ್ಲಿರುವ ಹಿರಿಯ ಸದಸ್ಯರು, ಅನುಭವಿಗಳು; ಈ ಹಿರಿಯರ ಮನೆಯನ್ನು ನಡೆಸಲಿಕ್ಕೆ ಸರಿಯಾದ ಅನುಭವಿಗಳು ಮತ್ತು ಹಿರಿಯರು ಬೇಕು ಎಂದು ತೀರ್ಮಾನ ಮಾಡಿದ ಮೇಲೆ ನಾವು ಸಭಾಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ತಮಗೆ ಬೆಂಬಲವನ್ನು ಸೂಚಿಸಿದ್ದೇವೆಯೇ ವಿನಃ ಯಾವುದೇ ಜಾತಿ, ಧರ್ಮ, ಭಾಷೆಯನ್ನು ಇಟ್ಟುಕೊಂಡು ನಾವು ಬೆಂಬಲವನ್ನು ಸೂಚಿಸಿರುವುದಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛಿಸುತ್ತೇನೆ.

**02. ಅಭಿನಂದನೆ**

**ವಿಷಯ:- ಶ್ರೀ ಎಂ.ಕೆ. ಪ್ರಾಣೇಶ್ ರವರು ನೂತನ ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವ ಕುರಿತು.**

**- - -**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್ ಅವರು ಹಿರಿಯರ ಮನೆಯ ಉಪ ಸಭಾಪತಿಗಳಾಗಿ ಎರಡನೆಯ ಬಾರಿಗೆ ಆಯ್ಕೆಯಾಗಿ ಉಪ ಸಭಾಪತಿ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರಿಗೆ ನನ್ನ ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛೆ ಪಡುತ್ತೇನೆ. ಈ ಸದನದ ಸರ್ವ ಸದಸ್ಯರ ಅಂದರೆ ಆ ಕಡೆ, ಈ ಕಡೆ ಎಲ್ಲರ ಪರವಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಪ್ರಾಣೇಶ್ ಅವರು ಅತ್ಯಂತ ಕ್ರಿಯಾಶೀಲರಾದ ವ್ಯಕ್ತಿಯಾಗಿದ್ದು, ಸಣ್ಣ ವಯಸ್ಸಿನಲ್ಲಿಯೇ ಸಾರ್ವಜನಿಕ ಜೀವನದಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಿ ಎಲ್ಲರ ಮನವನ್ನು ಗೆದ್ದಂತಹವರು. ಅವರು ಸದಾ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡಿ ಪರಿಹಾರವನ್ನು

ಕಂಡುಕೊಳ್ಳುವಂತಹ ಒಬ್ಬ ಸಜ್ಜನ ರಾಜಕಾರಣಿ. ಅವರ ನಡೆ ಮತ್ತು ನುಡಿ ಎರಡೂ ಕೂಡ ಒಂದಾಗಿದೆ. ಬಹಳ ಸೌಮ್ಯ ಸ್ವಭಾವದವರು. ಅವರ ಮಾತುಗಳು ಬಹಳಷ್ಟು ಸೌಮ್ಯತೆಯಿಂದ ಕೂಡಿರುತ್ತದೆ. He is a gentleman in politics. ಅವರ ಒಂದು ಸ್ನೇಹ ಎಲ್ಲಾ ಪಕ್ಷ, ಪಂಗಡ ಮೀರಿದೆ.

ಚಿಕ್ಕಮಗಳೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಯಲ್ಲಿ ತಮ್ಮದೇ ಆದಂತಹ ಪಾತ್ರವನ್ನು ವಹಿಸಿದವರು. ಆ ಭಾಗದ ರೈತರ ಸಮಸ್ಯೆ ಇರಬಹುದು ಕಾಡಂಚಿನಲ್ಲಿ ಇರುವ ಜನರ ಸಮಸ್ಯೆ ಇರಬಹುದು. ಕಾಡಿನ ಒಳಗೆ ಇರುವ tribals ಸಮಸ್ಯೆ ಇರಬಹುದು. ಕಾಫಿ ಬೆಳೆಗಾರರ ಸಮಸ್ಯೆ ಇರಬಹುದು. ಚಿಕ್ಕಮಗಳೂರಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಒಡನಾಡಿಯಾಗಿ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುವ ಒಬ್ಬ ವ್ಯಕ್ತಿಯಾಗಿ ಒಂದು ದಶಕಕ್ಕಿಂತಲೂ ಹೆಚ್ಚು ಕಾಲ ಅಲ್ಲಿ ಕೆಲಸ ಮಾಡಿದ್ದಾರೆ. ಕಳೆದ ಬಾರಿ ಉಪ ಸಭಾಪತಿಯಾಗಿ ಅತ್ಯುತ್ತಮವಾದಂತಹ ಕೆಲಸವನ್ನು ದಕ್ಷತೆಯಿಂದ ಮಾಡಿದ್ದನ್ನು ನಾವು ನೋಡಿದ್ದೇವೆ. ಇಂದು ಈ ಸದನಕ್ಕೆ ಒಬ್ಬ ಒಳ್ಳೆಯ ಉಪ ಸಭಾಪತಿಗಳು ದೊರೆತಿದ್ದಾರೆ. ತಮ್ಮ ಕೆಲಸದ ಭಾರವನ್ನು ನಿಭಾಯಿಸುವಂತಹ ಶಕ್ತಿ, ಸಾಮರ್ಥ್ಯ ಅವರಲ್ಲಿದೆ. ಅಷ್ಟರ ಮಟ್ಟಿಗೆ ತಮ್ಮ ಭಾರವನ್ನು ಕಡಿಮೆ ಮಾಡುವ ಸಾಧ್ಯತೆ ಇದೆ. ಸದನವನ್ನು ಅತ್ಯಂತ ಸುಗಮವಾಗಿ ಮತ್ತು ಯಶಸ್ವಿಯಾಗಿ ನಡೆಸುವುದಕ್ಕೆ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ಪ್ರಾಣೇಶ್ ಅವರು ಹಲವಾರು ಸಂದರ್ಭಗಳಲ್ಲಿ ತಮ್ಮ ಗಟ್ಟಿ ನಿಲುವನ್ನು ತೋರಿಸಿದ್ದಾರೆ. ಆ ಒಂದು ನಿಲುವಿನೊಂದಿಗೆ ಉಪಸಭಾಪತಿಯಾಗಿ ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾವು ಹೋಗುವಂಥ ಅವಶ್ಯಕತೆ ಇದೆ ಎಂದು ನಾನು ಪ್ರಾಣೇಶ್ ಅವರಿಗೆ ಹೇಳಲಿಕ್ಕೆ ಇಚ್ಛಿಸುತ್ತೇನೆ. ಏಕೆಂದರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಲವಾರು ಬಾರಿ ನಮ್ಮ ಪಕ್ಷ, ನಮ್ಮ ನಿಲುವುಗಳಿಗೆ ನಾವು ಮಾತನಾಡುತ್ತೇವೆ. ಆದರೆ ಕೆಲವೊಂದು ವಿಚಾರದಲ್ಲಿ ಸಾರ್ವಜನಿಕ ಹಿತ ಇರಬಹುದು, ರಾಜ್ಯದ ಹಿತ ಇರಬಹುದು, ನಾಡಿನ ನೆಲ-ಜಲದ ಪ್ರಶ್ನೆ ಇರಬಹುದು ಅಥವಾ ಯಾವುದಾದರೊಂದು ಜ್ವಲಂತ ಸಮಸ್ಯೆಯನ್ನು ಬಗೆಹರಿಸುವಂತಹ ಸಂದರ್ಭದಲ್ಲಿ ಆ ಎಲ್ಲವನ್ನೂ ಮೀರಿ ಎತ್ತರದಲ್ಲಿ ನಿಂತು ನಿಲುವನ್ನು ತೆಗೆದುಕೊಂಡು ಪರಿಹಾರ ಮಾಡುವ ಅವಶ್ಯಕತೆ ಇದೆ. ಇದು

ಎಲ್ಲರಿಗೂ ಕೂಡ ಅನ್ವಯಿಸುತ್ತದೆ. ವಿಶೇಷವಾಗಿ ಆ ಒಂದು ಎತ್ತರದ ಸ್ಥಾನದಲ್ಲಿ ಕುಳಿತು ತಮ್ಮ ಜವಾಬ್ದಾರಿ ಬಹಳ ದೊಡ್ಡದಿದೆ ಎಂದು ನಾನು ಭಾವಿಸುತ್ತೇನೆ.

ಸಾಮಾನ್ಯವಾಗಿ ಮೇಲ್ಮನೆಯಿಂದ ಜನರು ವಿಭಿನ್ನವಾದ ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ಈ ಮನೆಯಲ್ಲಿ ಒಳ್ಳೆಯ ರೀತಿಯ ಚರ್ಚೆಯಾಗುತ್ತದೆ, ಆಳವಾಗಿ ಚರ್ಚೆಯಾಗುತ್ತದೆ, ವಿಷಯಾಧಾರಿತವಾದ ಚರ್ಚೆಯಾಗುತ್ತದೆ. ಹಲವಾರು ಕಾನೂನುಗಳನ್ನು ಮಾಡುವಂತಹ ಸಂದರ್ಭದಲ್ಲಿ ಹೊಸ ಆಯಾಮ ಹೊಸ ಬೆಳಕನ್ನು ಚೆಲ್ಲುವುದಕ್ಕೆ ಈ ಸದನದಲ್ಲಿ ಅವಕಾಶವಿದೆ. ಹೀಗಾಗಿ ಈ ಸದನದಲ್ಲಿ ಒಂದು ರೀತಿಯ studied debate ಆಗಬೇಕೆನ್ನುವುದು ಜನಸಾಮಾನ್ಯರ ನಿರೀಕ್ಷೆ. ಅದಕ್ಕೆ ತಾವು ಹೆಚ್ಚಿನ ಅವಕಾಶಗಳನ್ನು ಕೊಡುವಂಥದ್ದು ಬಹಳ ಅವಶ್ಯಕ ಎಂದು ನಾನು ಭಾವಿಸುತ್ತೇನೆ.

ಇಂದು ಅತ್ಯಂತ ಹಿರಿಯ ವಿಧಾನ ಪರಿಷತ್ ಸದಸ್ಯರಾದವರು ಸಭಾಪತಿಗಳಾಗಿದ್ದು, ಅಪಾರವಾದ ಅನುಭವವನ್ನು ಹೊಂದಿದ್ದಾರೆ. ಆ ಅನುಭವದ ಜೊತೆಗೆ ತಮ್ಮ ಕ್ರಿಯಾಶೀಲತೆ ಸೇರಿಸಿದರೆ ಎಲ್ಲಾ ಸದಸ್ಯರ ವಿಶ್ವಾಸವನ್ನು ತೆಗೆದುಕೊಂಡು ಸದನವನ್ನು ಅತ್ಯುತ್ತಮವಾಗಿ ನಡೆಸಲು ಸಾಧ್ಯ ಎಂದು ನಾನು ಭಾವಿಸುತ್ತೇನೆ. ಈ ಒಂದು ವಿಧಾನಸಭೆಯ ಅಂತಿಮ ಚರಣದಲ್ಲಿ ನಾವಿದ್ದೇವೆ. ಈ ಸಂದರ್ಭದಲ್ಲಿ ಬರುವ ಹಲವಾರು ವಿಚಾರಗಳಿಗೆ ಹೆಚ್ಚಿನ ಸಮಯ ಮತ್ತು ಪ್ರಾಮುಖ್ಯತೆಯನ್ನು ಕೊಟ್ಟು ನಾವು ಕೆಲಸವನ್ನು ಮಾಡುವುದು ಅವಶ್ಯಕವಾಗಿದೆ. ಆ ಅನಿವಾರ್ಯತೆಯೂ ಇದೆ. ಆ ನಿಟ್ಟಿನಲ್ಲಿಯೂ ಕೂಡ ತಮ್ಮ ಪ್ರಯತ್ನಗಳಾಗಬೇಕು ಎನ್ನುವಂತಹ ಮಾತನ್ನು ಹೇಳಿ, ಒಬ್ಬ ಉತ್ತಮ ವ್ಯಕ್ತಿ ಹಾಗೂ ಜವಾಬ್ದಾರಿಯುತ ವಿಧಾನ ಪರಿಷತ್ ಸದಸ್ಯರು, ಸಜ್ಜನ ರಾಜಕಾರಣಿ, ಪ್ರಗತಿಪರ ಚಿಂತನೆಯುಳ್ಳವರು ಉಪ ಸಭಾಪತಿಯಾಗಿದ್ದು, ಈ ಸ್ಥಾನಕ್ಕೆ ಖಂಡಿತವಾಗಿಯೂ ಅವರಿಂದ ಗೌರವ ಲಭಿಸುತ್ತದೆ. ಅದರ ಮುಖಾಂತರ ಕರ್ನಾಟಕ ಜನರ ಹತ್ತು ಹಲವಾರು ಸಮಸ್ಯೆಗಳಿಗೆ ಉತ್ತರ ದೊರೆಯುತ್ತದೆ, ಪರಿಹಾರ ದೊರೆಯುತ್ತದೆ. ಈ ಸದನದ ಸರ್ವ ಸದಸ್ಯರ ವಿಶ್ವಾಸವನ್ನು, ಪ್ರೀತಿಯನ್ನು ತಾವು ಗಳಿಸಿಕೊಂಡು ಮುಂದೆ ಹೋಗುತ್ತೀರೆನ್ನುವ ವಿಶ್ವಾಸವನ್ನು ವ್ಯಕ್ತ ಪಡಿಸಿ, ಮತ್ತೊಮ್ಮೆ ಮಾನ್ಯ ಪ್ರಾಣೇಶ್ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್ ಅವರು ಎರಡನೆಯ ಬಾರಿಗೆ ಶಾಸಕರಾಗಿ, ಎರಡನೆಯ ಬಾರಿಗೆ ಉಪ ಸಭಾಪತಿಯವರಾಗಿದ್ದಾರೆ. ಅವರ ರಾಜಕಾರಣದ ಚಟುವಟಿಕೆಗಳು ಮತ್ತು ನಡವಳಿಕೆಗಳು ನಮ್ಮ ರಾಜಕೀಯ ಪಕ್ಷಕ್ಕೆ ಮತ್ತು ಈ ಸದನಕ್ಕೆ ಬಹು ದೊಡ್ಡ ಕೊಡುಗೆಯನ್ನು ನೀಡಿದೆ ಎಂದು ನಾವೆಲ್ಲಾ ಭಾವಿಸಿದ್ದೇವೆ. ವಿಧಾನ ಸೌಧವನ್ನು ನಿರ್ಮಿಸುವಾಗ ಒಂದು ಮಾತನ್ನು ಹೇಳಿದ್ದರಂತೆ.

**(ಮುಂದು)**

**(1142) 23-12-2022 (11.40) ಕೆಜಿ-ಜಿಆರ್** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):**

ರಾಜ್ಯದ ಮೂಲೆ ಮೂಲೆಯಲ್ಲಿದ್ದು, ತನ್ನ ಭಾವನೆಗಳನ್ನು ಭಾಷೆಯ ಮೂಲಕ ಹೇಳುವುದಕ್ಕೆ ಆಗದಿರುವಂತಹ, ಬರಹದಲ್ಲಿ ಪ್ರಕಟಿಸದಿರುವುದಕ್ಕೆ ಆಗದಿರುವಂತಹ ಅನೇಕ ಕೊನೆಯ ಮನುಷ್ಯರು ವಿಧಾನಸೌಧದಲ್ಲಿ ಇರುವಂತಹ ಮುಖ್ಯಮಂತ್ರಿಯವರನ್ನು ಕಂಡು ನಮಗೆ ಕುಡಿಯುವ ನೀರು ಬೇಕು, ನಮಗೆ ನಡೆಯುವ ದಾರಿ ಬೇಕು, ಸಾವು ಬದುಕಿನ ನಡುವೆ ಹೋರಾಡುವಂತಹವರಿಗೆ ಚಿಕಿತ್ಸೆ ಬೇಕೆಂದು ಹೇಳಿ ಸಮಾಜದಲ್ಲಿರುವಂತಹ ಕೊನೆಯ ಮನುಷ್ಯನೊಬ್ಬ ವಿಧಾನಸೌಧಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಆ ಕಾರಣಕ್ಕೆ, ವಿಧಾನಸಭೆಯನ್ನು ಮತ್ತು ವಿಧಾನ ಪರಿಷತ್ತನ್ನು ಸೃಷ್ಟಿ ಮಾಡಿ ಜನರ ಭಾವನೆಗಳನ್ನು ವಿಧಾನ ಸೌಧದಲ್ಲಿ ಚರ್ಚೆ ಮಾಡುವ ಮೂಲಕ ಜನರ ನೋವು-ನಲಿವುಗಳನ್ನು ಪರಿಹಾರ ಮಾಡುವಂತಹ ಒಂದು ವ್ಯವಸ್ಥೆ ಇದು ಎಂದು ಹೇಳಿದ್ದರಂತೆ. ಆ ಮಾತಿಗೆ ಪೂರಕವಾಗಿ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಕೆಲಸ ಮಾಡುತ್ತಿರುವಾಗ, ಶ್ರೀ ಎಂ.ಕೆ.ಪ್ರಾಣೇಶ್‌ರವರಂತಹ ಯುವ ವ್ಯಕ್ತಿತ್ವದ ನೇರ ನಡೆ-ನುಡಿ ಮನುಷ್ಯನೊಬ್ಬ ಇಂದು ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ. ನಮಗೆ ಅವರ ಬಗ್ಗೆ ಗೌರವ, ಪ್ರೀತಿ ಇದೆ. ನಾವು ಅವರು ಎಂತಹ ಪರಿಸ್ಥಿತಿಯಲ್ಲಿಯೂ ಸಹ ವೈಚಾರಿಕ ವಿಚಾರಗಳಲ್ಲಿ ರಾಜಿಮಾಡಿಕೊಂಡಂತಹ ಉದಾಹರಣೆಗಳನ್ನು ನೋಡಿಲ್ಲ. ಅವರು ಆಡಳಿತ ಪಕ್ಷದಲ್ಲಿ ಇದ್ದಾಗಲೂ ಸಹ, ಅವರು ತಮ್ಮ

ವಿಚಾರಧಾರೆಗಳನ್ನು ಹೇಳುವಂತಹ ಸಂದರ್ಭದಲ್ಲಿ ಯಾವುದೇ ಮುಜುಗರಕ್ಕೆ ಒಳಗಾಗದೆ ಅವರು ಆರಿಸಿ ಬಂದಿರುವಂತಹ ಕ್ಷೇತ್ರದ ಜನತೆಗೆ ಮತ್ತು ಸಮಾಜಕ್ಕೆ ಅನುಕೂಲಕರವಾದಂತಹ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಬಹಳ ಗಟ್ಟಿಯಾಗಿ ನಿಂತು ಮಾತನಾಡಿದ್ದನ್ನು ನಾವೆಲ್ಲರೂ ಕಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಶ್ರೀ ಎಂ.ಕೆ,ಪ್ರಾಣೇಶ್‌ರವರು ಉಪಸಭಾಪತಿಯಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಬಹಳ ಗಟ್ಟಿಯಾದ ನಿಲುವನ್ನು ವ್ಯಕ್ತಿಪಡಿಸುತ್ತಾರೆ, ಬಹಳ ಸ್ಪಷ್ಟವಾದ ವಿಚಾರಧಾರೆಗಳನ್ನು ಮಾಡುತ್ತಾರೆ, ಅವರು ಎಲ್ಲರ ಪರವಾಗಿ ಕೆಲಸವನ್ನು ಮಾಡುತ್ತಾರೆ, ಅವರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕರ್ತವ್ಯವನ್ನು ನಿರ್ವಹಿಸುತ್ತಾರೆ ಎನ್ನುವಂತಹ ಪೂರ್ಣ ವಿಶ್ವಾಸವನ್ನು ನಾವೆಲ್ಲರೂ ಹೊಂದಿದ್ದೇವೆ. ಈ ಸದನದ ಹಿರಿಯರು ತಾವು ಸಭಾಪತಿಯಾಗಿ ಶ್ರೀ ಎಂ.ಕೆ.ಪ್ರಾಣೇಶ್‌ರವರಿಗೆ ಮಾರ್ಗದರ್ಶನವನ್ನು ಮಾಡುತ್ತೀರಿ. ಸಭಾಪತಿಯಾಗಿ ಮತ್ತು ಉಪ ಸಭಾಪತಿಯಾಗಿ ತಮ್ಮಿಬ್ಬರ ಮಾರ್ಗದರ್ಶನಿಂದ ಈ ಸದನದ ಕಾರ್ಯಕಾಲಪಗಳ ಘನತೆ ಹೆಚ್ಚುತ್ತದೆ. ನಾನೇ ಹೇಳಿದಂತೆ, ಸಮಾಜದ ಸರ್ವ ಸಮಸ್ಯೆಗಳಿಗೂ ಸಹ, ವಸ್ತುನಿಷ್ಠ ವಿಚಾರಗಳ ಚರ್ಚೆ ಮೂಲಕ ಈ ಸದನ ಕೊಡುಗೆಯನ್ನು ನೀಡುತ್ತದೆ ಎಂದು ಭಾವಿಸಿದ್ದೇವೆ. ನಾವೆಲ್ಲರೂ ಬಹಳ ದಿವಸಗಳ ಹಿಂದೆಯೇ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಯಾಗಬೇಕೆಂಬ ಆಶಯವನ್ನು ಹೊತ್ತವರು. ಇಂದು ಅವರ ಆಯ್ಕೆಯಾಗಿದೆ. ನಮ್ಮ ಇಡೀ ಸದನದ ಪರವಾಗಿ, ಸರ್ಕಾರದ ಪರವಾಗಿ ಮತ್ತು ಇಡೀ ರಾಜ್ಯದ ಪರವಾಗಿ ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವ ಶ್ರೀ ಎಂ.ಕೆ.ಪ್ರಾಣೇಶ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮಸ್ಕಾರ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉಪ ಸಭಾಪತಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಅವರ ವೈಯಕ್ತಿಯ ಜೀವನದ ಬಗ್ಗೆ ಮತ್ತು ಅವರ ನಡೆ-ನುಡಿಗಳ ಬಹಳಷ್ಟು ವಿಷಯಗಳನ್ನು ಹೇಳಿದ್ದಾರೆ. ಅದೇರೀತಿ ಮಾನ್ಯ ಸಭಾನಾಯಕರು ಹೇಳಿದ್ದಾರೆ. ಪ್ರಜಾಪ್ರಭುತ್ವದ beauty of democracy ಎಂದರೆ, majority. ಅಂದರೆ, ನಮ್ಮ ಮಾನ್ಯ ಸಲೀಂರವರು 'the opposition has the say, but the Government has the way ಹೇಳುತ್ತಿದ್ದರು. ಆದರೆ, ನಾನು

ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. In the democracy numbers are respected. At the same time, emotions of the minority also should be respected. Just because, ನಾವು ಅಲ್ಪಸಂಖ್ಯಾತರು ಇದ್ದೇವೆಂದು ಹೇಳಿ, ಬಹುಸಂಖ್ಯಾತರು ಅವರನ್ನು ಕಡೆಗಣಿಸುವುದಕ್ಕೆ ಆಗುವುದಿಲ್ಲ. ನಮ್ಮ ಅಭಿಪ್ರಾಯಗಳಿಗೆ ಮತ್ತು ನಿಲುವುಗಳಿಗೆ ಅವರು ಸ್ಪಂದಿಸುವಂತಹ ಕೆಲಸ ಮಾಡುವಂತಹದ್ದೇ opposition parties ರವರ ಕೆಲಸ. ಈ ಸದನದಲ್ಲಿ ಅನುಭವಿಗಳು, ವಿಷಯ ತಜ್ಞರು, ಹಿರಿಯರು, ಮುತ್ಸದಿಗಳು ಪ್ರತಿನಿಧಿಸಿದ್ದನ್ನು ನಾವೆಲ್ಲರೂ ನೋಡಿದ್ದೇವೆ. ವಿಷಯ ತಜ್ಞರು ಎಂದಾಗ, ಕೆಲವು ವಿಚಾರಗಳನ್ನು ನಾವು ತಡೆದುಕೊಳ್ಳದೇ ಹೋಗಬಹುದು. ಆಗ ಪ್ರಜಾಪ್ರಭುತ್ವದಲ್ಲಿ ಆ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಸಂಪೂರ್ಣವಾದ ಹಕ್ಕಿದೆ. ಆದ್ದರಿಂದ, ನಾವು ವಿಚಾರಗಳನ್ನು ಹೇಳುವಂತಹ ಸಂದರ್ಭದಲ್ಲಿ ಬಹಳ ಅಳವಾಗಿ ಕೇಳಿ ತದನಂತರ ಅದಕ್ಕೆ ಉತ್ತರ ಕೊಡುವಂತಹದ್ದನ್ನು ನಾವೆಲ್ಲರೂ ನೋಡಿದ್ದೇವೆ. ಮಾನ್ಯ ಸದಸ್ಯರಾದ ಭೋಜೇಗೌಡರವರು ಹೇಳಿದಂತೆ, parliamentary system ನಲ್ಲಿ, ತುಮಕೂರಿನಲ್ಲಿ ಶ್ರೀ ಮಲ್ಲಿಕಾರ್ಜುನಯ್ಯನವರು ಇದ್ದರು. ಅಲ್ಲಿ ಬಿ.ಜೆ.ಪಿ., ಯವರು ಒಂದು ಎಂ.ಪಿ.,ಸ್ಥಾನವನ್ನು ಮಾತ್ರ ಗೆಲ್ಲುತ್ತಿದ್ದರು. ಆ ಸಂದರ್ಭದಲ್ಲಿ ಮಾನ್ಯ ನರಸಿಂಗ್‌ರಾಯರು full power ನಲ್ಲಿ ಇದ್ದಾಗಲೂ ಸಹ, ಅವರನ್ನು Deputy Speaker ಮಾಡಿ ಗೌರವ ಕೊಡಿಸಿದ್ದರು. ಏಕೆಂದರೆ, parliamentary democracy ನಲ್ಲಿ even the opposition has a say ಅಥವಾ way ಎಂದು ತೋರಿಸುವುದಕ್ಕೆ ಅವರು ಮಾಡಿಕೊಟ್ಟಿದ್ದರು. ಈಗ ಆ ಪರಂಪರೆ ನಿಧಾನವಾಗಿ ಅಳಿಸಿಹೋಗಿದೆ. ಆದರೆ, ಅದರ ಬಗ್ಗೆ ನಮಗೆ ಏನಿಲ್ಲ. ಯಾವ ಸರ್ಕಾರ ಬರುತ್ತದೆ, ಅವರು ಅವರ ನಿಲುವನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರ ನಡೆಸುವಾಗ ಸರ್ಕಾರದಲ್ಲಿರುವಂತಹ ಸಂಖ್ಯೆಗಳನ್ನು ಇಟ್ಟುಕೊಂಡು ಮಾತ್ರ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸುವಂತಹದ್ದೇ ಪ್ರಜಾಪ್ರಭುತ್ವದಲ್ಲಿ ಸರ್ಕಾರ ಅನ್ನುವುದು, ಆದ್ದರಿಂದ. ಈ ಒಂದು ಸಂದರ್ಭದಲ್ಲಿ ತಾವು ಹಿರಿಯ ಮುತ್ಸದಿ. ಒಂದು ದೊಡ್ಡ statesman ರೀತಿ ಮೊನ್ನೆ ದಿವಸ ಚುನಾವಣೆ ನಡೆದಂತಹ ಸಂದರ್ಭದಲ್ಲಿ ತಾವು ತಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ನಾನು ಬಿ.ಜೆ.ಪಿ.,ಯ ಸದಸ್ಯತ್ವಕ್ಕೆ ರಾಜಿನಾಮೆ ಕೊಡುತ್ತೇನೆಂದು ಹೇಳಿದ್ದೀರಿ. ಆದರೆ, ಉಪ ಸಭಾಪತಿಯಾಗಿ

ಆಯ್ಕೆಯಾಗಿರುವಂತ ಶ್ರೀ ಎಂ.ಕೆ.ಪ್ರಾಣೇಶ್‌ರವರು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಅವರು ಬಿ.ಜೆ.ಪಿ., ಪಕ್ಷದ ಅಭ್ಯರ್ಥಿ. ಅವರು ಪಕ್ಷದಲ್ಲಿ ಇರುತ್ತಾರೆ. ಅವರು ಪಕ್ಷದಲ್ಲಿ ಇದ್ದರೂ ಸಹ, ತಮ್ಮ ಗೈರು ಹಾಜರಿಯಲ್ಲಿ ಅವರು ಪೀಠದಲ್ಲಿ ಇರುತ್ತಾರೆ. ನಾವು ವಿರೋಧ ಪಕ್ಷದವರು ಮಾತನಾಡುವಂತಹ ಸಂದರ್ಭದಲ್ಲಿ ಅದನ್ನು ಕೇಳಿ, ಏಕೆಂದರೆ, ಸದಸ್ಯರು ವಿರೋಧ ಮಾಡಬಹುದು. ಅಲ್ಲಿ ಕುಳಿತುಕೊಂಡು ತಾವು ಏನು ಹೇಳಬಾರದೆಂದು ಹೇಳುವುದಕ್ಕೆ ಆಗುವುದಿಲ್ಲ. ಒಂದು ವೇಳೆ, ಹೇಳಿದರೆ ಕಡತದಿಂದ ತೆಗೆಯುತ್ತೇವೆಂದು ಮಾತ್ರ ಹೇಳಬಹುದು. ನಾವು ಇವೆಲ್ಲವನ್ನು ನೋಡಿಕೊಂಡು ಬಂದಿರುವುದರಿಂದ ಶ್ರೀ ಎ.ಕೆ.ಪ್ರಾಣೇಶ್‌ರವರಿಗೆ ಸಣ್ಣ ವಯಸ್ಸಿನಲ್ಲಿಯೇ ದೊಡ್ಡ ಜವಾಬ್ದಾರಿ ಸಿಕ್ಕಿದೆ. ನಾನು ಅದನ್ನು ಅಧಿಕಾರ ಎಂದು ಹೇಳುವುದಿಲ್ಲ. ಹಿರಿಯರ ಸದನದ ದೊಡ್ಡ ಜಬಾವ್ದಾರಿ ಎಂದು ಹೇಳುತ್ತೇನೆ. ಏಕೆಂದರೆ, ನಮ್ಮ ಗುರುಗಳಾದ ಶ್ರೀ ಎಂ.ಪಿ.ಎಲ್.ಶಾಸ್ತ್ರಿಯವರು ಮತ್ತು ಶ್ರೀ ಹೆಚ್.ನರಸಿಂಹ್ಯನವರು ಇದ್ದಂತಹ ಈ ಸದನದಲ್ಲಿ ಆ ಗೌರವವನ್ನು ಕಾಪಾಡುವಂತಹದ್ದು, ನಮಗಿಂತ ಹೆಚ್ಚಾಗಿ ಸಭಾಪತಿಯವರ ಪೀಠದಲ್ಲಿ ಕುಳಿತಿರುವವರಿಗೆ ಬಹಳ ಇರುತ್ತದೆ. ಏಕೆಂದರೆ, ನಾನು ಶ್ರೀ ಎ.ಕೆ.ಸುಬ್ಬಯ್ಯನವರನ್ನು ನೋಡಿದ್ದೇನೆ. ಶ್ರೀ ಎಂ.ಸಿ.ನಾಣಯ್ಯನವರನ್ನು ನೋಡಿದ್ದೇನೆ. ನಾನು ಈ ಸದನದಲ್ಲಿ ಬಹಳಷ್ಟು ಮುತ್ಸದಿಗಳನ್ನು ನೋಡಿದ್ದೇನೆ. ಏಕೆಂದರೆ, ಒಂದು ಬಾರಿ ಇದೇ ರೀತಿ ಸದನದಲ್ಲಿ ಒಬ್ಬರು nominate ಆಗಿ ಬಂದಿದ್ದರು. ಅವರು ರಾಜ್ಯಸಭಾ ಸದಸ್ಯರು. ಇಲಿ ಅವರ ಹೆಸರನ್ನು ಹೇಳುವುದಿಲ್ಲ. ಅವರು celebrity ಆಗಿದ್ದರು. ಅವರು ಮೊದಲು ಭಾಷಣ ಮಾಡುವಾಗಲೇ, ಬಾಂಬೆಯಲ್ಲಿರುವ ನಮ್ಮ ಮನೆಯ ಮುಂದೆಯ ಮೋರಿಯಲ್ಲಿ ನೀರು ಹೋಗುವುದಿಲ್ಲವೆಂದು ಪ್ರಾರಂಭ ಮಾಡಿದರು. ಆ ಸಂದರ್ಭದಲ್ಲಿ Sri Bhairon Singh Shekhawat ಇದ್ದರು. ಆಗ ಅವರು ಬಹಳ ಜೋರಾಗಿ ನಕ್ಕರು. ನಾವು ಕಾನೂನನ್ನು ಮಾಡುವಂತಹವರು, ನಾವು ಜನಸಾಮಾನ್ಯ ಕೆಲಸಗಳನ್ನು ಮಾಡುವಂತದ್ದಲ್ಲ, ಇದಕ್ಕೆ ಯಾವ ಕಾನೂನು ಮಾಡಬೇಕು ಹೇಳಿ ಎಂದು ಕೇಳಿದರು. ಆ ಸಂದರ್ಭದಲ್ಲಿ ಇಡೀ ಸದನ ನಗೆಗಡಲಲ್ಲಿತ್ತು. ಆದ್ದರಿಂದ, ಈ ಸದನದ ಮಹತ್ವ ಮತ್ತು ಜವಾಬ್ದಾರಿ ಇದೆ. ಈ ಸದನದ ಕಾರ್ಯಕಾಲಪವೇ ಬೇರೆಯಾಗಿರುವುದರಿಂದ, ತಾವು ಹೆಚ್ಚಿನ ಜಬಾಬ್ದಾರಿಯಿಂದ ನಡೆದುಕೊಂಡು, ವಿರೋಧ ಪಕ್ಷದವರಿಗೂ ಅವರ ಜಾಗ ಏನಿರುತ್ತದೆ, ಅವರ ಜಾಗವನ್ನು ಅವರಿಗೆ ಕೊಡಬೇಕೆಂದು ಕೇಳಿಕೊಂಡು,

ಈ ಕಿರಿಯ ವಯಸ್ಸಿನಲ್ಲಿ ಸಿಕ್ಕಿರುವಂತಹ ಅವಕಾಶವನ್ನು ಚೆನ್ನಾಗಿ ನಡೆಸಿಕೊಂಡು ಹೋಗಲಿ ಎಂದು ನಾನು ಉಪ ಸಭಾಪತಿಗಳಾದ ಶ್ರೀ ಎಂ.ಕೆ.ಪ್ರಾಣೇಶ್‌ರವರಿಗೆ ಶುಭ ಆರೈಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸಾಮಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಉಪ ಸಭಾಪತಿಯಾಗಿ ನೂತನವಾಗಿ ಆಯ್ಕೆಯಾಗಿರುವಂತಹ ನಮ್ಮ ಯುವ ಮಿತ್ರರಾದಂತಹ ಶ್ರೀ ಎಂ.ಕೆ.ಪ್ರಾಣೇಶ್‌ರವರಿಗೆ ಶುಭಾಶಯಗಳನ್ನು ಕೋರುತ್ತೇನೆ. ಶ್ರೀ ಎಂ.ಕೆ.ಪ್ರಾಣೇಶ್‌ರವರು ಒಂದು ರಾಜಕೀಯ ಕುಟುಂಬದ ಹಿನ್ನೆಲೆಯಿಂದ ಬಂದವರು. ಚಿಕ್ಕಮಗಳೂರಿನ ಮಕೋನಹಳ್ಳಿ ಕುಟುಂಬ ಎಂದರೆ, ಬಹುಶಃ ಎಲ್ಲರಿಗೂ ಸಹ  ಚಿರಪರಿಚಿತರು. ಈ ಕುಟುಂಬದ ಹಿರಿಯರಾದಂತಹ ಶ್ರೀ ಹುಚ್ಚೇಗೌಡರವರು ಸುಮಾರು ವರ್ಷಗಳ ಕಾಲ ಲೋಕಾಸಭೆಯ ಸದಸ್ಯರಾಗಿದ್ದರು. ಶ್ರೀ ಎಂ.ಕೆ.ಪ್ರಾಣೇಶ್‌ರವರ ಚಿಕ್ಕಪ್ಪನಾದ ಶ್ರೀ ಡಿ.ಎಂ.ಪುಟ್ಟೇಗೌಡರವರು ಈ ಸದನದ ಹಾಗೂ Parliament ಸದಸ್ಯರಾಗಿದ್ದರು. ಬಹುಶಃ ಅವರ ಈ ಹಿನ್ನೆಲೆ ಮತ್ತು ತಮ್ಮ ಹಿರಿತನದ ಮಾರ್ಗದರ್ಶನದಲ್ಲಿ ಬಹುಶಃ ಮುಂದಿನ ದಿವಸಗಳಲ್ಲಿ ಅದೇ ಜಿಲ್ಲೆಯಿಂದ ಬಂದಿರುವಂತಹ ಶ್ರೀ ಡಿ.ಬಿ.ಚಂದ್ರೇಗೌಡರವರು ಆಗಬಹುದು ಅಥವಾ ಶ್ರೀ ಬಿ.ಎಲ್.ಶಂಕರ್ ಆಗಿರಬಹುದು ಅವರ ಮಾರ್ಗದರ್ಶನದಲ್ಲಿ ಶ್ರೀ ಎಂ.ಕೆ.ಪ್ರಾಣೇಶ್‌ರವರು ಸಹ ನಡೆಯುತ್ತಾರೆಂಬ ಭರವಸೆಯನ್ನು ಅವರಲ್ಲಿ ನಾನು ಇಟ್ಟಿದ್ದೇನೆ.

ಮಾನ್ಯ ಸಭಾಪತಿಯರೇ, ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರವರು ಮಾತನಾಡುವಂತಹ ಸಂದರ್ಭದಲ್ಲಿ ಸ್ವಲ್ಪ emotional ಆಗಿ ಮಾತನಾಡಿದರು. ಅವರು ಉಪಸಭಾಪತಿ ಸ್ಥಾನವನ್ನು ವಿರೋಧ ಪಕ್ಷಕ್ಕೆ ಬಿಟ್ಟುಕೊಟ್ಟಿದ್ದರೆ ಚೆನ್ನಾಗಿತ್ತು, ತಮ್ಮನ್ನು ನಾವೆಲ್ಲರೂ ಅವಿರೋಧವಾಗಿ ಆಯ್ಕೆ ಮಾಡಿದ್ದೇವೆ. ಅದೇರೀತಿಯಾಗಿ ಆಡಳಿತ ಪಕ್ಷದವರು ನಮ್ಮನ್ನು ಕೇಳಬಹುದಿತ್ತೋ ಏನೋ ಎನ್ನುವಂತಹ ಒಂದು ಭಾವನೆ ಇತ್ತು.  ಅದೇರೀತಿ ವಿರೋಧ ಪಕ್ಷದ ನಾಯಕರು ಎಂದರೆ, ಕೇವಲ ಕಾಂಗ್ರೆಸ್ ಪಕ್ಷಕ್ಕೆ ಅಲ್ಲ, ಅವರು ನಮಗೂ ಸಹ ನಾಯಕರು,

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ,  ಅವರು ಸದನಕ್ಕೆ ಬರುವ ಮೊದಲು ನಿಮ್ಮನ್ನು ಭೇಟಿಯಾಗಿದ್ದಾರೆ, ಅದಕ್ಕೆ ಆ ರೀತಿಯಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಇದರಲ್ಲಿ ಎಲ್ಲಿಯೂ ಸಹ ರಾಜಕೀಯವನ್ನು ಮಿಕ್ಸ್ ಮಾಡಲಿಲ್ಲ. ಇದರಲ್ಲಿ ರಾಜಕೀಯ ಬೆಳವಣಿಗೆ ಮಾಡಲಿಲ್ಲ. ನಮ್ಮನ್ನು ಕೇಳಬಹುದಿತ್ತೋ ಏನೋ, ಕೇಳಿ ಅಭ್ಯರ್ಥಿಯನ್ನು ಹಾಕಿದ್ದರೆ, ನಾವು ಸಹ support ಮಾಡುತ್ತಿದ್ದೇವೋ ಏನೋ ಎನ್ನುವಂತಹ ಒಂದು ಭಾವನೆ ಇತ್ತು. ನಾವು ಅದನ್ನು ಹೇಳುವುದಕ್ಕೆ ಪ್ರಯತ್ನ ಪಟ್ಟೇವು. ಆದರೆ, ಅದು ಬಹುಶಃ ಬೇರೆ ರೀತಿಯಲ್ಲಿ ಆಯಿತು. ಅದಕ್ಕೆ ಅಪರ್ಥ ಕಲ್ಪಿಸುವುದು ಬೇಡವೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳುತ್ತೇನೆ. ತಮ್ಮಲ್ಲಿ ಯಾರಿಗೂ ಸಹ ಭಾವನೆಗಳಿಗೆ hurt ಮಾಡುವಂತಹ ದೃಷ್ಟಿಯಿಂದ ನಾವು ಮಾತನಾಡಿರುವಂತಹದ್ದಲ್ಲ,

ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಎರಡು ವಿಷಯಗಳನ್ನು ತಮ್ಮಲ್ಲಿ ಹೇಳುವುದಕ್ಕೆ ಇಚ್ಚೇಪಡುತ್ತೇನೆ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾರೆ. ಬಹುಶಃ ಕಾರ್ಯಕಾಲಾಪಗಳಲ್ಲಿ ಆ ಭಾಗದಲ್ಲಿ ಸಭಾನಾಯಕರು ಮತ್ತು ಈ ಭಾಗದಲ್ಲಿ ವಿರೋಧ ಪಕ್ಷದ ನಾಯಕರು ಬಹುಶಃ ಶಾಸಕರನ್ನು ಸ್ವಲ್ಪ control ಗೆ ತೆಗೆದುಕೊಳ್ಳಬೇಕು. ನಮ್ಮನ್ನು ಸೇರಿದಂತೆ. ನಾನು ಮತ್ತೊಮ್ಮೆ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರು ಎಂದರೆ, ಅವರು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಅಲ್ಲ, ನಾವು ಸಹ ಅವರ ಅಧೀನದಲ್ಲಿದ್ದೇವೆ. ಏಕೆಂದರೆ, ಸದಸ್ಯರ ಮನಸ್ಸಿಗೆ ಬಂದಂತೆ ಎದ್ದು ಮಾತನಾಡುವುದು ಬೇಡ. ಸದಸ್ಯರು ಎದ್ದು ನಿಲ್ಲುವುದು ಬೇಡ. ನಾವು ಹದ್ದುಮೀರಿ ನಡೆದಂತಹ ಸಂದರ್ಭದಲ್ಲಿ ಕುಳಿತುಕೊಳ್ಳಿ ಎಂದು ಹೇಳುವಂತಹ ಅಧಿಕಾರ ಆ ಕಡೆ ಸಭಾನಾಯಕರಿಗೆ ಇದೆ. ಈ ಕಡೆ ವಿರೋಧ ಪಕ್ಷದ ನಾಯಕರಿಗೆ ಅಧಿಕಾರ ಇದೆ. ಅದರ ಮೇಲೆ ತಮಗೆ ಅಧಿಕಾರ ಇದೆ. ಇದನ್ನು ನಡೆಸಿಕೊಂಡು ಹೋಗುವಂಥದ್ದು, ದಯಮಾಡಿ ನಿಯಮಾಳಿ ಪುಸ್ತಕವನ್ನು ಹೇಳುವುದಕ್ಕೆ ಹೇಳಿ. ದಯಮಾಡಿ ಕ್ರಿಯಾಲೋಪದ ಅಧಿನಿಯಮಗಳನ್ನು ಓದುವುದಕ್ಕೆ ಹೇಳಿ. ಯಾವ ನಿಯಮದಡಿ ಎದ್ದು ನಿಂತು ಮಾತನಾಡುತ್ತಿದ್ದೀರಿ ಎಂದು ಕೇಳಿದರೆ, ಬಹುಶಃ ಯಾರೂ ಸಹ ಮಾತನಾಡದಿರುವಂತಹ ಸನ್ನಿವೇಶ ಬಹುಶಃ ಬರುತ್ತದೆ.

**(ಮುಂದು.,)**

**(1143) 23-12-2022 (11.50) ಎಂವಿ-ಎಂಡಿ(ಆರ್‌ಎನ್)** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ಇನ್ನು ಹಲವಾರು ಚರ್ಚೆಯ ವಿಷಯಗಳ ಬಗ್ಗೆ ಹೇಳುವುದಾದರೆ, ಸದನ ಸಮಿತಿಗಳಿಗೆ ಕೊಡತಕ್ಕಂತಹ ಹಲವಾರು ಶಿಫಾರಸುಗಳ ಅನುಷ್ಠಾನವಾಗುತ್ತಿಲ್ಲ. ಈಗ ತಾವು ಇಬ್ಬರು ಇದ್ದೀರಿ. ಈಗಾಗಲೇ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಉಪ ಸಭಾಪತಿಗಳಾಗಿ ಕಾರ್ಯನಿರ್ವಹಿಸಿರುವ ಅನುಭವವಿದೆ. ಅವುಗಳನ್ನು ಯಾವ ರೀತಿ ಮಾಡಬೇಕೆಂದು ಹೇಳಬೇಕು. ಅದರ ಜೊತೆ ಜಂಟಿ ಸದನ ಸಮಿತಿಗಳಿಂದ ಬರತಕ್ಕಂಥ ವರದಿಗಳ ಅನುಷ್ಠಾನವಾಗುತ್ತಿಲ್ಲ. ಹಾಗೆಯೇ ಮಾನ್ಯ ಮಂತ್ರಿಗಳು ಹಲವಾರು ಭರವಸೆಗಳನ್ನು ನೀಡುತ್ತಾರೆ. ಮಾನ್ಯ ಮಂತ್ರಿಗಳು ಕೊಡುವಂತಹ ಆಶ್ವಾಸನೆಗಳು ಭರವಸೆಗಳಾಗಿ ಬರುತ್ತವೆ. ಅವುಗಳನ್ನು ಕೂಡ ಅಧಿಕಾರಿಗಳು ಆರು ತಿಂಗಳು, ಒಂದು ವರ್ಷ, ಎರಡು ವರ್ಷ ಮತ್ತು ಮೂರು ವರ್ಷಗಳಾದರೂ ಸಹ ಈಡೇರಿಸುತ್ತಿಲ್ಲ. ನಾವು ಅವುಗಳನ್ನು ನೋಡತಕ್ಕಂಥದ್ದು ಇದೆ. ಮತ್ತೊಂದು ಕಟ್ಟಕಡೆಯದಾಗಿ ಏನಾಗುತ್ತದೆ ಎಂದರೆ, ಮಂತ್ರಿಗಳಿಗೆ ಅಧಿಕಾರಿ ವರ್ಗದಿಂದ ಸಾಕಷ್ಟು ರೀತಿಯಲ್ಲಿ ಸಹಕಾರ ಸಿಗುತ್ತಿಲ್ಲ. ಇದನ್ನು ತಾವೆಲ್ಲರೂ ಸಹ ನೋಡಿದ್ದೀರಿ. ಈ ಹಿಂದೆ ಎಷ್ಟೋ ಬಾರಿ ಕಾರ್ಯದರ್ಶಿಗಳು ಮಂತ್ರಿಗಳಿಗೆ ಯಾವ ರೀತಿಯಲ್ಲಿ ಉಪ ಪ್ರಶ್ನೆಗಳು ಬರುತ್ತವೆ ಎಂದು ಅದನ್ನು ನೋಡಿ ಬರೆದು ಕಳುಹಿಸುವಂತಹ ವ್ಯವಸ್ಥೆ ಇತ್ತು. ನಾವು ಈ ಹಿಂದೆ ಅವುಗಳನ್ನು ನೋಡಿದ್ದೇವೆ. ಈ ದೃಷ್ಟಿಯಲ್ಲಿ ಸಾಕಷ್ಟು ರೀತಿಯಲ್ಲಿ ಕೂಡ ಇನ್ನು ಉತ್ತಮವಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಬೇಕಾದರೆ, ಮಾನ್ಯ ಸಭಾಪತಿಯವರ, ಮಾನ್ಯ ಉಪ ಸಭಾಪತಿಗಳಾದ ಶ್ರೀ ಎಂ.ಕೆ.ಪ್ರಾಣೇಶ್‌ರವರ, ಮಾನ್ಯ ಮುಖ್ಯಮಂತ್ರಿಗಳ, ಮಾನ್ಯ ಸಭಾನಾಯಕರ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರ ಮಾರ್ಗದರ್ಶನ ಮತ್ತು ಸಹಕಾರ ಬೇಕಾಗುತ್ತದೆ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ "ಹೊಸ ಚಿಗುರು, ಹಳೆ ಬೇರು" ಇಲ್ಲಿ ಇಬ್ಬರು ಸಹ ಒಂದಾಗಿದ್ದೀರಿ. ತಾವು "ಹಳೆ ಬೇರು", ಅವರು "ಹೊಸ ಚಿಗುರು" ನಿಮ್ಮ ಜೊತೆಗೆ ಬಂದಿದ್ದಾರೆ. ಈ ಸಭೆಯ ಸಂಪ್ರದಾಯ ಮತ್ತು ನಡವಳಿಕೆ ನಿಮ್ಮಿಬ್ಬರ ಕಾಲದಲ್ಲಿ ಚೆನ್ನಾಗಿ ಆಗಲಿ ಎಂದು ಆಶಿಸುತ್ತೇನೆ. ಸನ್ಮಾನ್ಯ ದಿವಂಗತ ಎಸ್.ಎಲ್.ಧರ್ಮೇಗೌಡರ ಅಕಾಲಿಕ ಮರಣದಿಂದಾಗಿ ನಾವು ಶ್ರೀ ಎಂ.ಕೆ.ಪ್ರಾಣೇಶ್‌ರವರು ಚಿಕ್ಕಮಗಳೂರು ಜಿಲ್ಲೆಯವರೆ ಇರುತ್ತಾರೆ ಹಾಗೂ ನ್ಯಾಯವನ್ನು

ಒದಗಿಸಿಕೊಟ್ಟ ಹಾಗೆ ಆಗುತ್ತದೆಂದು, ಶ್ರೀ ಎಂ.ಕೆ.ಪ್ರಾಣೇಶ್‌ರವರು ಈ ಸ್ಥಾನಕ್ಕೆ ಬರಬೇಕೆಂದು ಆಪೇಕ್ಷೆಪಟ್ಟು, ಅವರು ಆ ಸ್ಥಾನಕ್ಕೆ ಬಂದ ನಂತರ ಶ್ರೀ ಎಂ.ಕೆ.ಪ್ರಾಣೇಶ್‌ರವರು ನಾವೆಲ್ಲರೂ ಮೆಚ್ಚುವಂತಹ ಕೆಲಸವನ್ನು ಕರಾರುವಕ್ಕಾಗಿ ಮಾಡಿದ್ದಾರೆಂದು ಎಂಬುದು ನಮ್ಮ ಭಾವನೆ. ಅವರ ವಯಸ್ಸು ಚಿಕ್ಕದಾದರು, ಜವಾಬ್ದಾರಿ ಮತ್ತು ಅಧಿಕಾರ ನಿರ್ವಹಣೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಹಾಗಾಗಿ ಅವರಿಗೆ ಮತ್ತೊಂದು ಅವಕಾಶ ನೀಡುವುದು ಸರಿಯೆಂದು ಭಾವಿಸಿಕೊಂಡು, ಇವತ್ತು ಪಕ್ಷ ಅವರನ್ನು ಅದೇ ಹುದ್ದೆಗೆ ಮಾನ್ಯ ಸಭಾಪತಿಯವರ ಜೊತೆ ಜೊತೆಯಲ್ಲಿಯೇ ನಡಿಗೆ ನಡೆಯಲ್ಲಿ ಎಂದು ಗುರುತಿಸಿ ಕಳುಹಿಸಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೆ ಬೇರೆ ಮಾನ್ಯ ಸದಸ್ಯರುಗಳು ಹೇಳಿದಂತಹ ಮಾತನ್ನು ನಾನು ಅನುಮೋದನೆ ಮಾಡುತ್ತೇನೆ. ಇದು ವಿಧಾನ ಪರಿಷತ್ತಿನ ಸಭೆ. ವಿಧಾನ ಪರಿಷತ್ತಿನಲ್ಲಿ ಎಲ್ಲವನ್ನು ರಾಜಕೀಯವಾಗಿ ಮತ್ತು ಆಳುವ ಪಕ್ಷದ ಪರವಾಗಿ ಹೋಗಬೇಕೆಂದು ನಾನಂತೂ ಆಪೇಕ್ಷೆ ಪಡುವುದಿಲ್ಲ. ಆದರೆ, ಇದರಲ್ಲಿ ಜವಾಬ್ದಾರಿ ಮತ್ತು ಹಕ್ಕು ಈ ಎರಡೂ ನಿರ್ವಹಣೆ ಆಗಬೇಕು. ಮಾನ್ಯ ಸದಸ್ಯರುಗಳು ಏನು ಹಕ್ಕು ಎಂದು ತಿಳಿದುಕೊಂಡಿರುತ್ತಾರೆ, ಅದರ ಜೊತೆಗೆ ತಮ್ಮ ಜವಾಬ್ದಾರಿಗಳನ್ನು ಸಹ ತಿಳಿದುಕೊಂಡು ವರ್ತಿಸಿಬಿಟ್ಟರೆ, ನೀವು ಇಬ್ಬರು ಸಹ ಕೆಲಸ ಮಾಡುವುದಕ್ಕೆ ಬಹಳ ಸುಲಭವಾಗುತ್ತದೆ ಎಂದು ಭಾವಿಸುತ್ತೇನೆ. ಇವತ್ತು ನಾವೆಲ್ಲರೂ ಸಹ ಬೆಳೆದಿರುವವರು, ರಾಜ್ಯದ ಜನರು ನಮ್ಮ ವರ್ತನೆ ಮತ್ತು ಸ್ಥಿತಿಗತಿಗಳನ್ನು ನೋಡುತ್ತಾರೆ. ನಾವು ನಮ್ಮ ಕೆಳಗಿರುವಂತಹ ಸಾಲು ಸಾಲು ಸಂಸ್ಥೆಗಳಿಗೆ ಮಾರ್ಗದರ್ಶಕರಾಗಬೇಕು. ಈಗ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಇರುತ್ತದೆ. ಜಗಳ ಮತ್ತು ಗುದ್ದಾಟ ಮಾಡಿಕೊಂಡೆ ಸಭೆಯನ್ನು ನಡೆಸುವಂತಹ ರೀತಿ ಎನ್ನುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ನಾನು ಯಾವುದೋ ಒಂದು mock assembly ಕಾರ್ಯಕ್ರಮಕ್ಕೆ ಹೋಗಿದ್ದೆ. ಆಗ ಕಾನೂನು ಕಾಲೇಜ್‌ನ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ಕುಸ್ತಿಗೆ ಬಿಟ್ಟು ಬಿಟ್ಟರು. ಅದಕ್ಕೆ ನಾನು ನಿಮಗೆ ಈ ರೀತಿ ಅಸೆಂಬ್ಲಿ ನಡೆಯಬೇಕೆಂದು ಯಾರು ಗೈಡ್ ಮಾಡಿದ್ದು ಎಂದು ಕೇಳಿದೆ. ನೀವು ನನ್ನನ್ನು ಕುಳಿರಿಸಿಕೊಂಡು ಈ ರೀತಿ ವರ್ತಿಸುತ್ತಿರಲ್ಲ, ಇದು ಆ ರೀತಿಯಲ್ಲ. ಕುಸ್ತಿ ಕೊನೆಯ ಅಸ್ತ್ರ. ಮೊದಲನೆ ಅಸ್ತ್ರದಲ್ಲಿ ಕೋರುವುದು, ಕೇಳುವುದು ಮತ್ತು ಹೇಳುವಂತಹ ಚರ್ಚೆಗಳಿರುತ್ತವೆ. ಇದೆಲ್ಲಾ ಆದಮೇಲೆ ಅನಿವಾರ್ಯವಾದಾಗ ಎಂದು ಹೇಳಿದೆ. ಈ ಒಂದು mock assembly ಯಲ್ಲಿ ನೀವು ಮತ್ತು ಅವರು ನಿಂತು ಜಗಳವಾಡಬೇಕೆಂದು ಸತ್ಯವಾಗಿ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟಿದ್ದಾರೆ. ಈ ಸ್ಥಿತಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬರಬಾರದಾಗಿತ್ತು. ಎದುರುಗಡೆ ಇರುವವರ ಜೊತೆ ಜಗಳ ಮತ್ತು ಕುಸ್ತಿ ಮಾಡಬೇಕೆಂದು. ಆಗ ಮಾತ್ರ Parliamentary Democracy ಎಂದು

ಕರೆಯುತ್ತೇವೆಂದು ನಾವು ಶಾಲಾ ಮಕ್ಕಳಿಗೂ ಸಹ ಹೇಳುವಂತೆ ಆಗಿದೆ. ಅದು ಏನು ಅನಿವಾರ್ಯವಿಲ್ಲ. ನಾವು ಅನೇಕ ವಿಷಯಗಳನ್ನು ಚರ್ಚೆಯಿಂದ ಬಗೆಹರಿಸಿಕೊಳ್ಳಬಹುದು. ನನಗೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಜೆ.ಹೆಚ್.ಪಟೇಲರು ಜ್ಞಾಪಕಕ್ಕೆ ಬರುತ್ತಾರೆ. ಅವರು ಆರಂಭದ ದಿವಸಗಳಲ್ಲಿ ಒಂದು ಮಾತು ಹೇಳಿದ್ದರು. ಅಂದರೆ, ವಾದಕ್ಕೂ ಮತ್ತು ಚರ್ಚೆಗೂ ವ್ಯತ್ಯಾಸ ಗೊತ್ತಾದರೆ, ನೀವು Parliamentarian ಆಗುತ್ತಿಯಾ ಎಂದಿದ್ದರು. ಕಟಕಟೆ ಮುಂದೆ ಆಡುವಂತಹ ಮಾತಿಗೂ ಮತ್ತು ಇಲ್ಲಿ ಆಡುವಂತಹ ಮಾತಿಗೂ ವ್ಯತ್ಯಾಸ ಗೊತ್ತಾದರೆ, Parliamentarian ಆಗುತ್ತಿಯಾ. ಅದೇರೀತಿ ಕ್ಷೇತ್ರ ಮತ್ತು ರಾಜ್ಯದ ವ್ಯತ್ಯಾಸಗಳನ್ನು ತಿಳಿದುಕೊಂಡು ಮಾತನಾಡಿದರೆ, Statesman ಆಗುತ್ತಿಯಾ. ಈಗ ಶಾಸನ ಸಭೆಗಳಲ್ಲಿ ರಾಜ್ಯದ ಮಟ್ಟಿಗೆ ಹೆಚ್ಚು ಮಾತನಾಡಬೇಕು. ಆಮೇಲೆ ನಿಮ್ಮ ಕ್ಷೇತ್ರದ ಬಗ್ಗೆ ಒಂದು ಅಥವಾ ಎರಡು ಮಾತುಗಳನ್ನು ಮಾತನಾಡಬೇಕು. ಬಂದಂತಹವರೆಲ್ಲ ಅವರ ಕ್ಷೇತ್ರ ಮತ್ತು ಮತದಾರರ ಬಗ್ಗೆ ಮಾತನಾಡುವುದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಷ್ಟು ಒಳ್ಳೆಯದಲ್ಲ. ಅದು ಸಭೆಗಳಿಗೆ ಅಷ್ಟು ಗೌರವ ಬರುವುದಿಲ್ಲವೆಂದು ಹೇಳಿದರು. ನಾನು ಅವರ ಮಾತನ್ನು ಆ ದಿವಸದಿಂದ ಪಾಲಿಸುತ್ತಿದ್ದೇನೆ. ನಾವು We are all MLA & MLCs of this State and we are for all the people of this State. ನಾವು ಯಾವುದೋ ಒಂದು ಸೆಕ್ಟರ್‌ಗೆ, ಯಾವುದೋ ಒಂದು ಕೆಟಗರಿಗೆ ಮತ್ತು ಯಾರೋ ಮತದಾರರಿಗೆ ಎಂದು, pleasing gallery ಎನ್ನುವುದು ಏನಿದೆ, ಅದು ಯಾವಾಗಲೂ democracy ಗೆ ಒಂದು ದೊಡ್ಡ ಆಘಾತ. ಗ್ಯಾಲರಿಯನ್ನು ನೋಡಿ ಮಾತನಾಡುವುದು, ಜನರನ್ನು ಮೆಚ್ಚಿಸುವುದಕ್ಕೆ ಮಾತನಾಡುವುದು. ನಮಗೆ ಓಟ್ ಹಾಕಿದವರಿಗೆ please ಮಾಡುವ ಹಾಗೆ ಮತ್ತೊಂದು ಚುನಾವಣೆಯ ದೃಷ್ಟಿಯಲ್ಲಿ ಮಾತನಾಡುವುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನನಗೆ ಸರಿ ಅನಿಸುವುದಿಲ್ಲ. ಹಾಗಾಗಿ ನಾವು ನಮ್ಮನ್ನು ತಿದ್ದಿಕೊಂಡು, ನಿಮ್ಮಿಬ್ಬರಿಗೂ ಸಹ ಸಹಕಾರ ಕೊಟ್ಟು, ನಿಜವಾಗಿ ಈ ಸಭೆ ಒಂದು ಅತ್ಯಂತ ದೊಡ್ಡ ಸಭೆಯಾಗಿದೆ. ನಾವು ಅನೇಕ ಬಾರಿ ಏನ್ನನ್ನೇ ಮಾತನಾಡಿದರೂ ಸಹ ಇದು ಹಿರಿಯರ ಸಭೆ ಮತ್ತು ನೂರು ವರ್ಷದ ಮೇಲೆ ಆಗಿರುವಂತಹ ಸಭೆಯಾಗಿದೆ. ಈ ವಿಧಾನ ಪರಿಷತ್ತು, ವಿಧಾನಸಭೆ ಆರಂಭವಾಗುವುದಕ್ಕಿಂತ ಮೊದಲೇ ಆರಂಭವಾಗಿರುವಂತಹ ಸಭೆ. ಈ ಸಭೆಯ ಔಚಿತ್ಯ ಮತ್ತು ಉನ್ನತಿಯನ್ನು ನಾವೆಲ್ಲರೂ ಎತ್ತಿ ಹಿಡಿಯಬೇಕೆಂದು ಕೇಳಿಕೊಂಡು, ಒಂದು ಸಣ್ಣ ವ್ಯತ್ಯಾಸವನ್ನು ಅನ್ಯತಾ ಭಾವಿಸಬಾರದು. ಈಗ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ವಿಧಾನಸಭೆಯಲ್ಲಿ ಒಂದು ಭಾರಿ ಬೆಲ್ ಹೊಡೆದರೆ, ಮಾನ್ಯ ಸಭಾಧ್ಯಕ್ಷರ ಬಾಗಿಲಲ್ಲಿ, ಮಾನ್ಯ ಸಭಾಧ್ಯಕ್ಷರು ಮಾತ್ರ ಬರುತ್ತಾರೆ. ಬೆಲ್ ಆದಮೇಲೂ ಸಹ ಎಲ್ಲಾ ಎಂ.ಎಲ್.ಸಿ.ಗಳು ಓಡಾಡುತ್ತಿದ್ದಾರೆಂದು ನಾನು ಇಲ್ಲಿ ಕುಳಿತುಕೊಂಡು

ಕೇಳುತ್ತಿದ್ದೆ. ಇವುಗಳೆಲ್ಲಾ ಸಂಪ್ರದಾಯಗಳು, ಈಗ ಬೆಲ್ ಆದಮೇಲೆ ಮಾನ್ಯ ಸಭಾಪತಿಗಳು ಬರಬೇಕು. ಆಮೇಲೆ ಬೆಲ್ ನಿಲ್ಲಬೇಕು. ನಾವು ಕೆಲವುಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಬೆಲ್ ಆದಮೇಲೆ ಎಷ್ಟೇ ಇದ್ದರೂ ಸಹ ನಾವು ಮಾನ್ಯ ಸಭಾಧ್ಯಕ್ಷರ ಬಾಗಿಲಿನಿಂದ ಬರುವುದಿಲ್ಲ. ಬೆಲ್ ಆಗುವುದಕ್ಕಿಂತ ಮುಂಚೆ ಹೋಗುತ್ತೇವೆ. ಬೆಲ್ ಹಾಕಿದ ಮೇಲೆ Hon'ble Chairman Sir, You are only the right person to come out of that door. ನೀವು ಬರುವಾಗ ಅಂಗರಕ್ಷಕ ನಿಂತಿರುತ್ತಾನೆ. ಅವರು ಬಂದು ಮಾನ್ಯ ಸಭಾಪತಿಗಳು ಬರುತ್ತಾರೆಂದು ಹೇಳಬೇಕು. ನಾವು ಕೆಲವು ಒಳ್ಳೆಯ ಅಭ್ಯಾಸಗಳನ್ನು ಮುಂದುವರೆಯಿಸಿಕೊಂಡು ಹೋಗುವುದು ಸರಿ ಎಂದು ಹೇಳುತ್ತಾ, ತಮ್ಮ ಬಗ್ಗೆ ಮತ್ತು ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಬಗ್ಗೆ ಅತ್ಯಂತ ಹೆಚ್ಚು ವಿಶ್ವಾಸವಿದೆ. ಮಾನ್ಯ ಎಸ್.ಎಲ್.ಭೋಜೇಗೌಡರೆ, ಇದರಲ್ಲಿ ಜಾತಿ, ಧರ್ಮ, ಅದು, ಇದು ಎಂದು ಯಾವುದೂ ಸಹ ಲೆಕ್ಕವಿಲ್ಲ. ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಸುಮ್ಮನೆ ಬೇಜಾರಿಗೆ ಈ ರೀತಿ ಮಾತನಾಡಿದ್ದಾರೆ. ಆದರೆ, ಇವರಿಗೂ ಸಹ ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪ ಸಭಾಪತಿಗಳಾಗಿದ್ದು ಇಷ್ಟವಿದೆ. ಅವರು ಹೇಗೆ ತಮ್ಮ ಜಿಲ್ಲೆಯನ್ನು ಬಿಟ್ಟುಕೊಡುವುದಕ್ಕೆ ಆಗುತ್ತದೆ. ಅವರು ಬೇರೆ ಪಕ್ಷದಲ್ಲಿ ಇರುವುದರಿಂದ, ಏನೋ ಹೇಳಬೇಕು ಎಂದು ಹೇಳಿದ್ದಾರೆ. ಅನ್ಯತಾ ಯಾರೂ ಏನು ಭಾವಿಸಬಾರದು ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನದು exception case ದಯಮಾಡಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾನು ನಮ್ಮ ಜಿಲ್ಲೆಯ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ ಅವಕಾಶ ನೀಡುವುದಿಲ್ಲವೆಂದರೆ ಹೇಗೆ ಆಗುತ್ತದೆ? ಇಲ್ಲಿ ಸಭಾನಾಯಕರು ಸಹ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಯಾವಾಗಲೂ ಸಹ ಉಲ್ಟಾ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಉಲ್ಟಾ ಎಲ್ಲಿದೆ? ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ ತಾವು ಸ್ವಲ್ಪ ಕುಳಿತುಕೊಳ್ಳಿ.

೦3. <u>ಪ್ರಕಟಣೆಗಳು</u>

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:

**ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 22.12.2022ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.**

1. ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ವಿಧೇಯಕ, 2022.
2. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022.

**ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 22.12.2022ರಂದು 21ನೇ ಸಾಲಿನ ಕರ್ನಾಟಕ ಬಂಧಿಗಳ ಗುರುತಿಸುವಿಕೆ ವಿಧೇಯಕವನ್ನು ಹಿಂಪಡೆದಿರುವುದಾಗಿ ತಿಳಿಸಿರುತ್ತಾರೆ.**

ಈಗ ದಯವಿಟ್ಟು ಯಾರೂ ಮಾತನಾಡುವಂತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ದಯಮಾಡಿ ನನ್ನದು exception case.

**ಸಭಾಪತಿಯವರು:-** ಆಯಿತು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವಂತಹ ಶ್ರೀ ಎಂ.ಕೆ.ಪ್ರಾಣೇಶ್‌ರವರು ನಮ್ಮ ಜಿಲ್ಲೆಯವರು ಮತ್ತು ನನ್ನ ಆತ್ಮೀಯ ಸ್ನೇಹಿತರು.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡ ನಾನು ಬೆಲ್ ಹೊಡೆದಾಗ ತಾವು ಕುಳಿತುಕೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಆಯಿತು. ನಮ್ಮ ಕುಟುಂಬದ ಒಡನಾಡಿಗಳು ಆದಂತಹ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಇವತ್ತು ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವಂಥದ್ದು, ನಮ್ಮ

ಜಿಲ್ಲೆಗೆ ಸಿಕ್ಕಿದಂತಹ ಒಂದು ದೊಡ್ಡ ಗೌರವ ಮತ್ತು ವೈಯಕ್ತಿಕವಾಗಿ ನನಗೂ ಕೂಡ ಬಹಳ ಸಂತೋಷವಾಗಿರುವಂತಹ ವಿಚಾರ. ಮೂಡಿಗೆರೆಯಲ್ಲಿ ಎರಡು ಕುಟುಂಬಗಳಿವೆ. ಅಂದರೆ, ಮಾಕೋನಹಳ್ಳಿ ಕುಟುಂಬ ಮತ್ತು ದಾರದಹಳ್ಳಿ ಕುಟುಂಬ ಎಂದು. ಒಂದು ಕಾಲದಲ್ಲಿ ಮಾಕೋನಹಳ್ಳಿ ಕುಟುಂಬದವರು ಐದು ವರ್ಷ ಲೋಕಸಭಾ ಸದಸ್ಯರಾದರೆ ಮತ್ತೊಂದು ಐದು ವರ್ಷಕ್ಕೆ ದಾರದಹಳ್ಳಿ ಕುಟುಂಬದವರು ಎಂದು ಇತ್ತು. ಈ ಎರಡೇ ಕುಟುಂಬದವರು ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವಂತಹ ಕಾಲವಿತ್ತು. ನಂತರ ಮಾನ್ಯ ಶ್ರೀಕಂಠಪ್ಪನವರು ಬಂದ ಮೇಲೆ ಬದಲಾವಣೆಯಾಯಿತು. ಅಂತಹ ಒಂದು ಒಳ್ಳೆಯ ಹೆಸರು ಇರುವಂತಹ ಮಾಕೋನಹಳ್ಳಿ ಕುಟುಂಬದಿಂದ ಬಂದಂತಹ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಸರಳ ಮತ್ತು ಸಜ್ಜನಿಕೆಯ ರಾಜಕಾರಣಿ. ಮಾನ್ಯ ಎಂ.ಕೆ.ಪ್ರಾಣೇಶ್‌ರವರಿಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಎಲ್ಲಾ ಸದಸ್ಯರು ಅವರ ಗುಣವನ್ನು ಮೆಚ್ಚಿ ಮಾತನಾಡಿರುವುದಂಥದಕ್ಕೆ ನಾನು ಮಾತನಾಡಲೇಬೇಕಾಗುತ್ತದೆ. ನಾನು ಅವರನ್ನು ಅತ್ಯಂತ ಹತ್ತಿರದಿಂದ ನೋಡಿದಂತೆ, ಅವರು ರಾಜಕೀಯದ ಬಗ್ಗೆ ಆಸಕ್ತಿಯನ್ನು ಬೆಳಸಿಕೊಂಡಂತಹವರಲ್ಲ. ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದಾಗಿನಿಂದಲೂ ಸಹ ನೋಡಿದ್ದೇನೆ. ಅವರು ನನ್ನ ಸಹೋದರರು ಜೊತೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು.

**(ಮುಂದು)**

(1144) 23.12.2022 12.00 LL-MD(RN) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ(ಮುಂದು):**

ನಂತರ ಎಂ.ಎಲ್.ಸಿ.ಯಾಗಿ ಸಹ ನಮ್ಮ ಜೊತೆ ಇದ್ದರು. ಅವರು ಬಹಳ ಮುಖ್ಯವಾಗಿ ಸಂಘದ ನೆಲೆಗಟ್ಟಿನಿಂದ ಬಂದಂತಹವರು. ಆ ಸಂಘದ ನೆಲೆಗಟ್ಟಿನಲ್ಲಿ ಅನೇಕ ವಿಚಾರಗಳನ್ನು ಮೈಗೂಡಿಸಿಕೊಂಡು ಬಂದಿದ್ದರಿಂದ, ಪಕ್ಷನಿಷ್ಠೆ ಅವರನ್ನು ಇವೊತ್ತಿನ ದಿವಸ ಈ ಸ್ಥಾನದವರೆಗೂ ತಂದು ನಿಲ್ಲಿಸಿದೆ ಎಂದು ಹೇಳುವುದಕ್ಕೆ ನಾನು ಅತ್ಯಂತ ಸಂತೋಷಪಡುತ್ತೇನೆ. Loyalty ಯಲ್ಲಿ ಬಹಳ ಪ್ರಾಮಾಣಿಕರಾಗಿದ್ದರಿಂದ ಪಕ್ಷ ಅವರನ್ನು ವಯಸ್ಸಿನಲ್ಲಿ ಚಿಕ್ಕವರಿದ್ದರೂ ಸಹ ಗುರುತು ಮಾಡಿರುವುದು ನಮ್ಮ ಜಿಲ್ಲೆಗೆ ಗೌರವವನ್ನು ತಂದುಕೊಟ್ಟಿದೆ. ಅವರಿಗೆ ನಾನು ಹೆಚ್ಚಿಗೆ ಹೇಳುವುದಕ್ಕೆ

ಹೋಗುವುದಿಲ್ಲ. ಅವರು ಎಲ್ಲಾ ವಿಚಾರಗಳನ್ನು ಚೆನ್ನಾಗಿ ಅರಿತವರಿದ್ದಾರೆ. ಅವರು ಒಳ್ಳೆಯ Planter ಆಗಿದ್ದಾರೆ. ಕಳೆದ ಎರಡು-ಮೂರು ವರ್ಷಗಳಲ್ಲಿ ಅಕಾಲಿಕ ಮಳೆಯಿಂದಾಗಿ ನಮ್ಮ ಜಿಲ್ಲೆಯಲ್ಲಿ ಪ್ಲಾಂಟೇಷನ್ ಸಂಪೂರ್ಣವಾಗಿ ಅಧೋಗತಿಗೆ ಹೋಗಿರುವ ಸಂದರ್ಭದಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿ ಒತ್ತುವರಿ ಸಮಸ್ಯೆ ರೈತರಿಗೆ ಬಹಳವಾಗಿ ಕಾಡುತ್ತಿರುವಂತಹ ಸಂದರ್ಭದಲ್ಲಿ ಶ್ರೀ ಎಂ.ಕೆ. ಪ್ರಾಣೇಶ್‌ರವರು ಉಪ ಸಭಾಪತಿಯವರಾಗಿ, ಒಬ್ಬ ಪ್ಲಾಂಟರ್ ಆಗಿ, ಆ ಭಾಗದ ಅಂದರೆ, ಮಲೆನಾಡಿನ ಒಬ್ಬ ಪ್ರತಿನಿಧಿಯಾಗಿ ಈ ಎಲ್ಲಾ ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕು. ಇವೊತ್ತಿನ ದಿವಸ ಕಾಫಿ ಬೆಳೆಗಾರರು ಇರಬಹುದು ಅಥವಾ ಅಡಿಕೆ ಬೆಳೆಗಾರರು ಇರಬಹುದು, ಅದರಲ್ಲಿಯೂ ಅಡಿಕೆ ಬೆಳೆಗಾರರಿಗಂತೂ ಇವೊತ್ತಿನ ದಿವಸ ಕಪ್ಪು ಚುಕ್ಕೆ ಬಂದಿರುವುದರಿಂದ, ಅವರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಇವೊತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಒಳ್ಳೆಯ ಬೆಳೆ ಬಂದಿದ್ದರೂ ಸಹ, ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಕಾಫಿ ಬೆಳೆಗಾರರಂತೂ ಕಳೆದ 4 ವರ್ಷಗಳಿಂದ ಅಕಾಲಿಕ ಮಳೆಗೆ ಸಿಲುಕಿ, ಸಂಪೂರ್ಣ ನೆಲೆಕಚ್ಚಿ ಹೋಗಿದೆ. ಉದಾಹರಣೆಗೆ, ಮೆಣಸು ಇರಬಹುದು ಅಥವಾ ಕಾಫಿ ಇರಬಹುದು. ಅದರಲ್ಲಿಯೂ ವಿಶೇಷವಾಗಿ ಒತ್ತುವರಿ ಸಮಸ್ಯೆಗಳ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಜೀವನೋಪಾಯಕ್ಕಾಗಿ ಮಾಡಿಕೊಂಡಂತಹ ಅನೇಕ ಒತ್ತುವರಿಗಳನ್ನು ತೆರವು ಮಾಡತಕ್ಕಂಥದ್ದು, ಇವೊತ್ತಿನ ದಿವಸ ವನ್ಯಜೀವಿ ಮತ್ತು ಬೇರೆ ಬೇರೆ ಅರಣ್ಯ ಪ್ರದೇಶಗಳಲ್ಲಿ ಮತ್ತು ಕಂದಾಯ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಇರುವಂತಹ ನೂರಾರು-ಸಾವಿರಾರು ಜನ ಬಹಳ ಪರಿತಪಿಸುತ್ತಿದ್ದಾರೆ. ಅಂತಹ ಜ್ವಲಂತ ಸಮಸ್ಯೆಗಳಿಗೆ ಇಂತಹ ಒಂದು ಸ್ಥಾನದಲ್ಲಿ ಕುಳಿತಂತಹ ಸಂದರ್ಭದಲ್ಲಿ ಅಂತಹ ಸಮಸ್ಯೆಗಳಿಗೆ ನ್ಯಾಯ ಕೊಡುವಂತಹ ಕೆಲಸ ತಮ್ಮಿಂದ ಆಗಲಿ ಎಂದು ಕೋರುತ್ತೇನೆ. ಮತ್ತೊಮ್ಮೆ ನಮ್ಮ ಜಿಲ್ಲೆಯವರನ್ನು ಉಪ ಸಭಾಪತಿಯಾಗಿ ಆಯ್ಕೆ ಮಾಡಿದ್ದಕ್ಕಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನನಗೆ ಸಭಾಪತಿ ಸ್ಥಾನ ಮತ್ತು ಉಪ ಸಭಾಪತಿ ಸ್ಥಾನ ಈ ಎರಡೂ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ನಾವೆಲ್ಲರೂ ಸಹ ಈ ಸದನದಲ್ಲಿ ಕುಳಿತಿರುತ್ತೇವೆ. ನಮ್ಮನ್ನು ನೋಡುವಂತಹ ಸಂದರ್ಭದಲ್ಲಿ ನಾವೆಲ್ಲರೂ ಸಹ ಇವರಿಗೆ ಸಹಾಯ ಮಾಡಿದ್ದಾರೆಂಬ ಮನಸ್ಸು, ಸಭಾಪತಿ ಮತ್ತು ಉಪ ಸಭಾಪತಿ ಸ್ಥಾನದಲ್ಲಿ ಕುಳಿತಿರುವಂತಹರಿಗೆ ಮತ್ತು ನಮ್ಮೆಲ್ಲರಿಗೂ ಇರುತ್ತದೆ. ಆಗ ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ

ನೋಡುವುದಕ್ಕೆ ಅವಕಾಶ ಆಗುತ್ತದೆ. ಅವಕಾಶವನ್ನು ಕಲ್ಪಿಸಿಕೊಡಬೇಕಾದಂತಹ ಸಂದರ್ಭದಲ್ಲಿ ಅವರ ಮನಸ್ಸು, ಎಲ್ಲಾ ಸದಸ್ಯರು ಸಹ ಅವಿರೋಧವಾಗಿ ನನ್ನನ್ನು ಆಯ್ಕೆ ಮಾಡಿದ್ದಾರೆ. ಹಾಗಾಗಿ, ನಾನು ಇಡೀ ಸದನವನ್ನು ಒಕ್ಕೊರಲಿನಿಂದ ಅಥವಾ ಒಳ್ಳೆಯ ರೀತಿಯಲ್ಲಿ ನೋಡಬೇಕು ಎನ್ನುವ ಮನೋಭಾವ ಬರುತ್ತದೆ. ಆ ದೃಷ್ಟಿಯಲ್ಲಿ ಇನ್ನು ಮುಂದೆ ಯಾವತ್ತಿಗೂ ಸಹ ಸಭಾಪತಿ ಮತ್ತು ಉಪ ಸಭಾಪತಿ ಸ್ಥಾನಗಳು ಈ ಎರಡು ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗುವುದು ಸೂಕ್ತ ಎನ್ನುವುದು ನನ್ನ ವೈಯಕ್ತಿಕ ಭಾವನೆ. ಆ ನಿಟ್ಟಿನಲ್ಲಿ ಇವೊತ್ತಿನ ದಿವಸ ನಾನು ಮಾತನಾಡುವಂತಹ ಸಂದರ್ಭದಲ್ಲಿ ನಾನು ಏನಾದರೂ ಬೇರೆ ವಿಚಾರ ಮಾತನಾಡಿದೆ ಎಂದು ತಾವು ಅನ್ಯಥಾ ಭಾವಿಸಬಾರದು. ಸಭಾಪತಿಯವರಾದ ತಾವು 8 ಬಾರಿ ಶಾಸಕರಾದಂತಹವರು. ತಮ್ಮ ಒಳ್ಳೆಯ ಗುಣಗಳನ್ನು ನೋಡಿ, ನಿಮ್ಮ ಅವಿರತವಾದ ಸೇವೆಯನ್ನು ಗುರುತಿಸಿ, ಕಲ್ಲು-ಮುಳ್ಳಿನ ಹಾದಿಯಲ್ಲಿ ನೀವು ನಡೆದುಕೊಂಡ ಸಂದರ್ಭದಲ್ಲಿ ತಾವು ಮಾಡಿದಂತಹ ಅನೇಕ ಸಮಾಜಮುಖಿ ಒಳ್ಳೆಯ ಕಾರ್ಯಗಳಿಗೆ ನಾವೆಲ್ಲರೂ ಸೇರಿ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದೇವೆ ಎನ್ನುವ ವಿಚಾರವನ್ನು ಮತ್ತೊಮ್ಮೆ ನಾನು ಪುನರಾವರ್ತನೆ ಮಾಡಬೇಕಾಗುತ್ತದೆ.

ಅದೇ ರೀತಿಯಾಗಿ, ಶ್ರೀ ಎಂ.ಕೆ. ಪ್ರಾಣೇಶ್‌ರವರು ಸಹ ಉಪ ಸಭಾಪತಿಯವರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರೆ, ಬಹಳ ಸಂತೋಷವಾಗುತ್ತಿತ್ತು. ಹಾಗಾಗಿ, ಇವೊತ್ತಿನ ದಿವಸ ಅವರನ್ನು ಉಪ ಸಭಾಪತಿಯವರಾಗಿ ಆಯ್ಕೆ ಮಾಡಿದ್ದೇವೆ. ಅದರಂತೆ, ಅವರ ಜಿಲ್ಲೆಗೆ ಮತ್ತು ರಾಜ್ಯಕ್ಕೆ ನ್ಯಾಯ ಕೊಡತಕ್ಕಂತಹ ಕೆಲಸ ಅವರಿಂದ ಆಗಲಿ ಎಂದು ಈ ಸಂದರ್ಭದಲ್ಲಿ ಹೇಳಿ, ಮತ್ತೊಮ್ಮೆ ಅವರಿಗೆ ಶುಭ ಕೋರಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್ (ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೇ, ಪ್ರಾರಂಭಿಕವಾಗಿ ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಗೌರವಾನ್ವಿತ ಎಲ್ಲಾ ಮಂತ್ರಿಗಳು ಮತ್ತು ವಿಧಾನ ಪರಿಷತ್ತಿನ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತಾಪೂರ್ವಕವಾದ ನಮಸ್ಕಾರಗಳನ್ನು ನಾನು ತಿಳಿಸಬಯಸುತ್ತೇನೆ. ಎಲ್ಲರೂ ಸಹ ಅಭಿಮಾನದ ಮಾತುಗಳನ್ನು ಆಡಿ, ಸದನವನ್ನು ನಡೆಸುವಂತಹ ರೀತಿಗಳ ಬಗ್ಗೆ ತಮ್ಮ ಅನುಭವದ ಮೇಲೆ

ಮಾಹಿತಿಗಳನ್ನು ನಮಗೆ ಕೊಟ್ಟಿದ್ದಾರೆ. ಅದೇ ರೀತಿ, ನನಗೆ ಇನ್ನು ಹೆಚ್ಚಿನ ಖುಷಿಯಾದ ವಿಚಾರವೇನೆಂದರೆ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಭಾಪತಿಯವರಾಗಿರುವಂತಹ ಸಂದರ್ಭದಲ್ಲಿ ಈ ಅವಕಾಶ ಸಿಕ್ಕಿರುವುದಾಗಿದೆ. ಏಕೆಂದರೆ, ತಾವು 8 ಬಾರಿ ಈ ಸದನವನ್ನು ಪ್ರತಿನಿಧಿಸಿ ಅನುಭವದ ಆಧಾರದ ಮೇಲೆ ಈ ಸದನವನ್ನು ನಡೆಸಲು ತಾವು ಅರ್ಹರಿದ್ದೀರಿ, ತಮ್ಮ ಕೈ ಕೆಳಗೆ ಕೆಲಸ ಮಾಡುವಂತಹ ಅವಕಾಶ ಸಿಕ್ಕಿರುವುದು ದೊಡ್ಡದು ಎಂದು ನಾನು ಭಾವಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿಚಾರಗಳನ್ನು ಮಾತನಾಡಿದ್ದಾರೆ. ಅದೇ ರೀತಿ, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಎಸ್.ಎಲ್. ಭೋಜೇಗೌಡ ಹಾಗೂ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು ಮಾತನಾಡಿದ್ದಾರೆ. ಆ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಒಂದು ವಿಷಯವಂತೂ ಸತ್ಯ. ನಾನು ಪಕ್ಷ ಮತ್ತು ಸಂಘಟನೆಯಲ್ಲಿ ಬೆಳೆದಂತಹವನು. ಬಹುಶಃ ಆ ಸಂದರ್ಭಗಳಲ್ಲಿ ನಾವುಗಳು ಸಂಘಟನೆಯನ್ನು ಬಲಪಡಿಸುವಂಥದ್ದು, ಸಾರ್ವಜನಿಕರಿಗೆ ಸಹಕಾರ ನೀಡುವಂಥದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಕೆಲಸಗಳನ್ನೇ ಮಾಡಿಕೊಂಡು ಬಂದಿರುವಂಥದ್ದು. ತತ್ವ-ಸಿದ್ಧಾಂತಗಳ ಅಡಿಯಲ್ಲಿ ಬೆಳೆದುಕೊಂಡು ಬಂದಂತಹವರು. ಅದಾದ ನಂತರ, ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಈಗ ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಆಯ್ಕೆ ಆಗಿದ್ದರಲ್ಲಿ, ನನ್ನೆಲ್ಲಾ ಹಿರಿಯರ ಪ್ರೀತಿ ವಿಶ್ವಾಸದ ಅಡಿಯಲ್ಲಿ ಈ ಜವಾಬ್ದಾರಿ ನನಗೆ ಸಿಕ್ಕಿದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ನನಗಿಂತಲೂ ಅರ್ಹರಾದ ವ್ಯಕ್ತಿಗಳು ಸಾಕಷ್ಟು ಜನ ನನ್ನ ಪಕ್ಷದಲ್ಲಿ ಇದ್ದರೂ ಸಹ, ಅವರೆಲ್ಲರೂ ಯಾವತ್ತಿಗೂ ಸಹ ಒಂದು ಅಪಸ್ವರ ಮಾತನಾಡದೇ, "ಇಲ್ಲ, ನಿನಗೆ ಸಿಕ್ಕಿದ ಅವಕಾಶದಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದೀಯಾ. ಹಾಗಾಗಿ, ನೀನೇ ಉಪ ಸಭಾಪತಿಯಾಗಬೇಕು" ಎಂದು ನನ್ನನ್ನು ಆಯ್ಕೆ ಮಾಡಿದ್ದಾರೆ. ಜೊತೆಗೆ, ಉಪ ಸಭಾಪತಿ ಸ್ಥಾನಕ್ಕೆ ಬೇರೆ ಸದಸ್ಯರ ಹೆಸರನ್ನು ಸಹ ತರದೇ ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ನಾನು ಅವರಿಗೆ ಗೌರವಯುತವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಯಾವುದೇ ಕಾರಣಕ್ಕೂ ನಾನು ನನ್ನ ಪಕ್ಷದ ಸಿದ್ಧಾಂತದ ಅಡಿಯಲ್ಲಿ ಬಂದಿದ್ದರೂ ಸಹ, ನನ್ನ ಸ್ಥಾನಕ್ಕೆ ಮತ್ತು ಈ ಸದನಕ್ಕೆ ಎಲ್ಲಿಯೂ ಸಹ ಚ್ಯುತಿ ಬಾರದ ರೀತಿಯಲ್ಲಿ ನಾನು ನಡೆದುಕೊಳ್ಳುತ್ತೇನೆ. ಏಕೆಂದರೆ, ವಿಧಾನ ಪರಿಷತ್ತಿಗೆ ಇತಿಹಾಸ ಇದೆ. ಆ ಇತಿಹಾಸಕ್ಕೆ ಯಾವತ್ತೂ ಕಪ್ಪು ಚುಕ್ಕೆಗಳು

ಬರಬಾರದು. ನಾವು ಇಲ್ಲಿದ್ದಂತಹ ಸಂದರ್ಭದಲ್ಲಿ ಎಲ್ಲಿಯಾದರೂ ಆ ಕಪ್ಪು ಚುಕ್ಕೆಯನ್ನು ತಂದರೆ, ಶಾಶ್ವತವಾಗಿ ಆ ಕಪ್ಪು ಚುಕ್ಕೆ ಉಳಿಯುತ್ತದೆ. ಅಲ್ಲದೇ, ಆ ಕಪ್ಪು ಚುಕ್ಕೆ ತಂದಂತಹವರ ಹೆಸರುಗಳು ಸಹ ಶಾಶ್ವತವಾಗಿ ಉಳಿಯುತ್ತದೆ. ಆದುದರಿಂದ, ಇಲ್ಲಿರುವಂತಹ ವ್ಯವಸ್ಥೆಯ ದೃಷ್ಟಿಯಿಂದ, ವಿಧಾನ ಪರಿಷತ್ತಿನ ನಿಯಮಾವಳಿಗಳ ಅಡಿಯಲ್ಲಿ ಯಾವ ಅವಕಾಶವಿದೆ, ಆ ಕೆಲಸಗಳನ್ನು ನಾನು ಮಾಡುತ್ತೇನೆ. ಅದರಲ್ಲಿ ಸಂಪೂರ್ಣವಾದ ವಿಶ್ವಾಸವನ್ನು ತಾವೆಲ್ಲರೂ ಇಡಬೇಕಾಗುತ್ತದೆ. ಅದೇ ರೀತಿ, ಕೆಲವು ಸಂದರ್ಭದಲ್ಲಿ ವಿಚಾರಗಳು ಬಂದಾಗ, ಮಾನ್ಯ ಸಭಾಪತಿಯವರು ನಿಯಮಾವಳಿಗಳ ಅಡಿಯಲ್ಲಿ ಕೆಲಸ ಮಾಡಬೇಕೆನ್ನುವಂತಹ ಮಾಹಿತಿಗಳನ್ನು ಎಲ್ಲರಿಗೂ ಕೊಟ್ಟಂತಹ ಸಂದರ್ಭದಲ್ಲಿ ಅದನ್ನು ಮೀರಿ ವರ್ತನೆ ಮಾಡುವಂಥದ್ದು ಕೂಡ ಈ ಸದನದಲ್ಲಿ ಮಾನ್ಯ ಸದಸ್ಯರು ಮಾಡುತ್ತಾರೆ. ದಯಮಾಡಿ, ನಾನು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ನಿಯಮಾವಳಿಗಳ ಒಳಗೆ ಇರುವಂತಹ ವ್ಯವಸ್ಥೆಯನ್ನು ಮೀರಿ, ಯಾರೂ ಸಹ ಹೋಗಬಾರದು. ನಾವು ಯಾರು ಕೂಡ ಇಲ್ಲಿ ಶಾಶ್ವತರಾಗಿ ಇರುವಂತಹವರು ಅಲ್ಲ. ಮುಂದಿನ ಯುವ ಪೀಳಿಗೆ ಈ ವಿಧಾನ ಪರಿಷತ್ತಿಗೆ ಬರುವಂಥದ್ದು ಇದೆ. ಅವರಿಗೆ ನಾವು ಮಾರ್ಗದರ್ಶಕರಾಗಿ ಇರಬೇಕೇ ವಿನಃ, ಅವರಿಗೆ ಮಾರ್ಗವನ್ನು ದಿಕ್ಕು ತಪ್ಪಿಸುವಂತಹ ಕೆಲಸ ಆಗಬಾರದು ಎನ್ನುವುದು ನನ್ನ ಭಾವನೆ. ಏಕೆಂದರೆ, ನಾನು ಆಗಲೇ ಹೇಳುತ್ತಿದ್ದೆನು. ಈಗಾಗಲೇ 38,39,40 ಮತ್ತು 42 ವರ್ಷಗಳ ಅನುಭವವುಳ್ಳ ವಿಧಾನ ಪರಿಷತ್ತಿನ ಸದಸ್ಯರು ಇವೊತ್ತಿನ ದಿವಸ ಈ ಸದನದಲ್ಲಿದ್ದಾರೆ. ನಮ್ಮ ನಡವಳಿಕೆ ಮತ್ತು ನಡತೆಯ ಆಧಾರದ ಮೇಲೆ ಇತರೆ ಸದಸ್ಯರು ನಡವಳಿಕೆಯನ್ನು ಮಾಡುವುದಕ್ಕೆ ಹೋಗುತ್ತಾರೆ. ಹಾಗಾಗಿ, ನಾವು ಅವರಿಗೆ ಮಾರ್ಗದರ್ಶಕರಾಗುವಂತಹ ಇರುವಂತಹ ವ್ಯವಸ್ಥೆ ಆಗಬೇಕು. ತಮ್ಮ ಹಿರಿತನದ ಜೊತೆಗೆ ನಾನು ಸಹ ಸೇರಿ ಈ ಸದನದಲ್ಲಿ ಇರುವಷ್ಟು ಸಮಯವನ್ನು ಇತಿಹಾಸದ ಪುಟಗಳಲ್ಲಿ ಸೇರಿಸುವಂತಹ ಒಂದು ವ್ಯವಸ್ಥೆಯನ್ನು ಮತ್ತು ಒಳ್ಳೆಯ ವಿಚಾರಗಳನ್ನು ಮಂಡಿಸುವಂತಹ ಕೆಲಸಗಳನ್ನು ಮಾಡೋಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವೆಲ್ಲರೂ ಸಹ ನನ್ನ ಮೇಲೆ ವಿಶ್ವಾಸ ಇಟ್ಟು, ಎರಡನೆ ಬಾರಿ ನನ್ನನ್ನು ಉಪ ಸಭಾಪತಿ ಸ್ಥಾನದಲ್ಲಿ ಕೂರಿಸಿದ್ದೀರಿ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದೇನೆಂದರೆ, ಇವೊತ್ತಿಗೆ ನನ್ನ 34 ವರ್ಷ ನನ್ನ ರಾಜಕಾರಣ ಜೀವನ ಆಗಿರುತ್ತದೆ. ಆ ರಾಜಕೀಯದ ಜೀವನದೊಳಗೆ ಯಾರು ಸಹ ಅಪಾರ್ಥ

ಮಾಡಿಕೊಳ್ಳುವಂಥದ್ದು ಬೇಡ. ಆದರೆ, ನನ್ನನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಳೆಸಿದೆ. ಆ ಸಂಘದ ಬಗ್ಗೆ ಕೆಲವರಿಗೆ ಗೊತ್ತಿರುವುದಿಲ್ಲ. ಅದು ಗೊತ್ತಿಲ್ಲದೇ ವಿಚಾರಗಳನ್ನು ಮಾತನಾಡುತ್ತಾರೆ. ಆದರೆ, "ಯಾವತ್ತೂ ಜಾತಿಯನ್ನು ಮಾಡಬಾರದು, ಎಲ್ಲರನ್ನೂ ಸರಿ-ಸಮನಾಗಿ ಕಾಣಬೇಕು, ಯಾವುದೇ ವ್ಯಕ್ತಿ ಎಷ್ಟೇ ಉದ್ವೇಗವಾಗಿ ಮಾತನಾಡಿದರೂ ಸಹ, ನೀನು ಉದ್ವೇಗಕ್ಕೆ ಒಳಗಾಗಬಾರದು. ತಾಳ್ಮೆಯನ್ನು ವಹಿಸಬೇಕು. ಈ ಸಮಾಜಕ್ಕೆ ಮತ್ತು ದೇಶವನ್ನು ಕೊಡುಗೆಯನ್ನು ಕೊಡಬೇಕು" ಎನ್ನುವಂತಹ ಹೇಳಿಕೆಯನ್ನು ಹೇಳಿ, ನಮ್ಮನ್ನು ಸ್ವಯಂಸೇವಕ ಸಂಘ ಬೆಳೆಸಿರುತ್ತದೆ. ಆ ಸಂಘದ ಬಗ್ಗೆ ನನಗೆ ಹೆಮ್ಮೆ ಇದೆ. ಹಾಗಾಗಿ, ಅದರ ಅಡಿಯಲ್ಲಿಯೇ ನಾನು ಕೂಡ ನಡೆದುಕೊಂಡು ಬರುತ್ತೇನೆ ಮತ್ತು ಹೋಗುತ್ತೇನೆ. ಜೊತೆಗೆ, ಯಾವತ್ತೂ ಸಹ ಈ ಸ್ಥಾನಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಡೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಮತ್ತೊಮ್ಮೆ ತಮಗೆಲ್ಲರಿಗೂ ನನ್ನ ಪ್ರೀತಿ ಪೂರ್ವಕವಾದ ನಮಸ್ಕಾರಗಳನ್ನು ತಿಳಿಸುತ್ತಾ, ನಾನು ನಿಮ್ಮಲ್ಲಿ ಒಬ್ಬನು ಎನ್ನುವ ಭಾವನೆಯಲ್ಲಿ ನಾನು ಕೊನೆಯವರೆಗೂ ಇರುತ್ತೇನೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

04. **ಪ್ರಶ್ನೋತ್ತರಗಳು**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 638**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಇದುವರೆವಿಗೂ ಬಹಿರಂಗಗೊಳಿಸದಿರುವ ಬಗ್ಗೆ ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಕಳೆದ ಎರಡು ವರ್ಷದ ಹಿಂದೆ ಯಾವ ಉತ್ತರ ನೀಡಲಾಗಿತ್ತೋ, ಅದೇ ಉತ್ತರವನ್ನು ಈಗಲೂ ಸಹ ನೀಡಿದ್ದಾರೆ. ಆದರೆ, ನಮಗೆ ಬೇಕಾಗಿರುವುದು 162 ಕೋಟಿ ರೂಪಾಯಿ ಹಣವನ್ನು ಸರ್ಕಾರ ಖರ್ಚು ಮಾಡಿ, ಸುಮಾರು 7 ಕೋಟಿ ಜನಸಂಖ್ಯೆಯ ಜಾತಿ ಗಣತಿ ಮಾಡಿದಂತಹ ಸಂದರ್ಭದಲ್ಲಿ ಅದರ ವರದಿಯನ್ನು ಬಹಿರಂಗಗೊಳಿಸದೇ, ಕೇವಲ ದಿನಗಳನ್ನು ಮುಂದೂಡುಕೊಂಡು ಹೋಗುವುದಾದರೆ, ಇದನ್ನು ಕೇಳುವುದಕ್ಕೆ ನಮಗೆ ಹಕ್ಕಿಲ್ಲವೇ? ನಮ್ಮ ನಮ್ಮ ಸಮಾಜದಲ್ಲಿ ಎಷ್ಟು ಜನಸಂಖ್ಯೆ ಇದೆ ಎಂಬುದು ನಮಗೆ ಗೊತ್ತಾಗುವುದು ಬೇಡವೇ?

(ಮುಂದು)

(1145) 23.12.2022 12.10 YL-AK **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ಮುಂದು):-**

197 ಜಾತಿಗಳಲ್ಲಿರುವ ಹಿಂದುಳಿದ ವರ್ಗಗಳ ಜಾತಿಗಳನ್ನು ಎಷ್ಟು ನಿರ್ಲಕ್ಷ್ಯವಾಗಿ ಕಾಣುತ್ತಿದ್ದಾರೆಂದರೆ, ಯಾವುದೇ ಸಮಾಜದಲ್ಲಿ ಹಿಂದುಳಿದ ವರ್ಗಗಳಲ್ಲಿ ಜನಸಂಖ್ಯೆ ಇಲ್ಲವೆಂಬ ಕಾರಣದಿಂದಾಗಿ ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದಾರೆ. ಸಾಮಾಜಿಕ ನ್ಯಾಯದಿಂದ ಅನ್ಯಾಯಕ್ಕೆ ಒಳಪಟ್ಟಿದ್ದಾರೆ. ಅವರಿಗೆ ನ್ಯಾಯ ಸಿಗಬೇಕೆಂದರೆ ಈ ರಾಜ್ಯದಲ್ಲಿರುವಂಥ 7 ಕೋಟಿ ಜನಸಂಖ್ಯೆಯಲ್ಲಿ ಯಾವ್ಯಾವ ಸಮಾಜದವರು ಎಷ್ಟೆಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ? ನಾನು ಇವತ್ತು 40 ಲಕ್ಷ ಹಿಂದುಳಿದ ವರ್ಗಗಳ

ಜನಸಂಖ್ಯೆ ಇದೆ ಎಂದು ಹೇಳುತ್ತಿದ್ದರೆ, ಕುರುಬ ಸಮಾಜ 80 ಲಕ್ಷ ಜನಸಂಖ್ಯೆಯನ್ನು ಹೊಂದಿದೆ ಎಂದು ಹೇಳುತ್ತಿದೆ. ನಿನ್ನೆ ದಿವಸ ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಬಸವನಗೌಡ ಪಾಟೀಲ್ ಯತ್ನಾಲ್‌ರವರು "ಬಹಿರಂಗ ಸಭೆಯನ್ನು ಯಶಸ್ವಿಯಾಗಿ ಮಾಡಿ, ಒಂದು ಕೋಟಿಗಳಷ್ಟು ಪಂಚಮಶಾಲಿ ಸಮಾಜದವರಿದ್ದೇವೆ" ಎನ್ನುವಂಥ ಮಾತನ್ನು ಹೇಳಿದ್ದಾರೆ. ಅಲ್ಲಿಗೆ ಕರ್ನಾಟಕದ ಜನಸಂಖ್ಯೆ ಸುಮಾರು 15 ಕೋಟಿಗೆ ದಾಟುತ್ತದೆ. ಜನಸಂಖ್ಯೆಗೆ ಅನುಗುಣವಾಗಿಯಾದರೂ ನಮಗೆ ಸರ್ಕಾರದ ಸವಲತ್ತು, ಸಾಮಾಜಿಕ ನ್ಯಾಯ ಸಿಗಬೇಕಲ್ಲವೇ? ಜಾತಿವಾರು ಜನಗಣತಿಯನ್ನು ಸರ್ಕಾರದವರು ಬಹಿರಂಗಗೊಳಿಸದೇ ಇರುವುದಕ್ಕೆ ಕಾರಣವೇನು? ಹೆಚ್ಚು ಜನಸಂಖ್ಯೆ ಇರುವ ಸಮಾಜದವರು ಕಡಿಮೆ ಸಂಖ್ಯೆಯಲ್ಲಿ ಬರುತ್ತಾರೆ ಎಂಬ ಭಯವೇ ಅಥವಾ ಕಡಿಮೆ ಜನಸಂಖ್ಯೆ ಇರುವ ಸಮಾಜದವರು ಹೆಚ್ಚು ಜನಸಂಖ್ಯೆ ಆಗಿ ಹೋಗುತ್ತದೆ ಎಂಬ ಭಯವೇ? ಇದರ ಹಿನ್ನೆಲೆ ಏನೆಂಬುದು ಗೊತ್ತಾಗುತ್ತಿಲ್ಲ. ಕಳೆದ ಬಾರಿ ಸಹ ಮಾನ್ಯ ಸಭಾನಾಯಕರು ಆಯೋಗದ ವರದಿ ಬಂದು computerize ಆಗಿದೆ, ಆಯೋಗದ ಅಧ್ಯಕ್ಷರು ಬಂದ ಕೂಡಲೇ ಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೆ, ಅದನ್ನು ಬಹಿರಂಗಪಡಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದರು. ಈಗಾಗಲೇ ಆಯೋಗದ ಅಧ್ಯಕ್ಷರು ಬಂದು ಸುಮಾರು ಒಂದೂವರೆ ವರ್ಷ ಕಳೆದಿವೆ. ಆಯೋಗದ ಅಧ್ಯಕ್ಷರು ಏನು ಮಾಡುತ್ತಿದ್ದಾರೆ ಎಂಬುದು ಸಹ ನಮಗೆ ಗೊತ್ತಿಲ್ಲ. ಹಿಂದುಳಿದ ವರ್ಗಗಳಲ್ಲಿ ಕುಲಕಸುಬು ನಂಬಿಕೊಂಡು ಜೀವನ ಮಾಡುವಂಥ ಸಮಾಜದವರು ಕೆಳಹಂತಕ್ಕೆ ಹೋಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ವಿಶ್ವಕರ್ಮ ಸಮಾಜದ 5 ಕಸುಬುಗಳು ಜಾಗತಿಕ ವ್ಯಾಪಾರೀಕರಣ ಏನಿದೆ, ಅದರಿಂದ ಮುಂದೆ ಬರಲು ಸಾಧ್ಯವಾಗುತ್ತಿಲ್ಲ, ಸರ್ಕಾರದ ಸವಲತ್ತು ನಮಗೆ ಸಿಗುತ್ತಿಲ್ಲ. ಅದರ ಬಗ್ಗೆ ಕೇಳಿದರೆ ಎಷ್ಟು ಜನಸಂಖ್ಯೆಯನ್ನು ಹೊಂದಿದ್ದೀರಿ ಎಂದು ಕೇಳುತ್ತಾರೆ. ನಿಖರವಾಗಿ ಏನಾದರೂ ಹೇಳಿದರೆ ನಗುತ್ತಾರೆ.

**ಸಭಾಪತಿಯವರು:-** ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಯಾವಾಗ ವರದಿಯನ್ನು ಮಂಡಿಸುತ್ತಾರೆ ಎಂಬುದನ್ನು ಹೇಳಿದರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದು ಕೇವಲ ವಿಶ್ವಕರ್ಮ ಸಮಾಜದವರಿಗೆ ಮಾತ್ರ ಸಂಬಂಧಪಟ್ಟಿಲ್ಲ. ಬಹಳಷ್ಟು ಸಮಾಜದವರಿಗೂ ಸಂಬಂಧಿಸಿದ್ದು ಅದರ ಬಗ್ಗೆ ಸಹ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಹೌದು. ಬಹಳಷ್ಟು ಸಮಾಜದವರಿಗೂ ಸಂಬಂಧಪಟ್ಟಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸಹ ಮಾನ್ಯ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ಈ ಪ್ರಶ್ನೆ ಬಗ್ಗೆ ಕೇಳಿದ್ದು, ಅವರ ಪ್ರಶ್ನೆಯಲ್ಲಿ ಅರ್ಥ ಸಹ ಇದ್ದು, ಚರ್ಚೆ ಸಹ ಆಗಿರುವುದು ಉಂಟು.  ಹಿಂದುಳಿದ ವರ್ಗದ ಆಯೋಗವು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದರಿಂದ 2015ರಲ್ಲಿ ವರದಿಯನ್ನು ಸಿದ್ಧಪಡಿಸಿದ್ದು, ಅದನ್ನು ಬಿಡುಗಡೆ ಮಾಡಬೇಕೆಂಬುದಾಗಿದೆ.

**ಸಭಾಪತಿಯವರು:-** ಹೌದು. ಅದೇ ಉತ್ತರವನ್ನು ನೀಡಿದ್ದೀರಿ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸಂಬಂಧ ನಾನು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ಈ ಹಿಂದೆ ಆಯೋಗ ರಚನೆಯಾಗಿರಲಿಲ್ಲ, ಹೊಸ ಆಯೋಗ ರಚನೆಯಾಗುತ್ತಿದ್ದು, ಅದನ್ನು ನಮ್ಮ ಸರ್ಕಾರ ಒಪ್ಪಿದ ತಕ್ಷಣ ಅದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿರುವುದು ನಿಜ.  ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದಲ್ಲಿ ಹಿಂದುಳಿದ ವರ್ಗದ ಆಯೋಗವು ಕೆಲಸ ಮಾಡುತ್ತಿದೆ. ಅವರು ನೀಡಿರುವಂಥ ಮಾಹಿತಿಯ ಪ್ರಕಾರ ಸದಸ್ಯ ಕಾರ್ಯದರ್ಶಿಯವರ ಸಹಿ ಸಹ ಆ ವರದಿಯಲ್ಲಿ ಇರಲಿಲ್ಲ, ಆ ಹಿನ್ನೆಲೆಯಲ್ಲಿ ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಸರ್ಕಾರಕ್ಕೆ ಸಲ್ಲಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಸರ್ಕಾರದ ಹಂತಕ್ಕೆ ಬಂದ ತಕ್ಷಣ ಕ್ರಮ ಜರುಗಿಸಲಾಗುವುದು.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಹೆಚ್ಚು ಪ್ರಶ್ನೆಯನ್ನು ಕೇಳುವುದಿಲ್ಲ. ನಾನು ಈ ಒಂದು ಪ್ರಶ್ನೆಗೆ ಮಾತ್ರ ಉತ್ತರ ಕೇಳುತ್ತಿದ್ದು, ಮಾನ್ಯ ಸಭಾನಾಯಕರು ಸರಿಯಾದ ಉತ್ತರವನ್ನು ನೀಡಲಿಲ್ಲವೆಂದರೆ, ನಾನು ಬಾವಿಗೆ ಬಂದು ಧರಣಿ ನಿರತನಾಗಬೇಕಾಗುತ್ತದೆ. ದಯವಿಟ್ಟು ತಾವು ಸಹ ಕ್ಷಮಿಸಬೇಕು. ಸುಮ್ಮನೆ ತಾಂತ್ರಿಕ ಸಮಸ್ಯೆ ಬಗ್ಗೆ ಹೇಳಿ ಸದನವನ್ನು ದಿಕ್ಕು ತಪ್ಪಿಸುವಂಥ ಕೆಲಸ ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ದಿಕ್ಕು ತಪ್ಪಿಸುವಂಥ ವಿಚಾರ ಏನಿಲ್ಲ. ಮಾನ್ಯ ಸದಸ್ಯರು ಹಿಂದುಳಿದ ವರ್ಗದವರ ಬಗ್ಗೆ ಬಹಳ ಕಾಳಜಿಯುಳ್ಳವರಾಗಿದ್ದು, ನಿರಂತರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸದ್ಯದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರನ್ನು ಭೇಟಿ ಮಾಡಿ, ಇದಕ್ಕೆ ಒಂದು ಅಂತಿಮ ರೂಪ ನೀಡುವಂಥ ಕೆಲಸ ಮಾಡುತ್ತೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಯಾವಾಗ ಮಾಡುತ್ತಾರೆ ಎಂಬುದನ್ನು ಹೇಳಲಿ. ಮುಂದಿನ ವಾರ ಅಧಿವೇಶನ ಮುಗಿಯುವುದರೊಳಗೆ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ವರ್ಷಗಳಿಂದ ಇರುವಂಥ ಸಮಸ್ಯೆ. 2015ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಸರ್ಕಾರವು ಸಹ ಇದರ ಬಗ್ಗೆ ಅಧ್ಯಯನ ಮಾಡಿ, ಹಾಗೆಯೇ ಇಟ್ಟುಕೊಂಡಿತ್ತು. ಅದು ಏನೇ ಇದ್ದರೂ ಸಹ ಇದಕ್ಕೆ ಒಂದು ರೂಪ ನೀಡುವ ಅವಶ್ಯಕತೆ ಇದೆ. ಆ ಹಿನ್ನೆಲೆಯಲ್ಲಿ ಸದ್ಯದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರನ್ನು ಭೇಟಿ ಮಾಡಿ, ಮಾನ್ಯ ಸದಸ್ಯರು ಹೇಳಿರುವಂಥ ಈ ಸಮಸ್ಯೆಯನ್ನು ಪರಿಹರಿಸುತ್ತೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, 197 ಜಾತಿಗಳಲ್ಲಿ ಮಾನ್ಯ ಸಭಾನಾಯಕರು ಸಹ ಸೇರುತ್ತಾರೆ. ಅವರು ಏನೋ 07 ಮಂದಿ ಶಾಸಕರಿದ್ದಾರೆ. ಹಲವಾರು ಮಂದಿ ಕುಲಕಸುಬು ನಂಬಿಕೊಂಡು ಬದುಕುತ್ತಿದ್ದು, ಇದಕ್ಕೆ ಏನಾದರೂ ಒಂದು ಯೋಜನೆ ಇದೆಯೇ

ಎಂಬುದನ್ನು ಮಾನ್ಯ ಸಭಾನಾಯಕರು ಯೋಚನೆ ಮಾಡಿ ಹೇಳಬೇಕು. ನಾವೆಲ್ಲರೂ ಬೀದಿಯಲ್ಲಿ ನಿಂತಿದ್ದೇವೆ. ಯಾವ ಸಮಾಜದವರು ದೇವರ ಮೂರ್ತಿಗಳನ್ನು ಮಾಡಿಕೊಡುತ್ತಿದ್ದರೊ ಆ ಸಮಾಜದವರೆಲ್ಲಾ ಇವತ್ತು ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿದ್ದಾರೆ. ನಮಗೆ ಯಾರು ರಕ್ಷಣೆಯನ್ನು ನೀಡಬೇಕು? ಸಂವಿಧಾನ ನೀಡಿರುವುದನ್ನು ಕೊಡುವುದಿಲ್ಲವೆಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ನೀಡಿರುವಂಥ ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. 2015 ರಲ್ಲಿ ಶ್ರೀ ಹೆಚ್.ಕಾಂತರಾಜುರವರನ್ನು ನೇಮಕ ಮಾಡಿ, ಇದರ ವರದಿಯನ್ನು ಮಾಡಬೇಕೆಂದು ಜನಗಣತಿಯಾಗಿರುತ್ತದೆ ಮತ್ತು ಆರ್ಥಿಕ, ಶೈಕ್ಷಣಿಕ ವಿಚಾರದ ಬಗ್ಗೆ ಅಧ್ಯಯನವಾಗಿರುತ್ತದೆ. ಜೊತೆಗೆ ಅಂದಿನ ಸರ್ಕಾರವು ಸುಮಾರು ರೂ.162.00 ಕೋಟಿಗಳಷ್ಟು ಖರ್ಚು ಸಹ ಮಾಡಿದೆ. ನಾನು ಸಹ ಇದರ ಬಗ್ಗೆ ಆ ಸಂದರ್ಭದಲ್ಲಿ ಪ್ರಶ್ನೆಯನ್ನು ಕೇಳಿದ್ದು, ಬೇರೆ ಬೇರೆ ಕಾರಣಗಳಿಂದ ಅಂದಿನ ಸರ್ಕಾರ ವರದಿ ನೀಡಲಿಲ್ಲ. ಈಗ ಹಿಂದುಳಿದ ವರ್ಗಗಳ ಆಯೋಗದ ನೇತೃತ್ವದಲ್ಲಿ ಪರಿಶೀಲನೆಯಾಗುತ್ತಿದ್ದು, ಅವರ ಪರಿಶೀಲನೆ ಮುಗಿದ ತಕ್ಷಣ ಸರ್ಕಾರಕ್ಕೆ ವರದಿಯನ್ನು ಒಪ್ಪಿಸುತ್ತಾರೆ. ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ವರದಿ ಕೊಟ್ಟಿದ್ದಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಏನು ವರದಿ ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರೊಂದಿಗೆ ಚರ್ಚಿಸಿ ಅಂತಿಮ ರೂಪ ನೀಡುತ್ತೇವೆ. ಆದಷ್ಟು ಬೇಗ ವರದಿಯನ್ನು ಬಿಡುಗಡೆ ಮಾಡುತ್ತೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗವಾದರೂ ಹೇಳಬೇಕು. ಏಕೆಂದರೆ, ನನಗೆ ತುಂಬಾ ಸತಾಯಿಸುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಆಯೋಗದ ವರದಿ ಏನಿದೆ, ಅದನ್ನು ಜಾರಿಗೊಳಿಸಲು ಏತಕ್ಕಾಗಿ ಮೀನಾ ಮೇಷ ಎಣಿಸುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಮಾನ್ಯ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ನಮ್ಮ ಪಕ್ಷವನ್ನು ಬಿಟ್ಟು ಹೋಗಲು ಕಾರಣವೇನೆಂದರೆ, ಹಿಂದುಳಿದ ವರ್ಗದವರಿಗೆ ನ್ಯಾಯ ಸಿಗಲಿಲ್ಲ ಎನ್ನುವಂಥದಾಗಿತ್ತು. ಆದ್ದರಿಂದ ಮಾನ್ಯ ಸದಸ್ಯರ ಕಳಕಳಿಯನ್ನು ನಾವೆಲ್ಲರೂ ಸಹ ಅರ್ಥ ಮಾಡಿಕೊಳ್ಳಬೇಕಾಗಿದೆ. Census ಏತಕ್ಕಾಗಿ ಮಾಡುತ್ತೇವೆ? ಎಸ್.ಸಿ./ಎಸ್.ಟಿ., ಓ.ಬಿ.ಸಿ. ಅಲ್ಪಸಂಖ್ಯಾತರಿಗೆ ಇಷ್ಟು ಪರ್ಸೆಂಟ್ ಎಂದು ಸರ್ಕಾರದವರು ಹಲವಾರು ಕಾರ್ಯಕ್ರಮಗಳನ್ನು ತರುತ್ತಾರೆ. ಆದರೆ, ನಿಗಮಗಳನ್ನು ರಚನೆ ಮಾಡಿ, ಯಾವ್ಯಾವ ನಿಗಮಗಳಿಗೆ ಎಷ್ಟೆಷ್ಟು ಹಣವನ್ನು ನೀಡುತ್ತಿದ್ದಾರೆ, ಶೂದ್ರ ಮತ್ತು ದಲಿತ ಸಮುದಾಯದವರಿಗೆ ಎಷ್ಟೆಷ್ಟು ಹಣವನ್ನು ನೀಡಿದ್ದಾರೆ ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿನ್ನೆ ದಿವಸ ಸಹ ನಾನು ಬೆಂಗಳೂರಿನಲ್ಲಿರುವಂಥ ಖಜಾನೆ ಮತ್ತು ದೆಹಲಿಯಲ್ಲಿರುವಂಥ ಖಜಾನೆ ತುಂಬ ಬೇಕಾದರೆ 197 ಕಾಯಕ ಸಮಾಜದವರೇನಿದ್ದಾರೆ, ಅವರು ರಕ್ತ, ಬೆವರನ್ನು ಸುರಿಸಿ ಆ ಖಜಾನೆಗಳನ್ನು ತುಂಬಿಸಿದ್ದಾರೆ. ಆ ಹಣವನ್ನು ಸರಿಯಾದ ರೀತಿಯಲ್ಲಿ ಜನ ಕಲ್ಯಾಣಕೋಸ್ಕರ ಸೇರುವಂತೆ ಮಾಡಬೇಕೆಂದು ಇದ್ದರೆ ಯಾವ ಜಾತಿಯವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ, ಅಂಥವರನ್ನು ಗುರುತಿಸಿ ಆ ಹಣವನ್ನು ನೀಡಬೇಕಾಗುತ್ತದೆ. ಆದರೆ, ಆ ರೀತಿ ಆಗುತ್ತಿಲ್ಲ. ಸಂವಿಧಾನದ ತಿರುಳು ಏನಿದೆ, ಅದೆಲ್ಲವನ್ನೂ ಸಹ ಗಾಳಿಗೆ ತೂರಿದ್ದಾರೆ. Constituent Assembly ನಲ್ಲಿ debate ಆದಾಗ ಮೀಸಲಾತಿ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿಸಿದ್ದು, ಸಾಮಾಜಿಕವಾಗಿ, ಶೈಕ್ಷಣಿಕವಾಗಿ,...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಯಾವಾಗ ಕೊಡುತ್ತಾರೆ ಎಂಬುದನ್ನು ಅಷ್ಟೇ ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಕರ್ನಾಟಕ ರಾಜ್ಯದಲ್ಲಿರುವಂಥ ಬಹುಸಂಖ್ಯಾತರ ಸಮಸ್ಯೆಯಾಗಿದ್ದು, ಒಂದೆರಡೂ ನಿಮಿಷ ಮಾತನಾಡಲು ಅವಕಾಶ ನೀಡಿ. ಏಕೆಂದರೆ ಮಾನ್ಯ ಸಭಾನಾಯಕರು ವರದಿಯನ್ನು ಕೊಡುವುದಿಲ್ಲ,

ನಮಗೆ ಅವರ ಉತ್ತರ ಚೆನ್ನಾಗಿ ಗೊತ್ತಿದೆ. ಅವರನ್ನು ಏನಾದರೂ ಕೇಳಿದರೆ, "ನಾವುಗಳೆಲ್ಲಾ ಹಿಂದೂಗಳಾಗಿದ್ದು, ನಾವೆಲ್ಲಾ ಒಂದೇ ಅದರಲ್ಲಿ ಯಾವುದೇ ಭೇದ ಭಾವ ಇಲ್ಲ" ಎನ್ನುವಂಥ ಮಾತನ್ನು ಹೇಳುತ್ತಾರೆ. ಆದ್ದರಿಂದ ಎಲ್ಲಿತನಕ ಜಾತಿ ವ್ಯವಸ್ಥೆ ಇರುತ್ತದೆ, ಅಲ್ಲಿಯವರೆಗೂ ಭೇದ ಭಾವ ಇರುವುದಿಲ್ಲ. ನಿನ್ನೆ ದಿವಸ ಸಹ ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ನಮ್ಮದ್ದು ದೊಡ್ಡ ಸಮುದಾಯವಾಗಿದ್ದು, ನಾವು ಸಹ ಜೋರಾಗಿ ಇದ್ದೇವೆ ಎಂದು ತೋರಿಸಿದ್ದರು. ಅದಕೋಸ್ಕರ ಏನಿದೆ, ... ಶ್ರೀ ಹೆಚ್.ಕಾಂತರಾಜುರವರ ವರದಿಯಾಗಿರಬಹುದು ಅಥವಾ ಅವರೇ ಮಾಡಲಿ. ಮಾನ್ಯ ಸದಸ್ಯರಾದ ಶ್ರೀ ಕೆ.ಜಯಪ್ರಕಾಶ್ ಹೆಗ್ಡೆಯವರು ನನಗೆ ಒಳ್ಳೆಯ ಸ್ನೇಹಿತರು. ಲೋಕಸಭೆ ಚುನಾವಣೆಯಲ್ಲಿ ನಾನು ಸ್ಪರ್ಧಿಸಿದಾಗ ನನ್ನ ಹತ್ತಿರ ಹಣವನ್ನು ತೆಗೆದುಕೊಳ್ಳದೆಯೇ ಮೂರ್ನಾಲ್ಕು ಮಂದಿ ಮತ ಹಾಕಿದವರಲ್ಲಿ ಅವರು ಸಹ ಒಬ್ಬರಾಗಿದ್ದಾರೆ. ಹಾಗಾಗಿ ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ, ಅವರನ್ನು ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಮಾಡಿ ಕೂರಿಸಿರುವುದು ಹೇಗೆ ಇದೆ ಎಂದರೆ, "ತೋಳವನ್ನು ಕೂರಿಸಿ, ಮೀನುಗಳಿಗೆ ನ್ಯಾಯ ಸಿಗಲಿ" ಎನ್ನುವಂಥದ್ದಾಗಿದೆ. ದಯವಿಟ್ಟು ನನ್ನ ಮಾತನ್ನು ತಪ್ಪಾಗಿ ತಿಳಿದುಕೊಳ್ಳಬೇಡಿ. ಹಾಗಾಗಿ, ಶೂದ್ರ ಸಮುದಾಯದವರನ್ನು ಆ ಸ್ಥಾನದಲ್ಲಿ ಕೂರಿಸಿದರೆ ಅದರ ನೋವು ಏನೆಂಬುದು ಅವರಿಗೆ ಗೊತ್ತಿದ್ದು, ಅವರು ಮಾಡುತ್ತಿದ್ದರು ಅಥವಾ dissent ಆದರೂ ಹೇಳುತ್ತಿದ್ದರು. ಈಗ ಇರುವುದು ಹೇಗೆ ಇದೆ ಎಂದರೆ, ಎಲ್ಲರೂ ಹೇಗೆ ನಡೆಯುತ್ತಿದ್ದಾರೆ, ಆ ರೀತಿ ಇದೆ. ಆದ್ದರಿಂದ ಡೆಮಾಕ್ರಸಿ ಎಂದರೆ ಏನು? ಸಮಾಜದ ಕಟ್ಟಕಡೆಯವರಿಗೂ ಸಹ ಈ ಪ್ರಜಾಪ್ರಭುತ್ವದ ಸವಲತ್ತು ಮತ್ತು ಸೌಲಭ್ಯ ಸಿಗಬೇಕೆಂಬ ಮೂಲ ಉದ್ದೇಶದಿಂದ ಆಗಿರುವಂಥದಾಗಿದ್ದು, ಅದೆಲ್ಲವೂ ಗಾಳಿಯಲ್ಲಿ ತೂರಿ ಹೋಗಿದೆ. ಆದ್ದರಿಂದ ಆದಷ್ಟು ಬೇಗ ಮಾಡಬೇಕು. ಹಿಂದುಳಿದ ವರ್ಗದವರ ವರದಿಯನ್ನು ದಯವಿಟ್ಟು ಅನುಷ್ಟಾನಕ್ಕೆ ತಂದು ಯಾವ್ಯಾವ ಜಾತಿಯವರದು ಎಷ್ಟೆಷ್ಟು ಹಣ ಇದೆ ಎಂಬುದು ಗೊತ್ತಾಗಬೇಕು. ಆಯಾಯ ಜಾತಿಯ ಎಷ್ಟೆಷ್ಟು ಹಣ ಇದೆ ಅದನ್ನು ನೀಡಲಿ, ನಮ್ಮ ಅಭ್ಯಂತರವೇನಿಲ್ಲ. ಅದನ್ನು ಹೊರತುಪಡಿಸಿ ಒಂದೇ ಒಂದು ಸಮುದಾಯವನ್ನು ಮಾಡಿಕೊಂಡು ಹೋದರೆ ಹೇಗೆ? ನಾವೇನಾದರೂ ಬೇರೆಯವರಿಗೆ ನೀಡಿದರೆ ಅದು appeasement ಆಗುತ್ತದೆ. ಬೇರೆ ಜಾತಿಯವರಿಗೆ ನೀಡಿರುವುದು appeasement ಅಲ್ಲವೇ? ಇದರಿಂದ ಬಹಳ ಅನ್ಯಾಯವಾಗಿದೆ. ಅದರಲ್ಲಿಯೂ ಶೂದ್ರ ಮತ್ತು

ದಲಿತ ಸಮುದಾಯಕ್ಕೆ, ಅಲ್ಪಸಂಖ್ಯಾತರಿಗೆ ಆದಷ್ಟು ಬೇಗ ವರದಿಯನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರೊಂದಿಗೆ ಚರ್ಚೆ ಮಾಡಿ, ಇದಕ್ಕೆ ಒಂದು ಅಂತಿಮ ರೂಪ ತಂದು ಆದಷ್ಟು ಬೇಗ ವರದಿಯನ್ನು ಬಿಡುಗಡೆ ಮಾಡುತ್ತೇವೆ.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 592

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಟಿ.ಎ.ಶರವಣನವರ ಪರವಾಗಿ ನಾನು ಪ್ರಶ್ನೆಯನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಆ ರೀತಿ ತಾವು ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ. ಏಕೆಂದರೆ, ನನಗೆ ಯಾವುದೇ ಮಾಹಿತಿ ಬಂದಿಲ್ಲ. ಆ ರೀತಿ ಇದ್ದರೆ ನನಗೆ ಮೊದಲೇ ಪತ್ರ ಕಳುಹಿಸಿಕೊಡಬೇಕು.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ: 618

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವರು ಸದನದಲ್ಲಿ ಗೈರುಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ 676**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜುಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಕೃಷಿ ಯಂತ್ರಧಾರೆ ಯೋಜನೆಗಾಗಿ ಎಷ್ಟು ಕೇಂದ್ರಗಳಿವೆ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, 689 ಕೇಂದ್ರಗಳನ್ನು ನೀಡಿದ್ದೇವೆ ಎಂದು ಹೇಳಿದ್ದಾರೆ. ಸುಮಾರು 167 ಕೇಂದ್ರಗಳಲ್ಲಿ ಈಗಾಗಲೇ ದೊಡ್ಡ ದೊಡ್ಡ ಕಂಪನಿಗಳವರು ಇದನ್ನು ತೆಗೆದುಕೊಂಡಿದ್ದು, ಈಗಾಗಲೇ ಅವರು ವಾಪಸ್ಸು ಹೋಗಿದ್ದಾರೆ. ಆ ಒಂದು ಸ್ಥಳಗಳಲ್ಲಿ ಯಾವಾಗ ಈ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ ಮತ್ತು 700 ಕ್ಕಿಂತ ಹೆಚ್ಚು ಹೋಬಳಿಗಳಲ್ಲಿ ಬಾಕಿ ಇರುವಂಥ ಸ್ಥಳಗಳಲ್ಲಿ ಏನು ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

(ಮುಂದು)

(1146) 23.12.2022/12.20/ಎಸ್‌ಕೆ-ಎಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮುನಿರಾಜು ಗೌಡ ಪಿ.ಎಂ (ಮುಂದು):-**

ಅದರ ಜೊತೆಯಲ್ಲಿ ಒಂದೇ ಹೋಬಳಿಯಲ್ಲಿ ಹತ್ತಾರು ಕೇಂದ್ರಗಳಿವೆ. ಎಷ್ಟೋ ಹೋಬಳಿಗಳಲ್ಲಿ ಒಂದು ಸಹ ಕೇಂದ್ರಗಳಿಲ್ಲ. ಆ ಸ್ಥಳಗಳಲ್ಲಿ ಯಾವ ರೀತಿ ಯೋಜನೆಗಳನ್ನು ಮಾಡಿದ್ದೀರಾ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತೇನೆ. ಆದಾದ ನಂತರ ಕೃಷಿ ಯಂತ್ರಧಾರೆ ಯೋಜನೆಯಿಂದ ರೈತರಿಗೆ ಉಂಟಾಗುವ ಪ್ರಯೋಜನಗಳೇನು? ಇದರಲ್ಲಿ ಹಲವಾರು ಉಪಯೋಗಗಳಿವೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕೆಲವೊಂದು ಜಿಲ್ಲೆಗಳಲ್ಲಿ ಮತ್ತು ಹೋಬಳಿಗಳನ್ನು ಗಮನಿಸುತ್ತಾ ಹೋದರೆ, ಮಳೆ ಬಂದಂತಹ ಸಂದರ್ಭಗಳಲ್ಲಿ ಮಾತ್ರ ಈ ಯಂತ್ರಗಳಿಗೆ ಉಪಯೋಗವಾಗುತ್ತದೆ. ಆದರೆ ಕೆಲವು ರೈತರು ಈ ಯಂತ್ರಗಳ ಉಪಯೋಗಿಸಲು ಕೇಳಿದಾಗ, ಕನಿಷ್ಠ 20 ದಿವಸಗಳಿಂದ ಒಂದು ತಿಂಗಳ ಕಾಲದವರೆಗೂ ಸಮಯಾವಕಾಶವನ್ನು ಕೋರುವಂತಹ ಸಂದರ್ಭಗಳು ಕಾಣಿಸುತ್ತಿವೆ. ಈ ಸ್ಥಳಗಳಲ್ಲಿ ಹೆಚ್ಚಿನ ಯಂತ್ರಗಳನ್ನು ಕೊಡಬೇಕು ಎನ್ನುವಂತಹ ಮನವಿಯನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ

ಕೇಳಕೊಳ್ಳುತ್ತೇನೆ. ಸರ್ಕಾರದ ಗಮನಕ್ಕೆ ಬಂದಿರುವುದೇನೆಂದರೆ, ಕೆಲವು ಸ್ಥಳಗಳಲ್ಲಿ ಕೃಷಿ ಯಂತ್ರಗಳೇನಿವೆ, ಅವು ತುಕ್ಕು ಹಿಡಿಯುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆ ಒಂದು ಸ್ಥಳದಲ್ಲಿ ಅದಕ್ಕೆ ಪರ್ಯಾಯವಾಗಿ ಯಾವ ಯೋಜನೆಗಳನ್ನು ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಿದರೆ, ನಾನು ಮತ್ತೊಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷಿ ಯಂತ್ರಧಾರೆ ಸರ್ಕಾರ ಉತ್ತಮವಾದಂತಹ ಉದ್ದೇಶವನ್ನಿಟ್ಟುಕೊಂಡು ಮಾಡಿದೆ. ಸಣ್ಣ-ಪುಟ್ಟ ರೈತರು ಕೃಷಿ ಮಾಡಲು, ಅವರಿಗೆ ಉಪಯೋಗವಾಗಲಿ ಎಂದು ಟ್ರ್ಯಾಕ್ಟರ್ ಮತ್ತು ಉಳಿದಂತಹ ಯಂತ್ರೋಪಕರಣಗಳು ಕೊಂಡುಕೊಳ್ಳುವುದಕ್ಕಾಗುವೆಂದು ಅದನ್ನು ಕಡಿಮೆ ದರದಲ್ಲಿ ಸಕಾಲದಲ್ಲಿ ಒದಗಿಸುವಂತಹದ್ದಕ್ಕೆ ಕೃಷಿ ಯಂತ್ರಧಾರೆಗಳನ್ನು 2014-15 ನೇ ಇಸ್ಚಿಯಿಂದ ಮಾಡಲಾಗಿದೆ. ರಾಜ್ಯದ 689 ಹೋಬಳಿ ಕೇಂದ್ರಗಳಲ್ಲಿ ಕೃಷಿ ಯಂತ್ರಧಾರೆ ನಿರ್ವಹಣೆ ಮಾಡಲು ಅವರಿಗೆ ಆರು ವರ್ಷ ಅವಧಿ ಇತ್ತು. ಅದರಲ್ಲಿ 167 ಕಂಪನಿಗಳು ಅದನ್ನು ಅದರ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ ಎಂದು ನಮಗೆ ಪತ್ರವನ್ನು ಬರೆದುಕೊಟ್ಟಿದ್ದಾರೆ. ಕಾರಣವೇನೆಂದು ಹೇಳಿದರೆ, ರಾಜ್ಯ ಸರ್ಕಾರ ಶೇಕಡಾ 70ರಷ್ಟು ಸಹಾಯಧನ ಮತ್ತು ಶೇಕಡಾ 30 ರಷ್ಟು ಸಹಾಯಧನವನ್ನು ಕಂಪನಿಗಳು ಹಾಕಬೇಕಾಗುತ್ತದೆ. ಕಂಪನಿಗಳು ಶೇಕಡಾ 20 ರಷ್ಟು ಸಹಾಯಧನ ಹಾಕುತ್ತೇವೆ ಮತ್ತು ರಾಜ್ಯ ಸರ್ಕಾರ ಶೇಕಡಾ 80 ರಷ್ಟು ಸಹಾಯಧನ ಮಾಡಿಕೊಡಿ ಎಂದು ಹೇಳಿ ಪತ್ರವನ್ನು ಕೊಟ್ಟಿದ್ದಾರೆ. ಈ ಕುರಿತಾಗಿ, ಆರ್ಥಿಕ ಇಲಾಖೆ ಒಪ್ಪಿಲ್ಲ. ಸುಮಾರು 742 ರೈತ ಸಂಪರ್ಕ ಕೇಂದ್ರಗಳಲ್ಲಿ ಒಂದು ರೈತ ಸಂಪರ್ಕ ಕೇಂದ್ರಕ್ಕೆ ಒಂದು ಇರಬೇಕು ಎನ್ನುವುದು ಇದೆ. ಈಗ 689 ಹೋಬಳಿ ಕೇಂದ್ರಗಳಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳಿವೆ. ಈ ವರ್ಷ ಸುಮಾರು 40 ಕೋಟಿ ರೂಪಾಯಿಗಳ ಬಜೆಟ್‌ನ್ನು ಸರ್ಕಾರ ಅದಕ್ಕೋಸ್ಕರವಾಗಿ ಇಟ್ಟಿದೆ. ಬಹಳಷ್ಟು ಕಂಪನಿಗಳು ಆರು ವರ್ಷವಾದ ಮೇಲೆ ಪರವಾನಿಗೆಯನ್ನು ನವೀಕರಿಸಲು ಬರುತ್ತಿಲ್ಲ. ಆ ಪರವಾನಿಗೆಯನ್ನು surrender ಮಾಡುವ ನಿಟ್ಟಿನಲ್ಲಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಿದೆ. ಈಗ ಬೇರೆ ಯಾವುದೇ ಕಂಪನಿಗಳು ಬಂದರೆ ಅದೊಂದು. ಇಲ್ಲವೆಂದರೆ, Farmer

Producer Organisations ಅಂದರೆ ರೈತ ಉತ್ಪಾದಕ ಸಂಸ್ಥೆಗಳಿಗೆ ಕೊಡಬೇಕೆಂದು ಹೇಳಿ ಸರ್ಕಾರ ಚಿಂತನೆ ಮಾಡುತ್ತಿದೆ. ಸದ್ಯದಲ್ಲಿ ಅದಕ್ಕೆ ಟೆಂಡರ್ ಕೂಡ ಕರೆಯುತ್ತೇವೆ.

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಟೆಂಡರ್ ಕರೆಯುತ್ತೇವೆಂದು ಹೇಳಿದ್ದು, ಅದು ರೈತ ಉತ್ಪಾದಕ ಸಂಸ್ಥೆಗಳಿಗೆ ಒಳ್ಳೆಯ ಬೆಳವಣಿಗೆ. ಅದರ ಜೊತೆಗೆ ಪ್ರಗತಿ ಪರ ರೈತರು ಅಥವಾ ಯುವಕರು ಯಾರಾದರೂ ಇದ್ದರೆ, ಅವರು ಅವಕಾಶಕ್ಕಾಗಿ ಕೋರಿ ಬಂದರೆ, ಅವರಿಗೇನಾದರೂ ಸಹಕಾರ ಕೊಡುವಂತಹ ಯೋಜನೆ ಮಾಡಿದರೆ ಉತ್ತಮ ಬೆಳವಣಿಗೆ ಎಂಬುದು ನನಗೆ ಅನಿಸುತ್ತದೆ. ಇದಕ್ಕೆ ಏನಾದರೂ ಸರ್ಕಾರ ಯೋಚನೆ ಮಾಡಿದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹದ್ದಕ್ಕೆ, ಪ್ರಗತಿಪರ ರೈತರು ಮತ್ತೆ ಯಾರಾದರೂ ಮುಂದೆ ಬಂದರೆ, ಅಂತಹವರಿಗೆ ಖಂಡಿತವಾಗಿಯೂ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಮತ್ತೊಂದು ಕೊನೆಯ ಪ್ರಶ್ನೆ ಇದೆ. ಈ ಸಹಾಯಧನವನ್ನು ಹತ್ತು ಲಕ್ಷಕ್ಕಿಂತ ಹೆಚ್ಚು turnover ಆಗಿರುವಂತಹ ಕಂಪನಿಗಳಿಗೆ ಐದು ಲಕ್ಷ ರೂಪಾಯಿಗಳಷ್ಟು subsidy ಅನ್ನು ಮತ್ತು ಹತ್ತು ಲಕ್ಷಕ್ಕಿಂತ ಕಡಿಮೆ turnover ಆಗಿರುವಂತಹ ಕಂಪನಿಗಳಿಗೆ ಎರಡೂವರೆ ಲಕ್ಷ ರೂಪಾಯಿಗಳಷ್ಟು subsidy ಅನ್ನು ಕೊಡುವಂತಹ ಯೋಜನೆಯನ್ನು ಸರ್ಕಾರದ ಮಟ್ಟದಲ್ಲಿದೆ. ಇದರಲ್ಲಿ ಎಷ್ಟು ಕಂಪನಿಗಳು ಸರ್ಕಾರದ ಸಹಾಯಧನವನ್ನು ಪಡೆದುಕೊಂಡಿದ್ದು ಸಹ ಇವತ್ತು ವಾಪಸ್ಸು ಹೋಗಿರುವಂತಹ ಕಂಪನಿಗಳು ಇವೇನೂ ಸಣ್ಣ-ಪುಟ್ಟ ಕಂಪನಿಗಳಲ್ಲ. M/s. Mahindra & Mahindra Company Ltd., M/s. John Deere India Private Ltd., M/s. VST Tillers Tractors Ltd., ಈ ಕಂಪನಿಯವರು ವಾಪಸ್ಸು ಹೋಗಿದ್ದಾರೆ. ಇಂತಹ ಕಂಪನಿಗಳು ವಾಪಸ್ಸು ಹೋಗಿರುವಂತಹ ಸಂದರ್ಭದಲ್ಲಿ ಸ್ಥಳೀಯವಾಗಿ ರೈತರು ಸಹ ಏನಾದರೂ ತೆಗೆದುಕೊಂಡರೆ, ಅವರು ನಷ್ಟವನ್ನು ಭರಿಸುವಂತಹದ್ದಕ್ಕೆ ಸರ್ಕಾರ ಏನಾದರೂ ಯೋಜನೆ ಮಾಡಿದರೆ ಒಳ್ಳೆಯದು ಎಂದು ನನಗೆ

ಅನಿಸುತ್ತದೆ. ಅದರ ಬಗ್ಗೆ ಯೋಜನೆ ಮಾಡಿದರೆ, ತಮ್ಮ ಮೂಲಕ ಮಾನ್ಯ ಸಚಿವರು ತಿಳಿಸಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ, ಮಾನ್ಯ ಟಿ.ಎ. ಶರವಣರವರ ಕೇಳಿರುವ ಪ್ರಶ್ನೆಯ ಬಗ್ಗೆ ನನಗೆ ಈಗ ಪತ್ರ ಬಂದಿದೆ. ಅವರ ಪರವಾಗಿ ತಾವು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ 592**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು) (ಶ್ರೀ ಟಿ.ಎ.ಶರವಣರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇಳಿರುವ ಪ್ರಶ್ನೆಗೆ ಅಗತ್ಯವಿರುವಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ಜಸ್ಟೀಸ್ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ಇವರ ವರದಿಯನ್ವಯ ಮೀಸಲಾತಿಯನ್ನು ಹೆಚ್ಚಳ ಮಾಡಿದ್ದಾರೆ. ಅದರ ಪ್ರಕಾರವಾಗಿ ಪರಿಶಿಷ್ಟ ಜಾತಿಗೆ ಶೇ. 15 ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ. 3 ರಿಂದ ಶೇ 7 ಕ್ಕೆ ಮೀಸಲಾತಿ ಹೆಚ್ಚಳವಾಗಿ ಒಟ್ಟು ಇಪ್ಪತ್ತೈದು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕೂಡ ಕೇವಲ vertical reservation ಮಾತ್ರ ಮಾಡಿದ್ದಾರೆ, horizontal reservation ಇನ್ನೂ ಆಗಲಿಲ್ಲ. ಇದಕ್ಕೆ ಸಂಬಂಧಪಟ್ಟಂತೆ, ನಿನ್ನೆ ಸದನದಲ್ಲಿ ಮಾನ್ಯ ಕಾನೂನು ಸಚಿವರು ಚರ್ಚೆ ಮಾಡುತ್ತಿದ್ದರು.

ಮಾನ್ಯ ಸಭಾಪತಿಯವರೇ, ಈ ರೀತಿ ತಂದಿರುವಂತಹ ಮೀಸಲಾತಿ ಹೆಚ್ಚಳವನ್ನು ಮಾಡಿರುವುದು ಸ್ವಾಗತಾರ್ಹ. ನಮಗೆ ತಿಳಿದಿರುವಂತೆ, ಭಾರತ ಸಂವಿಧಾನ ಅನುಚ್ಛೇದ 103 ಕ್ಕೆ ಭಾರತ ಸರ್ಕಾರ ತಿದ್ದುಪಡಿ ತಂದಿರುವ ನಂತರವಾಗಿ Economically Weaker Section ಅಂದರೆ ಯಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಲ್ಲ, Other Backward Classes ಗೆ ಸೇರಲ್ಲ. ಇತರೆ ವರ್ಗದವರಿಗೆ ಶೇಕಡಾ 10 ರಷ್ಟು ಮೀಸಲಾತಿಯನ್ನು ಕೊಟ್ಟಿದ್ದಾರೆ. ಯಾವುದು socially ಮುಂದುವರೆದ ವರ್ಗವಾಗಿದೆ. ಆದರೆ ಅವರಿಗೆ economically backwardness ಇರುವ ಕಾರಣಕ್ಕಾಗಿ ಮೀಸಲಾತಿಯನ್ನು ಕೊಟ್ಟಿದ್ದಾರೆ. Indra Sawhney ಪ್ರಕರಣದಲ್ಲಿ ಮೀಸಲಾತಿ ಪ್ರಮಾಣ ಶೇ.50 ನ್ನು ಮೀರಿರಬಾರದೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹೇಳಿದೆ. ಭಾರತ ಸಂವಿಧಾನ ಅನುಚ್ಛೇದ ಅನುಚ್ಛೇದ 103 ಕ್ಕೆ ಭಾರತ ಸರ್ಕಾರ ತಂದಿರುವ ತಿದ್ದುಪಡಿಯನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಎತ್ತಿ ಹಿಡಿದಿದ್ದರೂ ಕೂಡ ಈಗಾಗಲೇ ಶೇಕಡಾ 60 ರಷ್ಟು ಮೀಸಲಾತಿ ಆಗುತ್ತದೆ. ಸರ್ಕಾರ ಕೊಟ್ಟಿರುವಂತಹ ಮೀಸಲಾತಿ ಶೇಕಡಾ 56 ಕ್ಕೆ ಹೋಗುತ್ತಿದೆ. ಈ ಮೀಸಲಾತಿಯನ್ನು ಯಾವ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡ ವರ್ಗಗಳಿಗೆ ಸರ್ಕಾರ ಯಾವ ರೀತಿ protection ಕೊಡುತ್ತೀರಿ. ಮೀಸಲಾತಿ ಹೆಚ್ಚಳವನ್ನು ಶೆಡ್ಯೂಲ್-9ಕ್ಕೆ ತೆಗೆದುಕೊಂಡು ಹೋದರೆ, ಕೇಂದ್ರ ಸರ್ಕಾರ ಒಪ್ಪುತ್ತದೆಯೇ? ಅಲ್ಲಿ constitution amendment ಗೆ ಸಾಧ್ಯವಾಗುತ್ತದೆಯೇ, ಅದನ್ನು ಯಾವ ರೀತಿಯಾಗಿ ಪ್ರಸ್ತಾವನೆಯನ್ನು ಸಲ್ಲಿಸುತ್ತೀರಿ? ಕೇಂದ್ರ ಸರ್ಕಾರದವರು ತಂದಿರುವಂತಹ E.W.S (Economically Weaker Section) ಅನ್ನು ಈ ರಾಜ್ಯದಲ್ಲಿ ಯಾವ ರೀತಿಯಾಗಿ ಅನುಷ್ಠಾನಗೊಳಿಸುತ್ತೀರೆಂಬ ಬಗ್ಗೆ ಈ ಸದನದಲ್ಲಿ ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಬಿ. ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳದ ಬಗ್ಗೆ ಈ ಸದನದಲ್ಲಿ ಹಿರಿಯ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. 1961 ರಿಂದ ಅವೊತ್ತಿನಿಂದ ಇವತ್ತಿನವರೆಗೂ ಕೂಡ ಅಂದರೆ ನಮ್ಮ ರಾಜ್ಯದಲ್ಲಿ ಸುಮಾರು 2011 ರ ಜನಸಂಖ್ಯೆ 6,10,95,000 ಜನಸಂಖ್ಯೆ ಏನಿದೆಯೋ, ಪರಿಶಿಷ್ಟ ವರ್ಗಗಳ ಜನಸಂಖ್ಯೆ ಸುಮಾರು 42.49 ಲಕ್ಷ ಇದೆ. 1956 ರಲ್ಲಿ ಮೀಸಲಾತಿಯನ್ನು ಕೊಟ್ಟಿತೋ, ಶಿಕ್ಷಣ, ಉದ್ಯೋಗದಲ್ಲಿ ಕೊಟ್ಟಂತಹ ಸಮಯದಲ್ಲಿ ಅವೊತ್ತು ಕೇವಲ ಶೇ.3 ರಷ್ಟು ಮೀಸಲಾತಿ ಇತ್ತು. ಇವತ್ತಿಗೂ ಕೂಡ ಶೇ.3 ರಷ್ಟು ಮಾತ್ರ ಮೀಸಲಾತಿ ಸಿಗುತ್ತಾ ಇದೆ. ಈಗಾಗಲೇ ಇದರ ಬಗ್ಗೆ ಕೇಂದ್ರ ಸರ್ಕಾರ ಘೋಷಣೆಯನ್ನು ಮಾಡಿದೆ. ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ.7 ರಷ್ಟು ಮೀಸಲಾತಿಯನ್ನು ಕೊಟ್ಟಿದೆ. ಆದರೆ ಅವೊತ್ತಿನಿಂದ ಇವೊತ್ತಿನವರೆಗೂ ಜನಸಂಖ್ಯೆ ಜಾಸ್ತಿಯಾಗುತ್ತಿದ್ದಂತೆ, 1961 ರಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಎಷ್ಟು ಎಂದು ಹೇಳಿದರೆ, ಸುಮಾರು 1.92 ಲಕ್ಷ ಜನಸಂಖ್ಯೆ ಇತ್ತು. 1977ರಲ್ಲಿ 2.31 ಲಕ್ಷ ಜನಸಂಖ್ಯೆ ಇತ್ತು. ಅದೇ ರೀತಿ 1981 ರಲ್ಲಿ 18.72 ಲಕ್ಷ ಜನಸಂಖ್ಯೆ ಇತ್ತು ಮತ್ತು 1991 ರಲ್ಲಿ 19.15 ಲಕ್ಷ ಜನಸಂಖ್ಯೆ ಇತ್ತು. 2001 ರಲ್ಲಿ 34.64 ಲಕ್ಷ ಜನಸಂಖ್ಯೆ ಇತ್ತು. 2011 ರಲ್ಲಿ 42.49 ಲಕ್ಷ ಜನಸಂಖ್ಯೆ ಇತ್ತು. ಆದರೆ 1956 ರಲ್ಲಿ ಮೀಸಲಾತಿ ಹೆಚ್ಚಳವಾದ ನಂತರ ಜನಸಂಖ್ಯೆ ಬೆಳೆದುಕೊಳ್ಳುತ್ತಿದ್ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಯಾವ ಸರ್ಕಾರಗಳು ಕೂಡ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದರೆ ಅವತ್ತು ಪರಿಶಿಷ್ಟ

ಜಾತಿಯಲ್ಲಿ ಒಂದೆರಡು ಜಾತಿ ಇತ್ತು. ಆದರೆ ಜನಸಂಖ್ಯೆ ಹೆಚ್ಚಳವಾದಂತಹ ಸಮಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಸುಮಾರು 101 ಜಾತಿಗಳಾಗಿವೆ. ಆದರೆ ಇವತ್ತು ಮೀಸಲಾತಿಯನ್ನು ಹೆಚ್ಚಳ ಮಾಡುವುದಕ್ಕಾಗಲಿಲ್ಲ. ಜಸ್ಟೀಸ್ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್‌ರವರು ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ವರದಿ ನೀಡಿರುವಂತಹ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಶೇ.3 ರಿಂದ ಶೇ.7 ಮೀಸಲಾತಿ ಹೆಚ್ಚಿಸಬೇಕೆನ್ನುವ ಸಮಯದಲ್ಲಿ ಜಸ್ಟೀಸ್ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದರು.

(ಮುಂದು)

(1147) 23.12.2022 12.30 TCH-RN (MD) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಶ್ರೀರಾಮುಲು (ಮುಂದು):**

ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ, ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ. ಮತ್ತೆ ಸುಗ್ರೀವಾಜ್ಞೆ ಹೊರಡಿಸಲಾಗಿದೆ. ಅದಾದ ನಂತರ ಪುನಃ ನಾವು ಸದನದಲ್ಲಿ ಬಿಲ್‌ನ್ನು ಕೂಡ ಮಂಡನೆ ಮಾಡಿದ್ದೇವೆ. ಈ ಬಿಲ್‌ನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಪಾಸ್ ಮಾಡಿಕೊಂಡು ಭಾರತ ಸಂವಿಧಾನದ ಷೆಡ್ಯೂಲ್-9ರಲ್ಲೂ ಕೂಡ ಸೇರಿಸಲು ಕೇಂದ್ರ ಸರ್ಕಾರಕ್ಕೆ ಕಳುಹಿಸುವಂತಹ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ. This is the procedure. ನೀವು ಹೇಳಿದ ಪ್ರಕಾರ ಈ ಮೀಸಲಾತಿ ಶೇ.50 ಮೀರಬಾರದು. ಆದರೆ, EWS (Economically Weaker Section) ಈಗಾಗಲೇ ಶೇ.10ರಷ್ಟು ಹೆಚ್ಚಿಸಲಾಗಿದೆ. ಅಂದರೆ ಇವತ್ತಿನ ದಿವಸ EWS ಶೇ.10ರಷ್ಟು ಹೆಚ್ಚಿಸಿರುವುದರಿಂದ ಅದು ಶೇ.60ಕ್ಕೆ ಹೋಯಿತು. ಶೇ.50 ರಿಂದ ಶೇ.60ರಷ್ಟು ಆಗಿರುವುದನ್ನು ಹೇಗೆ justification ಮಾಡುತ್ತೀರಿ ಎಂದು ತಾವು ಕೇಳುತ್ತಿದ್ದೀರಿ. ಇವತ್ತಿನ ದಿವಸ ತಮಗೆಲ್ಲರಿಗೂ ಗೊತ್ತಿರುವಂತೆ, ಇಂದಿರಾ ಸಹಾನಿಯವರ ಕೇಸ್‌ನಲ್ಲಿ ಶೇ.50ರಷ್ಟು ಮೀಸಲಾತಿ ಮೀರಬಾರದು ಎಂದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ. ಅವೊತ್ತು ಅದರಲ್ಲಿ population statistics ಇದರ ಜೊತೆಗೆ socially backward classes ಆ ರಾಜ್ಯದಲ್ಲಿ ಆಕಸ್ಮಿಕವಾಗಿ ಎರಡು

ಅಂಶಗಳನ್ನು ಪರಿಗಣಿಸಿ ನೀವು ಮೀಸಲಾತಿಯನ್ನು ಜಾಸ್ತಿ ಮಾಡಬಹುದು ಎಂದು ಇಂದಿರಾ ಸಹಾನಿ ಕೇಸ್‌ನ ಜಡ್ಜ್‌ಮೆಂಟ್‌ನ್ನು ಉಲ್ಲೇಖ ಮಾಡುತ್ತಿದ್ದೇನೆ. ಹಾಗಾಗಿ, ಇವತ್ತಿನ ದಿವಸ ಇದನ್ನೆಲ್ಲಾ ನೋಡಿದಂತಹ ಸಂದರ್ಭದಲ್ಲಿ; ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಜಾಸ್ತಿ ಮಾಡಬೇಕಾಗಿರುವುದರಿಂದ, ಬಹುಶಃ ನಮ್ಮ ನಾಯಕರು ಮತ್ತು ನಾವೆಲ್ಲಾ ಸರ್ವಪಕ್ಷಗಳ ಸಭೆ ಕರೆದು ಇದನ್ನು ಅಂಗೀಕಾರ ಮಾಡಿದ್ದೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಮೀಸಲಾತಿಯನ್ನು ಹೆಚ್ಚಿಸುತ್ತಿರುವುದು ತುಂಬಾ ಸಂತೋಷ. ಆದರೆ ನಾನು ಕೇಳುತ್ತಿರುವುದೇನೆಂದರೆ, ಈಗಾಗಲೇ ಮಹಾರಾಷ್ಟ್ರ ಇರಬಹುದು, ಮಧ್ಯ ಪ್ರದೇಶ ಇರಬಹುದು ಮತ್ತು ಬೇರೆ ರಾಜ್ಯಗಳಲ್ಲಿ ಮೀಸಲಾತಿಯನ್ನು ಹೆಚ್ಚಿಸಿದಾಗ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಹಾಗಾಗಿ, ನೀವು ಇದನ್ನು ರಕ್ಷಣೆ ಮಾಡುವುದಕ್ಕೆ ಏನು ಮಾಡುತ್ತಿದ್ದೀರಿ? ಎಸ್.ಸಿ.,/ಎಸ್.ಟಿ., ಇತರೆ ಹಿಂದುಳಿದ ವರ್ಗಗಳನ್ನು ಹೊರತುಪಡಿಸಿ, ಉಳಿದವರಿಗೆ EWS ಶೇ.10 ತಂದಿರತಕ್ಕಂತಹದ್ದನ್ನು ಯಾವ ರೀತಿ ಮ್ಯಾನೇಜ್ ಮಾಡುತ್ತೀರಿ ಇದಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆ ಕೇಳಿದ್ದೇನೆ ಅಷ್ಟೇ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ EWS ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ. ಬೇರೆ ರಾಜ್ಯಗಳಾದ ರಾಜಸ್ಥಾನ, ಛತ್ತಿಸ್‌ಗಡ, ತಮಿಳುನಾಡಿನಲ್ಲಿ ಮೀಸಲಾತಿ ಹೆಚ್ಚಿಸಿರುವುದನ್ನು ನಾವು ನೋಡಬಹುದು. ತಮಿಳುನಾಡಿನಲ್ಲಿ ಅವೊತ್ತಿನ ಸಂದರ್ಭದಲ್ಲಿ ಷೆಡ್ಯೂಲ್-9ರಲ್ಲಿ ಸೇರಿಸಿ ಮೀಸಲಾತಿಯನ್ನು ಹೆಚ್ಚಿಗೆ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಇವತ್ತಿನ ದಿವಸ ಅದೇ ರೀತಿ ನಮ್ಮಲ್ಲೂ ಕೂಡ ಕಾನೂನಾತ್ಮಕವಾಗಿ ಬಿಗಿ ಆಗಬೇಕು ಎನ್ನತಕ್ಕಂಥ ಕಾರಣದಿಂದ ಸುಗ್ರೀವಾಜ್ಞೆ ಮಾಡಿ, ಶ್ರೀ ಹೆಚ್.ಎಸ್.ನಾಗಮೋಹನ್ ದಾಸ್, three members committee ವರದಿಯನ್ನೆಲ್ಲಾ ಪಡೆದುಕೊಂಡು ಷೆಡ್ಯೂಲ್-9ರಲ್ಲಿ ಸೇರಿಸುವಂತಹ ಕೆಲಸವನ್ನು ಮಾಡುತ್ತೇವೆ. ಇದರ ಜೊತೆಗೆ ಮಾನ್ಯ ಸದಸ್ಯರು ಮಹಾರಾಷ್ಟ್ರದಲ್ಲಿ ಮೀಸಲಾತಿ ಹೆಚ್ಚಿಸಿರುವುದು ಸುಪ್ರೀಂ ಕೋರ್ಟ್‌ನಲ್ಲಿ ಬಿದ್ದುಹೋಯಿತು ಎಂದು ಹೇಳಿದರು. ಏಕೆಂದರೆ,

ಮೀಸಲಾತಿ ಹೆಚ್ಚಿಸಿರುವ ಆ ಎಲ್ಲಾ ರಾಜ್ಯಗಳನ್ನು ನೋಡಿದಾಗ, ಕರ್ನಾಟಕ ರಾಜ್ಯವೊಂದೇ ಎಸ್.ಸಿ.,/ಎಸ್.ಟಿ., ಜನಾಂಗಕ್ಕೆ ಮೀಸಲಾತಿ ಹೆಚ್ಚಿಗೆ ಮಾಡಿರುವುದು. ಇಡೀ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಎಸ್.ಸಿ.,/ಎಸ್.ಟಿ., ಜನಾಂಗಕ್ಕೆ ಮೀಸಲಾತಿ ಹೆಚ್ಚಿಗೆ ಮಾಡಿಲ್ಲ. ಕೇವಲ ನಮ್ಮ ರಾಜ್ಯ ಮಾತ್ರ ಸಂವಿಧಾನಾತ್ಮಕವಾಗಿ ಮೀಸಲಾತಿಯನ್ನು ಹೆಚ್ಚಿಗೆ ಮಾಡುತ್ತಿದೆ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್ ರವರೇ, ತಾವು ತಮ್ಮ ಪ್ರಶ್ನೆ ಕೇಳಿ. ವಿರೋಧ ಪಕ್ಷದ ನಾಯಕರೇ, ಮಾತನಾಡಬೇಡಿ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಅಡ್ಡ ಹಾಕಬೇಡಿ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಈ ಪ್ರಶ್ನೆಗೆ ಈಗಾಗಲೇ ಸುಮಾರು 15 ನಿಮಿಷ ಆಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಸ್.ಸಿ.,/ಎಸ್.ಟಿ., ಜನಾಂಗಕ್ಕೆ ಕರ್ನಾಟಕ ರಾಜ್ಯವೊಂದೇ ಮೀಸಲಾತಿ ಹೆಚ್ಚಿಸಿದೆ ಎಂದು ಹೇಳಬಾರದು. ಛತ್ತೀಸ್‌ಗಡ ರಾಜ್ಯದಲ್ಲಿ ಶೇ.73ವರೆಗೂ ಮೀಸಲಾತಿ ಮಾಡಿದ್ದಾರೆ. ಇದನ್ನು ಮಾಡಿ ಸುಮಾರು 6 ವರ್ಷ ಆಗಿದೆ. ಅದೊಂದೇ ರಾಜ್ಯ ಅಲ್ಲ, ರಾಜಸ್ಥಾನದಲ್ಲಿ ಹೆಚ್ಚಿಗೆ ಮಾಡಿರುವ ಮೀಸಲಾತಿಯನ್ನು ಕೋರ್ಟ್ struck down ಮಾಡಿದೆ. ಸಂವಿಧಾನದ ಅನುಚ್ಛೇದ 9ಕ್ಕೆ ನೇರವಾಗಿ ಸೇರಿಸುವುದಕ್ಕೆ ಆಗುವುದಿಲ್ಲ. ಇದಕ್ಕೆ procedures ಇದೆ. ಇದನ್ನು Parliament ಕೂಡ approve ಮಾಡಬೇಕಾಗುತ್ತದೆ. ಆದರೆ ಇದನ್ನು ಯಾವ ರೀತಿ ಕಾನೂನುಬದ್ಧವಾಗಿ ಮಾಡುತ್ತೀರಿ ಎಂದು ನಾನು ನಿನ್ನೆ ಕೂಡ ಈ ಸದನದಲ್ಲಿ ಹೇಳಿದ್ದೇನೆ.

**ಶ್ರೀ ಬಿ.ಶ್ರೀರಾಮುಲು:-** ಖಂಡಿತವಾಗಿಯು ಇದನ್ನೆಲ್ಲಾ ಯಾವ ರೀತಿ ಬಿಗಿ ಮಾಡಬೇಕೋ ಅದೆಲ್ಲವನ್ನೂ ಕಾನೂನಾತ್ಮಕವಾಗಿ ಮಾಡಲು ಸಂವಿಧಾನದಲ್ಲಿ ನಮಗೇನು ಹಕ್ಕು ಇದೆಯೋ ಅದನ್ನು ಬಳಕೆ ಮಾಡಿಕೊಳ್ಳಬೇಕು ಎನ್ನತಕ್ಕಂಥ ಕಾರಣದಿಂದ ಎಲ್ಲಾ process ನ್ನು ಮುಗಿಸಿದ್ದೇವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದನದಲ್ಲಿ ಬಿಲ್ ಪಾಸ್ ಮಾಡಿಕೊಂಡು, **ಅದನ್ನು**

**ಪಾರ್ಲಿಮೆಂಟ್‌ಗೆ ತೆಗೆದುಕೊಂಡು ಹೋಗಿ, ಪಾರ್ಲಿಮೆಂಟ್‌ನಲ್ಲಿ ಬಿಲ್ ಪಾಸ್ ಮಾಡಿಕೊಂಡು ಷೆಡ್ಯೂಲ್ ೯ ಕ್ಕೆ ಸೇರಿಸುವಂತಹ ಕೆಲಸವನ್ನು** ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 622**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಬ್ರಾಹ್ಮಣ ಅಭಿವೃದ್ಧಿ ನಿಗಮಕ್ಕೆ ಈವರೆಗೆ ಸರ್ಕಾರದಿಂದ ನೀಡಿರುವ ಅನುದಾನ ಎಷ್ಟು? ಬ್ರಾಹ್ಮಣ ಸಮುದಾಯಕ್ಕೆ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಈವರೆಗೆ ಎಷ್ಟು ಮಂದಿ ಬ್ರಾಹ್ಮಣ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಪ್ರಶ್ನೆ ಕೇಳಿದ್ದೆನು. ಸರ್ಕಾರ ಅನುದಾನ ಘೋಷಣೆ ಮಾಡುವುದೇ ಒಂದು, ಅನುದಾನ ಕೊಡುವುದೇ ಮತ್ತೊಂದು. ಆಗಿನ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಯಡಿಯೂರಪ್ಪನವರು 2021-22ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ.46, ಐಟಂ ನಂ.149ರಲ್ಲಿ "ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ರೂ.50.00 ಕೋಟಿಗಳ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು" ಎಂದು ಘೋಷಣೆ ಮಾಡಿದ್ದರು. ಸರ್ಕಾರ 2021-22ನೇ ಸಾಲಿನ ಅಂಕಿ-ಅಂಶಗಳಲ್ಲಿ ಸುಮಾರು ರೂ.3 ಕೋಟಿಗಳನ್ನು ಕೊಟ್ಟಿದ್ದಾರೆ. ರೂ.50 ಕೋಟಿಗಳ ಅನುದಾನವನ್ನು ಘೋಷಣೆ ಮಾಡಿ ಸುಮಾರು ರೂ.3 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ರೂ.3 ಕೋಟಿಗಳು ಅವರ ಕಚೇರಿ ಸಿಬ್ಬಂದಿಗಳ ಸಂಬಳ, ಬಾಡಿಗೆ ಮತ್ತು ಟ್ರಾನ್ಸ್‌ಪೋರ್ಟ್‌ಗೆ ಸಾಕಾಗುತ್ತದೆ ಅಷ್ಟೇ. ಇದರಲ್ಲಿ ಯಾವ ಫಲಾನುಭವಿಗೂ ಕೂಡ ಏನೂ ಸಿಗುವುದಿಲ್ಲ. ಸರ್ಕಾರ ನಾಮಕಾವಸ್ತೆಗೆ ಒಂದು ನಿಗಮವನ್ನು ಮಾಡುವುದು. ಸಮ್ಮಿಶ್ರ ಸರ್ಕಾರ ಇದ್ದಾಗ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಸನ್ಮಾನ್ಯ ಮುಖ್ಯಮಂತ್ರಿಯಾಗಿದ್ದಾಗ ನಾವೆಲ್ಲಾ ಓಡಾಡಿ, ಗಲಾಟೆ ಮಾಡಿದ್ದಕ್ಕೆ ಸುಮಾರು 25.00 ಕೋಟಿಗಳನ್ನು ಕೊಟ್ಟಿದ್ದರು. ಅದೊಂದೇ ದೊಡ್ಡ ಮೊತ್ತ. ಅದಾದನಂತರ ಬಂದಂತಹ ಸನ್ಮಾನ್ಯ ಮುಖ್ಯಮಂತ್ರಿಯವರೆಲ್ಲಾ ಸುಮಾರು ಎರಡ್ಮೂರು ಕೋಟಿಗಳು ಕೊಟ್ಟು, ಭಿಕ್ಷೆ ಹಾಕಿದಂತೆ, ಬ್ರಾಹ್ಮಣರಿಗೆ ದಕ್ಷಿಣೆ ಕಾಸು ಹಾಕಿದಂತೆ ಕೊಟ್ಟರು. ಇದರಿಂದ ಏನು ಅಭಿವೃದ್ಧಿ ಆಗುತ್ತದೆ? ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಫಲಾನುಭವಿಗಳಿಗೆಲ್ಲಾ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಗಳನ್ನು ಕೊಟ್ಟಿದ್ದಾರೆ. ಒಬ್ಬೊಬ್ಬರಿಗೆ 1 ಅಥವಾ 2 ಹಸುಗಳನ್ನು ವಿತರಣೆ

ಮಾಡಿದ್ದು, ಇಡೀ ರಾಜ್ಯಾದ್ಯಂತ ಒಟ್ಟು 36 ಹಸುಗಳನ್ನು ವಿತರಣೆ ಮಾಡಿದ್ದಾರೆ. ಈ ರೀತಿಯಾದಲ್ಲಿ ಬ್ರಾಹ್ಮಣರು ಬದುಕುವುದು ಹೇಗೆ? ಹೇಳುವುದು ಒಂದು ಮಾಡುವುದು ಮತ್ತೊಂದು ಆದಲ್ಲಿ ಈ ಸರ್ಕಾರದಲ್ಲಿ ನಾವು ಏನು ಮಾಡಬೇಕು ಹೇಳಿ? ಇದರ ಬಗ್ಗೆ ಮಾನ್ಯ ಸಚಿವರೇ ಹೇಳಬೇಕು. ಮಾನ್ಯ ಸಚಿವರೇ, ನೀವು ಕೊಟ್ಟಿರತಕ್ಕಂಥ ಉತ್ತರ ನಿಮಗೆ ತೃಪ್ತಿದಾಯಕವಾಗಿದೆಯೇ? ನಿಮಗೆ ತೃಪ್ತಿ ಇದೆಯೆಂದರೆ ನಾನು ಪ್ರಶ್ನೆಯೇ ಕೇಳುವುದಿಲ್ಲ. ನಾನು ಕೊಟ್ಟಿರತಕ್ಕಂಥ ಉತ್ತರ ಸರಿಯಾಗಿದೆ, ನನಗೆ ತೃಪ್ತಿ ಇದೆಯೆಂದರೆ ನಾನು ಎಲ್ಲಾ ಬ್ರಾಹ್ಮಣರ ಪರವಾಗಿ ನಿಮಗೆ ಒಂದು ನಮಸ್ಕಾರ ಹಾಕುತ್ತೇನೆ; ನಾನು ಏನೂ ಕೇಳುವುದಿಲ್ಲ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಹೇಳಲಿ, ಆಮೇಲೆ ನಾನು ಹೇಳುತ್ತೇನೆ.

**ಶ್ರೀಮತಿ ಶಶಿಕಲಾ ಅ. ಜೊಲ್ಲೆ:**-ಮಾನ್ಯ ಸಭಾಪತಿಯವರೇ, ನಿಜವಾಗಲೂ ಕೂಡ ದಿನಾಂಕ 18.02.2019ರಲ್ಲಿ ಈ ಒಂದು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಪ್ರಾರಂಭವಾಯಿತು. ಅದಾದ ನಂತರ 2018-19 ಮತ್ತು 2019-2020 ಸಾಲಿಗೆ ರಿಪೋರ್ಟ್ ಕೊಟ್ಟಿದ್ದೇವೆ. ಇದಾದ ನಂತರ ಕೋವಿಡ್-19 ಬಂದಿದ್ದ ಕಾರಣದಿಂದಾಗಿ ನಾವು ಅನುದಾನ ಬಿಡುಗಡೆ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಸಮರ್ಪಕವಾದಂತಹ ಕೆಲಸವನ್ನು ಕೂಡ ಮಾಡುವುದಕ್ಕೆ ಆಗಲಿಲ್ಲ. ಆದರೆ ನಾನು ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತುಕತೆ ಮಾಡಿ ಒಂದು ಪ್ರಪೋಸಲ್‌ನ್ನೂ ಕೂಡ ಕಳುಹಿಸುತ್ತಿದ್ದೇನೆ. ಏಕೆಂದರೆ, ಈ ನಿಗಮದಲ್ಲಿ ಬಹಳ ಒಳ್ಳೆಯ ಸ್ಕೀಂಗಳಿವೆ. ಆದರೆ, ಅದು ಇನ್ನೂ ಕೂಡ ಶೇಕಡ 100 ರಷ್ಟು implement ಆಗಿಲ್ಲ ಎನ್ನತಕ್ಕಂಥ ಮಾನ್ಯ ಶಾಸಕರ ಕಳಕಳಿಗೆ ನಾನು ಕೂಡ ಅವರ ಜೊತೆಗೆ ಇದ್ದೇನೆ. ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷರು ಕೂಡ ನನ್ನ ಹತ್ತಿರ ಇದರ ಬಗ್ಗೆ ಮಾತನಾಡಿದ್ದಾರೆ. ಹಾಗಾಗಿ, ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಈಗಾಗಲೇ ಒಂದು ಬಾರಿ ಚರ್ಚೆ ಮಾಡಿದ್ದೇನೆ. **ಆದಷ್ಟು ಬೇಗನೆ ಅನುದಾನವನ್ನು ಬಿಡುಗಡೆ ಮಾಡಿ, ವಿದ್ಯಾರ್ಥಿಗಳಿಗೆ, ಮಹಿಳಾ ಸ್ವಸಹಾಯ ಸಂಘಗಳ ಸ್ಥಾಪನೆಗೆ ಹಾಗೂ ಹಸುಗಳನ್ನು ವಿತರಣೆ ಮಾಡುವ ಯೋಜನೆಗಳ ಫಲಾನುಭವಿಗಳಿಗೆ ಆದಷ್ಟು ಬೇಗನೆ ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ರತಿ ಬಾರಿ ಆಶ್ವಾಸನೆಯನ್ನು ಕೊಡುತ್ತಿದ್ದಾರೆ. ಇನ್ನು ಎರಡ್ಮೂರು ತಿಂಗಳಿಗೆ ಸರ್ಕಾರದ ಅಧಿಕಾರಾವಧಿ ಮುಗಿಯುತ್ತದೆ. ಅವರು ಸಚಿವರು ಇರುವಾಗಲೇ ಏನಾದರೂ ಮಾಡಿ ಒಂದು ಹೆಸರು ತೆಗೆದುಕೊಳ್ಳಲಿ. ಬ್ರಾಹ್ಮಣರ ಹತ್ತಿರ ಆಶೀರ್ವಾದ ಮಾಡಿಸಿಕೊಳ್ಳಲಿ. ಇನ್ನುಮುಂದೆ ಅವರಿಗೂ ಒಳ್ಳೆಯದಾಗುತ್ತದೆ.

**ಶ್ರೀಮತಿ ಶಶಿಕಲಾ ಅ. ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯು ಅವರ ಕಳಕಳಿಗೆ . . .

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಳಕಳಿ ಅಲ್ಲ. ಮಹಿಳಾ ಸ್ವ ಸಹಾಯ ಸಂಘಗಳಲ್ಲಿ ಯೋಜನೆಗಳನ್ನು ಯಾವ ರೀತಿ ಪಡೆದುಕೊಳ್ಳುತ್ತಿದ್ದಾರೆಂದರೆ, ಯಾರಿಗೂ ಇದರ ಬಗ್ಗೆ ಮಾಹಿತಿಯೇ ಸಿಗುವುದಿಲ್ಲ. ಮಾನ್ಯ ಸಭಾಪತಿಯವರೇ, ತಾವು ನಗುತ್ತಿದ್ದೀರಿ. ನಮಗೆ ಬಹಳ ಕಷ್ಟ ಇದೆ. ನಾವೆಲ್ಲಾ ಪೂಜೆ ಮಾಡುವುದು, ತಟ್ಟೆ ಹಿಡಿದುಕೊಳ್ಳುವುದು; ನಮ್ಮ ಕಷ್ಟ ನಮಗೇ ಗೊತ್ತು. ಕೋವಿಡ್-19 ಕಾಲದಲ್ಲಿ ಈ ಯೋಜನೆಯ ಲಾಭ ಎಲ್ಲಾ ಬಡ ಬ್ರಾಹ್ಮಣರಿಗೆ ಸಿಗಬೇಕಾಗಿತ್ತು. ಅವರಿಗೆ ಯಾರ್ಯಾರಿಗೆ ಬೇಕೋ ಅವರಿಗೆ ಹುಡುಕಿಕೊಂಡು ಹೋಗಿ ಕೊಟ್ಟರೇ ಹೊರತು, selected few people ಬಿಟ್ಟರೆ ಎಲ್ಲಾ ಬಡವರಿಗೂ ಸಿಗಲಿಲ್ಲ. ಈ ರೀತಿ ಆಗಬಾರದು.

**ಶ್ರೀಮತಿ ಶಶಿಕಲಾ ಅ. ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಖಂಡಿತ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿದಾಗ, ಬ್ರಾಹ್ಮಣ ಸಮುದಾಯದಲ್ಲಿರುವ ಎಲ್ಲಾ ಬಡವರಿಗೂ ಕೊಡಬೇಕು. ಅವರಿಗೆ ನಿರ್ದಿಷ್ಟವಾಗಿ ಬೇಕಾದವರನ್ನು ಮಾತ್ರ ಆಯ್ಕೆ ಮಾಡಬಾರದು. ಇದರ ಬಗ್ಗೆ ಎಲ್ಲರಿಗೂ ಮಾಹಿತಿಗಳನ್ನು ಕೊಡಬೇಕಲ್ಲವೇ? ನಾವು ಹತ್ತತ್ತು ಸಾವಿರ ರೂಪಾಯಿಗಳು ಕಿಟ್, ಹತ್ತತ್ತು ಸಾವಿರ ರೂಪಾಯಿಗಳ ದುಡ್ಡು ಕೊಡುತ್ತೇವೆ. ನಾವು ಇಂತಹ ಕೆಲಸ ಮಾಡುತ್ತೇವೆಂದು ಒಂದು ಮಾಹಿತಿ ಕೂಡ ಅಭಿವೃದ್ಧಿ ನಿಗಮದಿಂದ ಮಾಡಿಲ್ಲ. ನಾನು ಪರ ಮತ್ತು ವಿರೋಧ ಎಂದು ಹೇಳುವುದಿಲ್ಲ. ಆದರೆ ನಾವು ಈ ಸಂಘವನ್ನು ಏತಕ್ಕೆ ಮಾಡಿದ್ದೇವೆ? ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಸನ್ಮಾನ್ಯ

ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ್ದಾಗ ನಾವು ಅವರ ಜೊತೆ ಮಾತನಾಡಿ ಸರ್ಕಾರದಿಂದ ನಿಗಮಕ್ಕೆ ಸುಮಾರು ರೂ.25.00 ಕೋಟಿಗಳ ಅನುದಾನ ಬಿಡುಗಡೆ ಮಾಡಿಸಿದ್ದೆವು. ಅದನ್ನೇ ಈಗ ನೀವು ಖರ್ಚು ಮಾಡುತ್ತಿದ್ದೀರಿ. ನೀವು ಕೊಡುತ್ತಿರುವಂತಹ ದುಡ್ಡು ಕಟ್ಟಡದ ಬಾಡಿಗೆಗೆ, ಅಧಿಕಾರಿಗಳ ಸಂಬಳಕ್ಕೆ ಆಗುತ್ತಿದೆಯೇ ಹೊರತು, ಯಾರಿಗೂ ಒಂದು ರೂಪಾಯಿ ಸಹಾಯ ಆಗುತ್ತಿಲ್ಲ. ಆದ್ದರಿಂದ ದಯವಿಟ್ಟು ತಾವು 2021-22ನೇ ಸಾಲಿನ ಆಯವ್ಯಯದಲ್ಲಿ ಏನು ಹೇಳಿದ್ದೀರಿ, ಇದಾದ ನಂತರ ಬಜೆಟ್‌ಗಳಲ್ಲಿ ಏನೇನು ಹೇಳಿದ್ದೀರೋ ಆ ದುಡ್ಡನ್ನು release ಮಾಡಿಸಿ. ಆ ಬಡವರಿಗೆ ಸಹಾಯ ಮಾಡಬೇಕು. ಆಮೇಲೆ Double Engine ಸರ್ಕಾರ ಮತ್ತು Triple Engine ಸರ್ಕಾರ ಎಂದು ಹೇಳಿಕೊಳ್ಳುತ್ತೀರಿ. ನಾವು ನಿಮ್ಮನ್ನು appreciate ಮಾಡುತ್ತೇವೆ. EWS ಬಂತು. ಇದರಲ್ಲಿ ಯಾರಿಗಾದರೂ ಸಹಾಯ ಆಗಬೇಕಲ್ಲವೇ? ಆಮೇಲೆ ಬ್ರಾಹ್ಮಣರು ಜಾತಿ ಪ್ರಮಾಣ ಪತ್ರಕ್ಕೆ ಅಪ್ಲೈ ಮಾಡಿದರೆ, ಅವರು ಬರೀ ಒಂದು ವರ್ಷದ ಅವಧಿಗೆ ಮಾತ್ರ ಕೊಡುತ್ತಿದ್ದಾರೆ. ನಾನು ಮುಂದಿನ ವರ್ಷಕ್ಕೆ ಬೇರೆ ಜಾತಿ ಆಗುತ್ತೇನೆಯೇ? ಇಲ್ಲವೇ ಏನಾದರೂ ನನ್ನ ಜಾತಿ ಕೆಟ್ಟು ಹೋಗುತ್ತದೆಯೇ? ಜೀವನ ಇರುವವರೆಗೂ ನಾನು ಬ್ರಾಹ್ಮಣನಾದರೆ ಸಾಯುವವರೆಗೂ ಬ್ರಾಹ್ಮಣ ಅಲ್ಲವೇ? ನಾವೇನು ಇಂತದ್ದರಲ್ಲೇ ಹುಟ್ಟಬೇಕೆಂದು ಅರ್ಜಿ ಹಾಕಿಕೊಂಡು ಹುಟ್ಟಿಲ್ಲ. ನಾವು ಆ ಜಾತಿಯಲ್ಲಿ ಹುಟ್ಟಿದ್ದೇವೆ. ನಮಗೆ ಜಾತಿ ಪ್ರಮಾಣ ಪತ್ರವನ್ನು ಒಂದು ವರ್ಷದ ಅವಧಿಗೆ ಕೊಡುತ್ತಿದ್ದಾರೆ. ನೀವು ಎಲ್ಲಾದರೂ ಕೇಳಿದ್ದೀರಾ ಸರ್. ನೀವು ಲಿಂಗಾಯಿತರು ಎಂದರೆ, ಒಂದು ವರ್ಷಕ್ಕೆ ಲಿಂಗಾಯಿತರು. ಮುಂದಿನ ವರ್ಷಕ್ಕೆ ಬೇರೆಯವರೇ?

**ಸಭಾಪತಿಯವರು:-** ಅದು ತಪ್ಪು.

**ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ವಿಧಾನಸಭೆಯಲ್ಲಿ ಇದೇ ಪ್ರಶ್ನೆ ಉದ್ಭವವಾಯಿತು. ಆಗ ಸರ್ಕಾರ ಮತ್ತು ಕಾನೂನು ಸಚಿವರು ಬೇರೆ ಎಲ್ಲಾ ಜಾತಿಯವರಿಗೆ 5 ವರ್ಷಗಳ ಅವಧಿಗೆ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿದ್ದಾರೆ, ಅದೇ ರೀತಿ ಬ್ರಾಹ್ಮಣರಿಗೂ ಕೂಡ 5 ವರ್ಷಗಳ ಅವಧಿಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

**(ಮುಂದು)**

(1148)23.12.2022/12.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್:-** ಇಲ್ಲಿ ಏನಾಗಿದೆಯೆಂದರೆ, ಬ್ರಾಹ್ಮಣ ನಾಯಕರಿದ್ದಾರೆ ಅವರು ಮಾತನಾಡುತ್ತಾರೆಂದು ನಾವು ಸುಮ್ಮನಿದ್ದೇವೆ. ಆದರೆ ನೀವು ಪಕ್ಷದ ಜೊತೆ ಕೈ ಸೇರಿಸಿಕೊಂಡು ಬ್ರಾಹ್ಮಣರನ್ನು ಬಿಟ್ಟು ಬಾಕಿ ಎಲ್ಲವನ್ನೂ ಮಾತನಾಡುತ್ತೀರಿ. ನಾವೇನು ಮಾಡೋಣ ಹೇಳಿ, ನಮ್ಮ ಕರ್ಮ. ಬಡ ಬ್ರಾಹ್ಮಣರು ಸಾಯುತ್ತಿದ್ದಾರೆ.

**ಶ್ರೀಮತಿ ಶಶಿಕಲಾ ಅ. ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಯಾವ ರೀತಿ ಸರ್ಟಿಫಿಕೇಟ್ ಸಿಗುವುದೋ ಆ ರೀತಿ ಸರ್ಟಿಫಿಕೇಟ್ ಸಿಗಬೇಕೆನ್ನುವುದು ಇದೆ. ಅದನ್ನು ಕೂಡ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ವಿಚಾರದ ಬಗ್ಗೆ ಎಲ್ಲಾ ಕಡೆ awareness ಆಗಬೇಕು. ಅದನ್ನು ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹಳ ಒಳ್ಳೆಯ ಸ್ಕೀಂಗಳು ಮಕ್ಕಳ ವಿದ್ಯಾಭ್ಯಾಸಕ್ಕಿರಬಹುದು, ಸ್ಪರ್ಧಾತ್ಮಕ;

**ಸಭಾಪತಿಯವರು:-** ಅವರೆಲ್ಲರೂ ಬುದ್ಧಿವಂತರು ಒಳ್ಳೆಯ ಸ್ಕೀಂ ಹಾಕಿರುತ್ತಾರೆ. ಅದನ್ನು ಅನುಷ್ಟಾನ ಮಾಡಿ. ಬೇರೆಯವರು ನೋಡಲಿ.

**ಶ್ರೀಮತಿ ಶಶಿಕಲಾ ಅ. ಜೊಲ್ಲೆ:-** ನಿಜವಾಗಿಯೂ ಮಾಡುತ್ತೇವೆ. ಬಜೆಟ್‌ನಲ್ಲಿ ಘೋಷಣೆ ಮಾಡಿರುವ ರೀತಿಯಲ್ಲಿ ಅವರಿಗೆ ಪ್ರಚಾರ ಕೊಟ್ಟು ಅನುಷ್ಟಾನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 611**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ರೇಷ್ಮೆ ಸಚಿವರಿಗೆ ಪ್ರಶ್ನೆಯೇನೆಂದರೆ, ಇಡೀ ರಾಷ್ಟ್ರದಲ್ಲಿಯೇ ರೇಷ್ಮೆ ಬೆಳೆಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿ ಅವಿಭಾಜ್ಯ ಕೋಲಾರ ಜಿಲ್ಲೆ ಮೊದಲನೇ ಸ್ಥಾನದಲ್ಲಿದೆ. ಹಿಂದೆ ಕೋಲಾರ ಜಿಲ್ಲೆಯಲ್ಲಿ ನಾಲ್ಕು ರೇಷ್ಮೆ ಬಿತ್ತನೆ ಕೋಠಿ ಇತ್ತು. ಈಗಾಗಲೇ ಎರಡು ರೇಷ್ಮೆ ಬಿತ್ತನೆ ಕೋಠಿಯನ್ನು ಬಂಗಾರಪೇಟೆ ಮತ್ತು ಬೇತಮಂಗಲದಲ್ಲಿ ಮುಚ್ಚಿದ್ದಾರೆ, ಎರಡು ರೇಷ್ಮೆ ಬಿತ್ತನೆ ಕೋಠಿ ನಡೆಯುತ್ತಿದೆ. ಕೋಲಾರ ಜಿಲ್ಲಾ ಕೇಂದ್ರದಲ್ಲಿ ಒಂದು ರೇಷ್ಮೆ ಬಿತ್ತನೆ ಕೋಠಿ ನಡೆಯುವ ಸ್ಥಿತಿಯಲ್ಲಿಲ್ಲ. ಅದರ ದುರಸ್ತಿಗೆ ಇಲಾಖೆಯಿಂದ ಹಣ ಕೇಳಿದಾಗ ರೂ. 25 ಲಕ್ಷ ಬಿಡುಗಡೆ ಮಾಡಿದ್ದಾರೆ. ರೂ. 01 ಕೋಟಿ 10 ಲಕ್ಷಕ್ಕೆ ಯೋಜನೆ ರೂಪಿಸಿ ಬಿಡುಗಡೆ ಮಾಡಿರುವುದು 25 ಲಕ್ಷ ರೂಪಾಯಿಗಳು ಮಾತ್ರ. 25 ಲಕ್ಷ ಹಣವನ್ನು ಬಿಡುಗಡೆ ಮಾಡಿದಮೇಲೆ ಆರು ತಿಂಗಳಾದರೂ ಕೂಡ ಟೆಂಡರ್ ಕರೆದಿರಲಿಲ್ಲ. ಈಗ ಅಲ್ಲಿ ರೇಷ್ಮೆ ಬಿತ್ತನೆ ಕೋಠಿ ನಡೆಯುವ ವಾತಾವರಣವಿಲ್ಲ. ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ರೈತರು ರೇಷ್ಮೆ ವ್ಯವಸಾಯವನ್ನು ನಂಬಿರುವವರು. ಬಿತ್ತನೆ ಕೋಠಿಯಿಂದ ಉತ್ತಮವಾದ ಮೊಟ್ಟೆ ಕೊಡದೇ ಇದ್ದರೆ ರೇಷ್ಮೆಯನ್ನು ಯಾವ ರೀತಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ? ಇಲಾಖೆಯಲ್ಲಿ ಹಣ ಬಿಡುಗಡೆಯಾಗಿ ಆರು ತಿಂಗಳಾದರೂ ಕೂಡ ಟೆಂಡರ್ ಮಾಡದಿರುವುದರಿಂದ ಅವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಈಗ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ರೂ. 01 ಕೋಟಿ 10 ಲಕ್ಷ ಯೋಜನೆಗೆ ವರ್ಷಾನುಗಟ್ಟಲೆ ತೆಗೆದುಕೊಳ್ಳಬೇಕಾದರೆ ಅಲ್ಲೇನು ಅಣೆಕಟ್ಟು ಕಟ್ಟುತ್ತಿದ್ದಾರೆಯೇ? ಅದು ಒಂದು ಸಣ್ಣ ಬಿತ್ತನೆ ಕೋಠಿ. ಅದಕ್ಕೆ ವರ್ಷಾನುಗಟ್ಟಲೆ ಬೇಕೇ? ಮಾನ್ಯ ಸಚಿವರು ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಹಾಗೂ ಆದಷ್ಟು ಬೇಗ ರೇಷ್ಮೆ ಬಿತ್ತನೆ ಕೋಠಿ ಕೆಲಸ ಮಾಡಬೇಕು. ರೇಷ್ಮೆ ಬಿತ್ತನೆ ಕೋಠಿ, ಕೋಲಾರದಲ್ಲಿ ಒಂದು ವರ್ಷಕ್ಕೆ 10 ಲಕ್ಷ ಮೊಟ್ಟೆಗಳನ್ನು ತಯಾರು ಮಾಡುವ ಗುರಿ ಇಟ್ಟುಕೊಂಡಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಒಂದು ವರ್ಷವನ್ನು ಹೊರತುಪಡಿಸಿದರೆ 2019-20ರಲ್ಲಿ 15,19,317 ಮೊಟ್ಟೆಯನ್ನು ತಯಾರು ಮಾಡಿರುವುದನ್ನು ಬಿಟ್ಟರೆ ಇನ್ನು ಯಾವ ವರ್ಷದಲ್ಲೂ ಕೂಡ ಅವರು 03 ಲಕ್ಷ, 1,58,000;

2020-21ರಲ್ಲಿ 7 ಲಕ್ಷ ಮೊಟ್ಟೆಗಳನ್ನು ತಯಾರು ಮಾಡಿದ್ದಾರೆ. ಅಂದರೆ ಬರೀ ಕಟ್ಟಡ ಮಾತ್ರ ದುರಸ್ತಿಯಾಗಿದೆ ಎಂದಲ್ಲ ಅಲ್ಲಿ ಸಿಬ್ಬಂದಿಗಳ ಕೊರತೆ ಕೂಡ ಇದೆ. ಕೋಲಾರ ರೇಷ್ಮೆ ಬಿತ್ತನೆ ಕೋಠಿಯಲ್ಲಿ 06 ಜನ ಸಿಬ್ಬಂದಿಗಳಿರಬೇಕು. ಅಲ್ಲಿ Assistant Director cadre ನವರು ಇರಬೇಕು. ಆದರೆ ಅಲ್ಲಿ ಒಬ್ಬ ಗ್ರೂಪ್-ಡಿ ನೌಕರನಿದ್ದಾನೆ. ಏಪ್ರಿಲ್ ತಿಂಗಳಿನಿಂದ ನವೆಂಬರ್ ತಿಂಗಳವರೆಗೂ ಕೂಡ ಅಲ್ಲಿ ಎಷ್ಟು ಮೊಟ್ಟೆಗಳನ್ನು ಉತ್ಪಾದನೆ ಮಾಡಿದ್ದಾರೆಂದರೆ 01,87,753 ಆಗಿದೆ. ಅಂದರೆ ನವೆಂಬರ್ ತಿಂಗಳ ಅಂತ್ಯಕ್ಕೆ ಅವರ ಗುರಿ ಇದ್ದದ್ದು 7,20,000. ಆದರೆ ಕೇವಲ 01,87,000 ಮೊಟ್ಟೆಗಳನ್ನು ಉತ್ಪಾದನೆ ಮಾಡಿದ್ದಾರೆ. ರೈತರಿಗೆ ಉತ್ತಮವಾದ ಬಿತ್ತನೆ ಮೊಟ್ಟೆಗಳನ್ನು ಕೊಡದೇ ಇದ್ದರೆ ಇನ್ಯಾವ ನ್ಯಾಯ ಒದಗಿಸುತ್ತಾರೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಡಾ: ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದರಲ್ಲಿ ತಡವಾಗಿದೆ. ರೂ. 01,10,00,000 ಹಣವನ್ನು ನಾವು ಕೊಡಬೇಕಾಗಿತ್ತು. ಅದನ್ನು ಎಸ್ಟಿಮೇಟ್ ಮಾಡಿದ್ದೇವೆ. ತಪಾಸಣೆ ಮಾಡಿ ನಮ್ಮ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಈಗ 25 ಲಕ್ಷದ ಜೊತೆಗೆ ಮುಂದಿನ ವರ್ಷವೇ ನಾವು ಇದನ್ನು fulfil ಮಾಡುವಂತಹ ಕೆಲಸಗಳನ್ನು ಮಾಡುತ್ತೇವೆ. ಏಕೆಂದರೆ, ರೇಷ್ಮೆ ಬಗ್ಗೆ ನನಗೂ ಗೌರವವಿದೆ. ನಾನು ಅದೇ ಕುಟುಂಬದಲ್ಲಿ ಹುಟ್ಟಿ ಬಂದವನು. ಮೊದಲು ರೇಷ್ಮೆ ಬೆಳೆ ಹೇಗಿತ್ತು, ಈಗ ಹೇಗಿದೆ ಎಂದು ನಿಮಗೂ ಗೊತ್ತಿದೆ. ಅದನ್ನು ನಾವು ಎಲ್ಲೆಲ್ಲಿ ಸಪ್ಲೈ ಮಾಡುವುದು ನೂಲಿಗೆ ಏನು ಶಕ್ತಿಯನ್ನು ಕೊಡಬೇಕೆಂದು ತಾವು ನೋಡಿದ್ದೀರಿ. ಬನಾರಸ್‌ನಲ್ಲಿ ಒಂದು ಶಾಖೆಯನ್ನು ಕೂಡ ಪ್ರಾರಂಭ ಮಾಡಿದ್ದು ವರ್ಷಕ್ಕೆ ಮೂರು ಮೆಟ್ರಿಕ್ ಟನ್ ರೇಷ್ಮೆಯನ್ನು ಸಪ್ಲೈ ಮಾಡುವ ಕೆಲಸವನ್ನು ಮಾಡಿದ್ದೇವೆ. ರೇಷ್ಮೆ ಮೊಟ್ಟೆ, ಗೂಡು ಮತ್ತು ರೇಷ್ಮೆ ನೂಲಿಗೆ ಒಳ್ಳೆಯ ಬೇಡಿಕೆ ಇದೆ. ನಿಮ್ಮ ಸಮಸ್ಯೆ ನನಗೆ ಅರ್ಥವಾಗಿದೆ. ಶೀಘ್ರದಲ್ಲಿಯೇ ಅಲ್ಲಿಗೆ ಅಧಿಕಾರಿಯನ್ನು ಹಾಕುತ್ತೇನೆ. 3-4 ತಿಂಗಳಿನಲ್ಲಿ ಬಾಕಿ ಹಣವನ್ನು ಬಿಡುಗಡೆ ಮಾಡಿ ಇದನ್ನು fulfil ಮಾಡಿಕೊಡುತ್ತೇನೆಂದು ಹೇಳಬಯಸುತ್ತೇನೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಕೋಲಾರದಲ್ಲಿ ಸುಮಾರು 19,000 ಹೆಕ್ಟೇರ್‌ನಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದಾರೆ. 22,000 ಕುಟುಂಬದವರು ರೇಷ್ಮೆ

ವ್ಯವಸಾಯವನ್ನು ನಂಬಿದ್ದಾರೆ. ಈಗಾಗಲೇ ಎರಡು ರೇಷ್ಮೆ ಬಿತ್ತನೆ ಕೋಠಿಗಳಾದ ಬೇತಮಂಗಲ ಮತ್ತು ಬಂಗಾರಪೇಟೆಯಲ್ಲಿ ಮುಚ್ಚಿದ್ದಾರೆ, ಅದನ್ನು ತಾವು ಪರಿಶೀಲನೆ ಮಾಡಿ ಅಲ್ಲಿ ಕೂಡ ತಾವು ರೇಷ್ಮೆ ಬಿತ್ತನೆ ಕೋಠಿಯನ್ನು ಪ್ರಾರಂಭ ಮಾಡಿ ಅವಿಭಾಜ್ಯ ಕೋಲಾರ ಜಿಲ್ಲೆಗೆ ಅಗತ್ಯವಾಗಿರುವ ಉತ್ತಮವಾದ ರೇಷ್ಮೆ ಬಿತ್ತನೆ ಮೊಟ್ಟೆಯನ್ನು ಕೊಟ್ಟರೆ ಈ 22,000 ಕುಟುಂಬಗಳು ನಾಳೆ ಬದುಕುವುದಕ್ಕೆ ಸಾಧ್ಯವಾಗುತ್ತದೆ.

**ಡಾ: ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ನಾನು ಅಲ್ಲಿಗೇ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಏನೇನು ಅಗತ್ಯವಿದೆ ಅದನ್ನು ಶೀಘ್ರದಲ್ಲಿಯೇ fulfil ಮಾಡುವ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 697**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯೇನೆಂದರೆ, ಒಲಂಪಿಕ್ಸ್‌ನಲ್ಲಿ ಮೂರು ಜನರು, ಪ್ಯಾರಾ ಒಲಂಪಿಕ್ಸ್‌ನಲ್ಲಿ ಕೇವಲ ಇಬ್ಬರು ಕ್ರೀಡಾಪಟುಗಳು ಭಾಗವಹಿಸಿದ್ದರು. ನೀವು ಚಿನ್ನದ ಪದಕ ಗೆದ್ದವರಿಗೆ ರೂ. 5,00 ಕೋಟಿ, ಬೆಳ್ಳಿ ಪದಕ ವಿಜೇತರಿಗೆ ರೂ. 3.00 ಕೋಟಿ ಮತ್ತು ಕಂಚಿನ ಪದಕ ವಿಜೇತರಿಗೆ ರೂ. 2.00 ಕೋಟಿ ನಗದು ಬಹುಮಾನ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. Atleast ಹೆಚ್ಚು ಜನರು ಭಾಗವಹಿಸುವುದಕ್ಕೆ ಪ್ರತಿಭೆ ಇದ್ದವರನ್ನು ಗುರುತಿಸಿ ಅವರಿಗೆ ಒಂದು ಅಂತರ್ರಾಷ್ಟ್ರೀಯ ಮಟ್ಟದ ತರಬೇತಿ ಕೊಡುವುದಕ್ಕೆ ಏನಾದರೂ ಯೋಜನೆ ಇದೆಯೇ? ಮುಂದಿನ ಒಲಂಪಿಕ್ಸ್‌ಗೆ ಹೆಚ್ಚು ಜನರು ಭಾಗವಹಿಸಬೇಕು. ಏಕೆಂದರೆ, ನಾವು ಕ್ರೀಡಾಪಟುಗಳನ್ನು ತಯಾರಿ ಮಾಡಿ ಕಳುಹಿಸದೇ ಇದ್ದರೆ ಪದಕ ಗೆಲ್ಲುವುದಿರಲಿ ಭಾಗವಹಿಸುವುದಕ್ಕಾದರೂ ಹೋಗಬೇಕಲ್ಲವೇ. ಸರ್ಕಾರದಿಂದ ಅದಕ್ಕೇನಾದರೂ ಯೋಜನೆ ಇದೆಯೇ ಎನ್ನುವುದು ನನ್ನ ಪ್ರಶ್ನೆ.

**ಡಾ: ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಟೋಕಿಯೋ ಒಲಂಪಿಕ್ಸ್‌ಗೆ ಹೋಗುವವರಿಗೆ ತಲಾ 10 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಗ ಐದು ಜನ ಹೋಗಿದ್ದವರಿಗೂ ತಲಾ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ಪದಕವನ್ನು ಗೆದ್ದಿಲ್ಲ. ಅವರನ್ನು ಕರೆಸಿ ನಾವು ಅವರಿಗೆ ರಾಜಭವನದಲ್ಲಿ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆ. ಅಮೃತ ಕ್ರೀಡಾದತ್ತು ಯೋಜನೆಯಡಿ ನಾವು 75 ಮಕ್ಕಳನ್ನು ದತ್ತು ತೆಗೆದುಕೊಂಡಿದ್ದೇವೆ. ಅವರಿಗೆ ವರ್ಷಕ್ಕೆ ತಲಾ ರೂ. 10 ಲಕ್ಷ ಹಣವನ್ನು ಕೊಟ್ಟು ಅವರನ್ನು ತಯಾರಿ ಮಾಡುವ ಕೆಲಸ ಮಾಡುತ್ತಿದ್ದೇವೆ. ಎಂದೆಂದೂ ಆಗದೇ ಇರುವ ಕೆಲಸ ಈ ಸಲ ಆಗಿದೆ. ಏಕೆಂದರೆ ತಲಾ 10 ಲಕ್ಷ ರೂಪಾಯಿಗಳನ್ನು ಯಾವತ್ತೂ ಕೊಟ್ಟಿರಲಿಲ್ಲ. ನಾವು ತಲಾ 10 ಲಕ್ಷ ರೂಪಾಯಿಗಳನ್ನು ಕೊಟ್ಟು ಅವರು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಹೋಗುವುದಕ್ಕೆ ಮತ್ತು ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದನ್ನೆಲ್ಲವನ್ನೂ ಕೊಡುತ್ತಿದ್ದೇವೆ. ನಿಮಗೆ ಇನ್ನೂ ಏನಾದರೂ ಹೆಚ್ಚಿನ ಮಾಹಿತಿಗಳು ಬೇಕಾದರೆ ನಾನು ತರಿಸಿಕೊಡುತ್ತೇನೆ.

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಮುಂದೆ ಒಲಂಪಿಕ್ಸ್‌ಗೆ ಹೋಗುವವರಿಗೆ ತರಬೇತಿ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತಿದ್ದೀರಾ ಎಂದು ಕೇಳುತ್ತಿದ್ದೇನೆ.

**ಡಾ: ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಇದುವರೆಗೂ 75 ಜನ ಒಲಂಪಿಕ್ಸ್‌ಗೆ ಹೋಗುವವರಿಗೆ ವರ್ಷಕ್ಕೆ ತಲಾ 10 ಲಕ್ಷ ರೂಪಾಯಿಗಳನ್ನು ಕೊಡುವ ಹಾಗೂ ಅವರಿಗೆ ತರಬೇತಿ ಕೊಡುವುದು; ಕೇಂದ್ರ ಸರ್ಕಾರವೂ ಕೊಡುತ್ತಿದೆ. ನಮ್ಮ ಸರ್ಕಾರ ಮೊದಲನೇ ಸಲ ಮಾಡಿರುವುದು ತಲಾ 10 ಲಕ್ಷ ರೂಪಾಯಿಗಳು. ಇದುವರೆಗೂ ಯಾರೂ ಮಾಡಿರಲಿಲ್ಲ, ಅದನ್ನು ನಮ್ಮ ಸರ್ಕಾರ ಮಾಡಿದೆ ಅದಕ್ಕೆ ತಾವು ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಅಭಿನಂದನೆ ಹೇಳಬೇಕಾಗುತ್ತದೆ.

**ಡಾ: ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಅವರು ಒಲಂಪಿಕ್ಸ್‌ಗೆ ಆಯ್ಕೆಯಾದ ಮೇಲೆ ಕೇಂದ್ರ ಸರ್ಕಾರವು ಅವರಿಗೆ ತರಬೇತಿ ಮತ್ತು foreign coaching ಎಲ್ಲವನ್ನೂ ಕೊಡುತ್ತಿದೆ.

**ಸಭಾಪತಿಯವರು:-** ಶ್ರೀ ಶಾಂತಾರಾಮ್ ಬುಡ್ನ ಸಿದ್ದಿಯವರ ಪ್ರಶ್ನೆ ಸಂಖ್ಯೆ: 665 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ವರ್ಗಾವಣೆಯಾಗಿದೆ.

**ಪ್ರಶ್ನೆ ಸಂಖ್ಯೆ: 695**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಕೊಟ್ಟಿರುವ ಉತ್ತರಗಳು ಸಮಂಜಸವಾಗಿಲ್ಲ ಎಂದು ಹೇಳುತ್ತೇನೆ. ಮೂಲತಃವಾಗಿ ನಾನು ಕೇಳಿರುವ ಪ್ರಶ್ನೆ ಏನೆಂದರೆ, ಗೊಲ್ಲ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅತೀ ಹಿಂದುಳಿದ ವರ್ಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದಕ್ಕೆ ಅವರು ಈ ಸಮುದಾಯವು ಪ್ರವರ್ಗ-1ರಲ್ಲಿ ಬರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಅದು ಪ್ರವರ್ಗ-1ಕ್ಕೆ ಬರುತ್ತದೆಯೇ, ಇಲ್ಲವೇ ಎಂದು ನಾನು ಕೇಳಿಲ್ಲ. ಅವರು ಕೊಟ್ಟಿರುವ ಉತ್ತರ ತಪ್ಪಿದೆ. ಪ್ರವರ್ಗ-1 ಇರುವುದು ನಿಜ. ಅದು ನಮಗೆ ಗೊತ್ತಿರುವುದು ನಿಜ. ಆದರೆ ಕೇಳಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡಲಿಲ್ಲ. ಮುಂದುವರೆದು ನಾನು ಕೇಳಿರುವ ಪ್ರಶ್ನೆ ಗೊಲ್ಲ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂಬುದಕ್ಕೆ ಒಂದು ಸ್ಪಷ್ಟನೆಯನ್ನು ಕೊಟ್ಟಿದ್ದಾರೆ. ಅವರೇ ಹೇಳಿರುವ ವಿಚಾರಗಳನ್ನು ನೋಡಿದಾಗ ಪ್ರವರ್ಗ-1ರಲ್ಲಿ ಬರುವ 95 ಜಾತಿಗಳು ಮತ್ತು 379 ಉಪಜಾತಿಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಅತಿ ಹಿಂದುಳಿದಿರುವಂತಹ ಸಮಾಜಗಳಿಗೆ ಇರುವಂತಹ ಮೀಸಲಾತಿ ಕೇವಲ ಶೇ.4ರಷ್ಟು ಎಂಬ ವಿಚಾರ ಸರ್ಕಾರದ ಗಮನದಲ್ಲಿದೆಯೇ ಎಂಬುದನ್ನು ತಿಳಿದುಕೊಂಡು ನಾನು ಕೇಳುತ್ತಿದ್ದೇನೆ. ಶೇ.4ಕ್ಕೆ ಇಷ್ಟೊಂದು ಸಮುದಾಯಗಳು ಯಾವ ರೀತಿಯ ಸಹಾಯ, ಸೌಕರ್ಯಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

(ಮುಂದು)

(1149)23-12-2022(12-50)bsd-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):**

ಇದರ ಜೊತೆಗೆ ಗೊಲ್ಲ ಸಮುದಾಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ, ರಾಜ್ಯದಲ್ಲಿ ಗೊಲ್ಲ ಸಮುದಾಯ ವಾಸ ಮಾಡುತ್ತಿವೆ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ಶಿರಾ, ಚಿತ್ರದುರ್ಗ

ಜಿಲ್ಲೆಗಳಲ್ಲಿ ಇರಬಹುದು, ಬೆಳಗಾವಿ ಹಣೆಬರ್ ಎಂದು ಕರೆಯುವವರು ಇರಬಹುದು, ಮಂಗಳೂರು ಜಿಲ್ಲೆಯಲ್ಲಿ ಮನೆಯಾಳ ಎಂದು ಕರೆಯುವ ಜನ ಇರಬಹುದು, ಬಳ್ಳಾರಿ, ಗುಲ್ಬರ್ಗ ಜಿಲ್ಲೆಗಳು ಸೇರಿದಂತೆ ಇತ್ಯಾದಿ ಕಡೆ ವಾಸ ಮಾಡುವ ಜನರ ಸ್ಥಿತಿ ನೋಡಿದರೆ ನಿಜವಾಗಿಯೂ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಇವರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದಾರೆ ಮತ್ತು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಎಂಬ ವಿವರಗಳನ್ನು ಕೊಡದೇ ಇರುವುದು ವಿಷಾದನೀಯ ಎಂಬ ವಿಚಾರವನ್ನು ಹೇಳುತ್ತಿದ್ದೇನೆ. ಅದರ ಜೊತೆಗೆ ಶೈಕ್ಷಣಿಕ ವಿಚಾರಗಳಲ್ಲಿ ಪ್ರತಿಷ್ಠಿತ ಶಾಲೆಗಳಲ್ಲಿ ಅವರಿಗೆ ಶುಲ್ಕ ವಿನಾಯಿತಿಯನ್ನು ರದ್ದು ಮಾಡಿರುವ ಬಗ್ಗೆ ಹೇಳುತ್ತಾರೆ. 2012ಕ್ಕೂ ಮೊದಲು ಕರ್ನಾಟಕ ರಾಜ್ಯದಲ್ಲಿ 1966ರಲ್ಲಿ ಇದ್ದಂತೆ ಈ category ಯು category-1 ಗೆ ಬರುವ ಗೊಲ್ಲ ಸಮುದಾಯದ ಮತ್ತು ಉಪ ಜಾತಿಗಳಿಗೆ ಶುಲ್ಕ ವಿನಾಯಿತಿ ಕಾರ್ಯಕ್ರಮ ಇತ್ತು. ಅದನ್ನು 2012ರಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಿಂಪಡೆಯಲಾಗಿದೆ. ಆ ಪ್ರಶ್ನೆಯನ್ನು ಕೇಳಿದ್ದು, ಅದನ್ನು ಯಾವಾಗ ಅನುಷ್ಠಾನ ಮಾಡುತ್ತಾರೆ. ಅವರಿಗೆ ಮರುಪಾವತಿ ಮಾಡುವ ಅವಶ್ಯಕತೆ ಇಲ್ಲ, ಶೈಕ್ಷಣಿಕವಾಗಿ ವಿನಾಯಿತಿ ಕೊಡುವ ಕೆಲಸ ಮಾಡಬೇಕು. ಆ ಸಮುದಾಯದ ಏಳಿಗೆಗೆ ಇರುವ ಯೋಜನೆಗಳನ್ನು ತಿಳಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದು, ಅವರ ಪ್ರಶ್ನೆಯಂತೆ ಗೊಲ್ಲ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅತೀ ಹಿಂದುಳಿದ ವರ್ಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಂಬುದಕ್ಕೆ "ಬಂದಿದೆ" ಎಂದು ಉತ್ತರವನ್ನು ಕೊಟ್ಟಿದ್ದೇವೆ. ಮೇಲಿನ ಸಾಲಿನಲ್ಲಿ ಬಂದಿರುತ್ತದೆ ಎಂದು ಉತ್ತರವನ್ನು ನೀಡಿದ್ದೇವೆ. ಮುಂದುವರೆದು ಗೊಲ್ಲ ಸಮುದಾಯದ ಅಭಿವೃದ್ಧಿಗೆ ಯಾವ್ಯಾವ ಕ್ರಮ ಕೈಗೊಂಡಿದ್ದೀರಿ ಎಂಬುದಕ್ಕೆ ಮೆಟ್ರಿಕ್-ಪೂರ್ವ ವಿಶೇಷ ಪ್ರೋತ್ಸಾಹ ಧನ, ಮೆಟ್ರಿಕ್-ನಂತರ ಅರ್ಹತಾ ವಿದ್ಯಾರ್ಥಿ ವೇತನ, ಆಶ್ರಮ ಶಾಲೆಗಳ ನಿರ್ವಹಣೆ ಮತ್ತು ಪ್ರತಿಷ್ಠಿತ ಶಾಲೆಗಳ ಪ್ರವೇಶಾವಕಾಶದ ಬಗ್ಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರಂತೆ ಪ್ರತಿಷ್ಠಿತ ಶಾಲೆಗಳಿಗೆ ಮಕ್ಕಳನು ಕಳುಹಿಸುವ scheme ಇದ್ದು, ಅದನ್ನು ಕಡಿತಗೊಳಿಸಿದ್ದೀರಿ ಎಂದು ಕೇಳಿದ್ದಾರೆ.

ಈಗ ಏನು continue ಆಗುತ್ತಿದೆ, ಅದನ್ನು ಪ್ರತೀ ಶಾಲೆಯಲ್ಲಿ ಮುಂದುವರೆಸುತ್ತಿದ್ದಾರೆ. ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಗೊಲ್ಲ ಸಮುದಾಯದವರಿಗೆ ಅವಕಾಶ ಕೊಡಬೇಕೆಂದು ಕೇಳಿದ್ದಾರೆ. ಗೊಲ್ಲ ಸಮುದಾಯದವರು ಅಲೆಮಾರಿ ಜನಾಂಗದ ವ್ಯಾಪ್ತಿಯಲ್ಲಿ ಬರುವುದರಿಂದ, ಅಲೆಮಾರಿಗಳಿಗೆ ಅನಿರ್ಬಂಧಿತವಾಗಿ ಕಳೆದ ವರ್ಷ ಘೋಷಣೆ ಮಾಡಿದಂತೆ ಎಷ್ಟು ಮಕ್ಕಳು ಬಂದರೂ ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಇವು English Medium ಶಾಲೆಗಳಾಗಿದ್ದು, ತಮಗೆಲ್ಲರಿಗೂ ಗೊತ್ತಿರುವಂತೆ ಉನ್ನತವಾಗಿ ನಡೆಯುತ್ತಿವೆ. ಆ ಶಾಲೆಗಳಿಗೆ ಗೊಲ್ಲ ಮತ್ತು ಅಲೆಮಾರಿ ಸಮುದಾಯಕ್ಕೆ ಅವಕಾಶವನ್ನು ಅನಿರ್ಬಂಧಿತವಾಗಿ ಕೊಟ್ಟಿರುವುದರಿಂದ, ಅವರನ್ನು ನೇರವಾಗಿ ಸೇರಿಸಿಕೊಳ್ಳಬೇಕೆಂದು ತಿಳಿಸಿರುವುದರಿಂದ, ಪ್ರತಿಷ್ಠಿತ ಶಾಲೆ ಎನ್ನುವ ಶಬ್ಧ ಸಹಜವಾಗಿ ಕಡಿಮೆಯಾಗಿರುತ್ತದೆ. ಆದರೆ ಈ ಹಿಂದೆ ಹೋದವರಿಗೆ ಅದನ್ನು continue ಮಾಡಿದ್ದೇವೆ. ಗೊಲ್ಲ ಸಮುದಾಯವು ಪ್ರವರ್ಗ 1ರಲ್ಲಿ ಸೇರಿದ್ದು, ಅದರಲ್ಲಿ 95 ಜಾತಿಗಳು ಇದೆ ಎಂಬ ಇತ್ಯಾದಿ ಮಾಹಿತಿಗಳನ್ನು ಒದಗಿಸಲಾಗಿದೆ. ಗೊಲ್ಲ ಸಮುದಾಯವನ್ನು ST ಗೆ ಸೇರಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ 2019ರಲ್ಲಿ ಒಂದು ವರದಿಯನ್ನು ಸಮುದಾಯದವರು ಕೊಟ್ಟಿದ್ದು, ಆ ವರದಿಯ ಆಧಾರದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂಬ ಸಂಗತಿಯ ಚರ್ಚೆ ಇದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಮುಂದುವರೆದು ಮಾನ್ಯ ಸದಸ್ಯರು ಕಾಡು ಗೊಲ್ಲರ ಬಗ್ಗೆ ಏನೇನು ಮಾಡಿದ್ದಾರೆ ಎಂದು ಕೇಳಿದ್ದಾರೆ. ಅದಕ್ಕೆ ಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. ಎರಡೆರಡು ಸಾರಿ ರಾಜ್ಯ ಸರ್ಕಾರದಿಂದ ವರದಿ ಪಡೆದು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಮೈಸೂರು ಬುಡಕಟ್ಟು ಅಧ್ಯಯನ ಕೇಂದ್ರದಿಂದ ಪರಿಶಿಷ್ಟ ಪಂಗಡಕ್ಕೆ ಸೇರಬೇಕೆಂಬ ಶಿಫಾರಸ್ಸು ಆಗಿದೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟ ನಂತರ ಕೇಂದ್ರ ಸರ್ಕಾರದವರು 3 ಬಾರಿ ಏಕೆ ಸೇರಬೇಕು, ಏನೇನು ಸೇರಬೇಕು ಎಂದು 3 ಮಾಹಿತಿಗಳನ್ನು ಕೇಳಿದ್ದಾರೆ. ಕೊನೆಯದಾಗಿ ದಿನಾಂಕ 28-9-2018 ರಲ್ಲಿ ಸಲ್ಲಿಸಿ, ನಂತರ ಮುಂದುವರೆದು ದಿನಾಂಕ 4-2-2022 ರಲ್ಲಿ ಪುನಃ ಮಾಹಿತಿ ಕೊಟ್ಟು ಕಾಡು ಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಅನಿವಾರ್ಯತೆ ಮತ್ತು ಅಗತ್ಯತೆಗಳ ಮಾಹಿತಿ ಒದಗಿಸಲಾಗಿದೆ. ವರದಿಯು ಕೇಂದ್ರ ಸರ್ಕಾರದಲ್ಲಿದೆ.

ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ನೀಡಿದ್ದು, ಇನ್ನೂ ಮಾಹಿತಿ ಬಯಸುವುದಾದರೆ ಉತ್ತರ ಕೊಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಕಾಡು ಗೊಲ್ಲರ ವಿಚಾರದಲ್ಲಿ ಕೇಂದ್ರ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದ್ದು, ಅದರ ವರದಿಯನ್ನು ತರಿಸಿಕೊಳ್ಳಲಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು, ಗೊಲ್ಲರು ಮತ್ತು ಉಪಜಾತಿಗಳು ಈ ಎರಡು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದರು. ಈಗಾಗಲೇ ದಿನಾಂಕ 19-03-2019ರಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ ಸರ್ಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದು, ಇನ್ನೂ ಕೂಡ ಪರಿಶೀಲನೆ ಮಾಡುತ್ತಿದ್ದರೆ, ನಮ್ಮ ಸಮುದಾಯದ ಬಗ್ಗೆ ಇರುವ ಅಸಡ್ಡೆ ಏನು ಮತ್ತು ಯಾವ ಕಾರಣದಿಂದ 3 ವರ್ಷಗಳಿಂದ ಪರಿಶೀಲನೆಯಲ್ಲಿಟ್ಟುಕೊಂಡಿದ್ದಾರೆ. ಶಿಫಾರಸ್ಸಿನಂತೆ ST ಗೆ ಸೇರಿಸಬಹುದೇ ಇಲ್ಲದೇ ಎಂಬುದರಲ್ಲಿ ಸರ್ಕಾರ ಯಾವ ನಿಲುವಿಗೆ ಬಂದಿದೆ ಎಂಬುದನ್ನು ತಿಳಿಸಬೇಕು. ಗೊಲ್ಲ ಸಮುದಾಯವನ್ನು ಬಿಟ್ಟು ಕಾಡು ಗೊಲ್ಲರ ಬಗ್ಗೆ ಮಾತನಾಡುವಾಗ ಮೊನ್ನೆ ಶಿರಾದಲ್ಲಿ ನಡೆದ ಉಪ ಚುನಾವಣೆಯ ಹಿನ್ನಲೆಯಲ್ಲಿ ಕಾಡು ಗೊಲ್ಲರಿಗೆ ನಿಗಮ ಮಾಡುತ್ತೇವೆ ಎಂಬ ಆಶ್ವಾಸನೆ ಕೊಟ್ಟು, ಆ ಸಂದರ್ಭದಲ್ಲಿ ಆ party ಯನ್ನು ಗೆಲ್ಲಿಸಿಕೊಂಡರು, ನಾವು ಅಭಿನಂದನೆಯನ್ನೂ ಸಲ್ಲಿಸಿದ್ದೆವು. ಆದರೆ ಇವತ್ತಿನವರೆಗೂ ನಿಗಮವನ್ನು ರಚನೆ ಮಾಡದೇ ಇರುವುದಕ್ಕೆ ಕಾರಣ ಏನು ಎಂಬ ಪ್ರಶ್ನೆಯನ್ನು ಕೇಳುತ್ತೇನೆ. ಇದೇ Budget ಮಾಡುವ ಸಂದರ್ಭದಲ್ಲಿ ರೂ.17 ಕೋಟಿಗಳನ್ನು ಕಾಡುಗೊಲ್ಲರಿಗೆ ಕೊಟ್ಟಿರುವುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. 15 ದಿವಸಗಳ ಹಿಂದೆ ಆ ಹಣವನ್ನು ವಾಪಸ್ಸು ತೆಗೆದುಕೊಂಡಿರುವುದನ್ನು ನೋಡಿದಾಗ ಕಾಡು ಗೊಲ್ಲರನ್ನು ಯಾವರೀತಿ ನಡೆಸಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಕಾಡು ಗೊಲ್ಲರು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಅತೀವವಾಗಿ ಹಿಂದುಳಿದಿರುವುದರಿಂದ ST ಗೆ ಸೇರಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಆದರೆ double engine ಸರ್ಕಾರ ಎಂದು ಹೇಳಿಕೊಂಡು ಸ್ವರ್ಗವನ್ನು ನಿರ್ಮಾಣ

ಮಾಡುವ ಬಗ್ಗೆ ಹೇಳಿಕೊಂಡು, ಶೋಷಿತ ವರ್ಗದವರಿಗೆ ನಾಲ್ಕೈದು ವರ್ಷಗಳು ಕಳೆದರೂ ST ಮೀಸಲಾತಿ ಕೊಡದೇ ಇರುವುದಕ್ಕೆ ಕಾರಣಗಳೇನು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಾಡು ಗೊಲ್ಲರ ನಿಗಮವನ್ನು ಸ್ಥಾಪನೆ ಮಾಡಿ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಆದರೆ ಕಾಡು ಗೊಲ್ಲರ ನಿಗಮವನ್ನು ಸ್ಥಾಪನೆ ಮಾಡಿದಾಗ ಗೊಲ್ಲ ಮತ್ತು ಕಾಡುಗೊಲ್ಲರನ್ನು ಒಟ್ಟು ಮಾಡಬೇಕೆಂಬ ಬೇಡಿಕೆ ಮತ್ತು ಆಕ್ರೋಶಗಳು ವ್ಯಕ್ತವಾದವು. ಅದರ ಹಿನ್ನಲೆಯಲ್ಲಿ ಗೊಲ್ಲ ಮತ್ತು ಕಾಡುಗೊಲ್ಲರ ನಿಗಮ ಮಾಡಬೇಕೆ ಅಥವಾ ಕಾಡುಗೊಲ್ಲರ ನಿಗಮವನ್ನು ಹಾಗೆ ಉಳಿಸಿಕೊಳ್ಳಬೇಕೆ ಎಂಬ ಸಂದಿಗ್ಧತೆ ಇತ್ತು. ಈಗ ಅಂತಿಮವಾಗಿ ಯಾವುದಾದರೊಂದು ರೂಪಕ್ಕೆ ತರಬೇಕೆಂದು ಮಾಡಿದ್ದೇವೆ. ಈ ಮಧ್ಯೆ ಗೊಲ್ಲ ಎಂಬುದು ಅಲೆಮಾರಿ ರೂಪದಲ್ಲಿರುವುದರಿಂದ, ಅದಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ಯಾವುದೋ ಕಾರಣಕ್ಕೆ ರೂ.17 ಕೋಟಿ ಖರ್ಚಾಗದೇ ಮರುಹೊಂದಾಣಿಕೆ ಮಾಡಿದ್ದರೆ ಆ ಹಣವನ್ನು ಕೊಡುತ್ತೇವೆ. ಒಟ್ಟಾರೆ ಗೊಲ್ಲ ಮತ್ತು ಕಾಡುಗೊಲ್ಲ ಎರಡು ಸಮುದಾಯಗಳ ಅಭಿವೃದ್ಧಿ ಮತ್ತು ಮೀಸಲಾತಿ..... ಮಾನ್ಯ ಸದಸ್ಯರು ಗೊಲ್ಲ ಸಮುದಾಯದ ಬಗ್ಗೆ 2019ರಲ್ಲಿ ವರದಿ ಕೊಟ್ಟಿದ್ದಾರೆ ಎಂದು ಹೇಳಿದರು. ಮೈಸೂರು ಬುಡಕಟ್ಟು ಅಧ್ಯಯನ ಕೇಂದ್ರ ಕೊಟ್ಟಿರುವ ವರದಿಯಲ್ಲಿ ಗೊಲ್ಲ ಸಮುದಾಯವನ್ನು ST ಗೆ ಸೇರಿಸಬೇಕೆಂದು ಹೇಳಿಲ್ಲ. ಆದರೂ ವರದಿ ಸರ್ಕಾರದ ಹಂತದಲ್ಲಿದೆ ಎಂದು ಹೇಳಿದ್ದೇನೆ. ಕಾಡುಗೊಲ್ಲರನ್ನು ಸೇರಿಸಬೇಕೆಂದು ಹೇಳಿದ್ದಾರೆ, ಅದರಂತೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಮ್ಮ ಸರ್ಕಾರದಲ್ಲಿ ಸ್ಪಷ್ಟತೆ ಇದ್ದು, ಗೊಲ್ಲ ಮತ್ತು ಕಾಡುಗೊಲ್ಲರಿಗೆ ನ್ಯಾಯವನ್ನು ಕೊಡುತ್ತೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಹಿತರಕ್ಷಣೆಯನ್ನು ಕಾಯಲು ಸರ್ಕಾರ ಬದ್ಧವಾಗಿದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಗೊಲ್ಲ ಸಮುದಾಯಕ್ಕೆ ಶಿಫಾರಸ್ಸು ಮಾಡಿಲ್ಲ ಎನ್ನುವುದಾದರೆ ಪರಿಶೀಲನೆ ಏಕೆ ಮಾಡುತ್ತಾರೆ? ನೇರವಾಗಿ ಮತ್ತು ಬಹಿರಂಗವಾಗಿ ಹೇಳಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬುಡಕಟ್ಟು ಅಧ್ಯಯನ ವರದಿಯನ್ನು ಸರ್ಕಾರ ನೇಮಕ ಮಾಡಿರುವ ಅಧ್ಯಯನ ಸಂಸ್ಥೆ ಕೊಡುತ್ತಿದೆ. ಆ ವರದಿಯನ್ನು ಅರ್ಥ ಮಾಡಿಕೊಂಡು, ಅದಕ್ಕೆ ಬೇಕಾದ ಮಾಹಿತಿಗಳನ್ನು ಪಡೆದುಕೊಂಡು, ಅವರಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ನ್ಯಾಯ ಕೊಡಲು ಏನೇನು ಸೇರಿಸಬೇಕೋ, ಅವುಗಳನ್ನು ಸೇರಿಸಲು ಸರ್ಕಾರವಾಗಿ ನಾವು ನಿರ್ಧಾರ ಮಾಡಬೇಕು. ಯಾವುದೇ ಕಾರಣದಿಂದ ಹೇಳಿದಂತೆ ಕೊಡು ಎಂದು ಹೇಳಲು ಆಗುವುದಿಲ್ಲ. ಆದರೂ ಗೊಲ್ಲರು ಅಲೆಮಾರಿ ಜನಾಂಗದ ವ್ಯಾಪ್ತಿಯಲ್ಲಿ ಬರುವುದರಿಂದ ಹಾಗೂ ಬಡವರು ಮತ್ತು ಸಮಸ್ಯೆಗಳನ್ನು ಹೊಂದಿರುವವರಾಗಿದ್ದು, ಅವರಿಗೆ ಬರಬೇಕಾದ್ದನ್ನು ನ್ಯಾಯವಾಗಿ ಕೊಡುತ್ತೇವೆ. **ಮಾನ್ಯ ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ, ಈ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಅರ್ಥವಾಗಿಸಲು ಇನ್ನೂ ಅವರು ಏನಾದರೂ ಹೇಳುವುದಿದ್ದರೆ ಗೊಲ್ಲ ಸಮುದಾಯದ 2-3 ಶಾಸಕರನ್ನು ಕರೆದು ಈ ಬಗ್ಗೆ ಚರ್ಚಿಸುತ್ತೇನೆ.**

**ಪ್ರಶ್ನೆ ಸಂಖ್ಯೆ: 566**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ. ದೇವೇಗೌಡ:-** ಮಾನ್ಯ ಸಭಾಪತಿಯವರೇ, ವಿವರವಾದ ಉತ್ತರವನ್ನು ಒದಗಿಸಿದ್ದು, 2022-23ನೇ ಸಾಲಿನಲ್ಲಿ ಜಿಲ್ಲಾವಾರು ನೀಡಿರುವ ಕೃಷಿ ಪರಿಕರಗಳು ಮತ್ತು ಗುಣ ನಿಯಂತ್ರಣ ಯೋಜನೆಗೆ ಅನುದಾನವನ್ನು ಬಿಡುಗಡೆ ಮಾಡಿರುವ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಸ್ವಲ್ಪ confusion ಇದ್ದು, ನನ್ನ ಕ್ಷೇತ್ರ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಪಟ್ಟಿಯಲ್ಲಿ ಸೇರಿಸಿಲ್ಲ. ಜೊತೆಗೆ ಈ ಸಾಲಿನಲ್ಲಿ ಕೃಷಿ ಚಟುವಟಿಕೆಗಳಿಗೆ ಯಂತ್ರೋಪಕರಣ ಮತ್ತು ಸಾಮಾಗ್ರಿಗಳನ್ನು ಪಡೆಯಲು ಎಷ್ಟು ಅರ್ಜಿ ಸ್ವೀಕರಿಸಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದು, ಇದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೇರಿರುವುದಿಲ್ಲ ಹಾಗೂ ಉಳಿದವುಗಳ ಬಗ್ಗೆ ಉತ್ತರಗಳನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಿಗೆ ಧನ್ಯವಾದಗಳು.

**ಸಭಾಪತಿಯವರು:-** ಆಯಿತು.

**(ಮುಂದು)**

**(1150) 23.12.2022/1.00/ಹೆಚ್‌ವಿ:ವಿಕೆ**

**ಪ್ರಶ್ನೆ ಸಂಖ್ಯೆ: 708**
**(ಉತ್ತರವನ್ನು ಲಗತ್ತಿಸಿದೆ)**

**ಡಾ||ತಳವಾರ್ ಸಾಬಣ್ಣ:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿಯಾಗಿರುವ ಉತ್ತರ ಸುಮಾರು 25 ವರ್ಷಗಳಿಂದ ಬರುತ್ತಿದೆ. ಇದಕ್ಕೆ ಕಾರಣವೇನೆಂದರೆ, ಕೋಲಿ/ಕಬ್ಬಲಿಗ/ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆನ್ನುವ ಹೋರಾಟ ಸುಮಾರು 40 ವರ್ಷಗಳಿಂದ ನಡೆಯುತ್ತಿದೆ. ಈ ಜನಾಂಗ ಕರ್ನಾಟಕದ ಎಲ್ಲ ಭಾಗಗಳಲ್ಲಿ 37 ಪರ್ಯಾಯ ಪದಗಳಿಂದ ಹರಿದುಹಂಚಿ ಹೋಗಿವೆ. ಈ ಜನರಲ್ಲಿ ಒಗ್ಗಟ್ಟು ಇಲ್ಲ. ಡಾ||ನಾಡಣಗೌಡ ಸಮಿತಿಯ ಶಿಫಾರಸ್ಸು, ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಿಂದ ಹಿಡಿದು ಚಿನ್ನಪ್ಪ ರೆಡ್ಡಿ ಆಯೋಗದವರೆಗೆ ಈ ಸಮೂದಾಯವು ಹಿಂದುಳಿದ ವರ್ಗವೆಂದು ಗುರುತಿಸಲ್ಪಟ್ಟಿದೆ. ಈ ಸಮೂದಾಯ ಎಸ್.ಟಿ. ಪಟ್ಟಿಗೆ ಸೇರುವುದಕ್ಕೆ ಅರ್ಹತೆಯನ್ನು ಹೊಂದಿದೆ ಎಂದು ಆ ಆಯೋಗಗಳು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿವೆ. ಮಂಡಲ್ ಆಯೋಗವೂ ಸಹ, "ಈ ಸಮೂದಾಯಕ್ಕೆ ಅಸ್ಪೃಶ್ಯತೆಯ ವರ್ಗಕ್ಕೆ ಸೇರುವಂತಹ ಲಕ್ಷಣ ಇದೆ" ಎನ್ನುವ ವರದಿಯನ್ನು ಮಾಡಿದೆ. ಇದಲ್ಲದೆ 1881 ರಿಂದ 1931ರಲ್ಲಿ ಬ್ರಿಟಿಷ್‌ನವರ ಕಾಲದಲ್ಲಿ ಆಗಿರುವಂತಹ ಎಲ್ಲ ಜನಗಣತಿಯಲ್ಲಿಯೂ ಸಹ ಮೀನುಗಾರಿಕೆ ಮತ್ತು ಬೇಟೆಗಾರಿಕೆ ಮಾಡುವಂತಹ ಸಮುದಾಯ ಎನ್ನುವ ಉಲ್ಲೇಖ ಬಹಳ ಸ್ಪಷ್ಟವಾಗಿದೆ. ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಮತ್ತು ಮಾಜಿ ಮುಖ್ಯ ಸಚೇತಕರಾಗಿದ್ದ ದಿವಂಗತ ವಿಠ್ಠಲ್‌ರವರ ನೇತೃತ್ವದಲ್ಲಿ 1996ರಲ್ಲಿ ಒಂದು ದೊಡ್ಡ ಹೋರಾಟ ಮಾಡಲಾಯಿತು. ಇದರ ಪರಿಣಾಮವಾಗಿ ದಿನಾಂಕ:14.11.1996ರಲ್ಲಿ ಇದಕ್ಕೆ ಸಂಬಂಧಪಟ್ಟ ಕಡತವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಯಿತು. 1996 ರಿಂದ ಇಲ್ಲಿಯವರೆಗೆ ಸರಿಸುಮಾರು 9 ಬಾರಿ ಕೇಂದ್ರ ಸರ್ಕಾರಕ್ಕೆ ಫೈಲ್ ಹೋಗಿ ಬಂದಿದೆ. ಈ ಜನಾಂಗದವರನ್ನು ಎಸ್.ಟಿ. ಪಟ್ಟಿಗೆ ಸೇರಿಸಲು ಕರ್ನಾಟಕ ಸರ್ಕಾರ ಯಾವ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಕೋಲಿ/ಕಬ್ಬಲಿಗ/ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳಿಂದ ಕರೆಯಲ್ಪಡುವ ಸಮುದಾಯವನ್ನು ಪರಿಶಿಷ್ಟರ ಪಟ್ಟಿಯಲ್ಲಿ ಭಾರತದ ಸಂವಿಧಾನ ಅನುಚ್ಛೇದ 342(2) ಪ್ರಕಾರ ಯಾವುದೇ ಬೇರೆ ಜಾತಿಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬೇಕಾದರೆ ಕೆಲವೊಂದು ಶಿಫಾರಸ್ಸುಗಳು ಆಗಬೇಕಾಗಿದೆ. ಬೆಸ್ತ/ಗಂಗಾಮತ ಇದರ 37 ಪರ್ಯಾಯ ಪದಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ಅಂತಿಮ ವರದಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ದಿನಾಂಕ:03.03.2014ರಲ್ಲಿ ಕಳುಹಿಸಲಾಗಿದೆ. ನಂತರ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ಕೆಲವೊಂದು ಅಂಶಗಳ ಬಗ್ಗೆ ಸಮರ್ಥನೆ ಅಭಿಪ್ರಾಯಗಳನ್ನು ಕೇಳಿರುತ್ತಾರೆ. ಆಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಅಭಿಪ್ರಾಯವನ್ನು ಪಡೆದು ರಾಜ್ಯ ಸರ್ಕಾರದಿಂದ ದಿನಾಂಕ:12.07.2019 ಮತ್ತು ದಿನಾಂಕ:02.02.2021ರಂದು ಹೆಚ್ಚುವರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ. ಈ ವಿಚಾರಗಳ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ಅಂತಿಮ ಚರ್ಚೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿಂದ ಕಡತ ಬಂದ ಕೂಡಲೇ ರಾಜ್ಯ ಸರ್ಕಾರ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತದೆ.

**ಡಾ॥ ತಳವಾರ್ ಸಾಬಣ್ಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಾದ ಅಂಶವಾಗಿದೆ. ಕೋಲಿ/ಕಬ್ಬಲಿಗ ಇದರ ಪರ್ಯಾಯ ಪದಗಳು ಭಾರತದಲ್ಲಿ ಸರಿಸುಮಾರು 15 ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿದೆ. ಅದೇ ರೀತಿಯಲ್ಲಿ ಭಾರತದ 9 ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ koli/Tokrekoli ಮುಂತಾದ 5 ಪದಗಳು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿದೆ. ಹೀಗಾಗಿ ಬಿಟ್ಟು ಹೋದ ಪದಗಳು ಕೋಲಿ/ಕಬ್ಬಲಿಗ ಇದರ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸಬೇಕೆನ್ನುವುದು ನನ್ನ ಮೂಲ ಒತ್ತಾಯವಾಗಿದೆ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತೆ koli/Tokrekoli/kolcha ಜಾತಿಗಳ ಬಗ್ಗೆ ನಾವು ಈಗಾಗಲೇ ಕುಲಶಾಸ್ತ್ರ ಅಧ್ಯಯನ ಮಾಡಿ, ಯಾವುದೇ ರೀತಿಯಲ್ಲಿಯೂ ಮಿಸ್ ಆಗದೇ ಇರುವಂತೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಿದ ನಂತರ ಅದನ್ನು ಪಟ್ಟಿಯಲ್ಲಿ ಸೇರಿಸುವುದು ಮಾತ್ರ ಬಾಕಿ ಉಳಿದಿದೆ. ಈ ನಿಟ್ಟಿನಲ್ಲಿ ನಾವು ಪರಿಶೀಲನೆ ನಡೆಸುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಆದಷ್ಟು ಬೇಗನೇ ತರಸಿಕೊಳ್ಳುವಂತಹ ಪ್ರಯತ್ನ ಮಾಲಾಗುತ್ತದೆ.

**ಪ್ರಶ್ನೆ ಸಂಖ್ಯೆ:679**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. :-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೊಸಹೊಸ ಯೋಜನೆಗಳನ್ನು ಜಾರಿಗೆ ತರುವುದರ ಜೊತೆಗೆ ಅವುಗಳನ್ನು ವಿಸ್ತರಿಸಿ, ಕಾರ್ಮಿಕರಿಗೆ ತಲುಪಿಸುವಂತಹ ಕೆಲಸಗಳನ್ನು ಮಾಡಿರುವ ಮಾನ್ಯ ಕಾರ್ಮಿಕ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಮಿಕ ಇಲಾಖೆಯಿಂದ ಎಲ್ಲ ಯೋಜನೆಗಳು ಕಾರ್ಮಿಕರಿಗೆ ತಲುಪಿದೆ. ಈ ಶ್ರೇಯಸ್ಸು ಕಾರ್ಮಿಕ ಇಲಾಖೆಗೆ ಮಾತ್ರ ಸಲ್ಲುವುದಿಲ್ಲ. ಏಕೆಂದರೆ, ಕಾರ್ಮಿಕ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವ ಹಿನ್ನೆಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಇಲಾಖೆ ಮತ್ತು ಕಾರ್ಮಿಕರ ನಡುವೆ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸರ್ಕಾರದ ಯೋಜನೆಗಳು ಕಾರ್ಮಿಕರನ್ನು ತಲುಪಿದೆ.

ಸನ್ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಶೈಕ್ಷಣಿಕ ವರ್ಷದ ಅಂತಿಮ ಘಟ್ಟಕ್ಕೆ ಬರುತ್ತಿದ್ದೇವೆ. ಆದರೆ, ಶೈಕ್ಷಣಿಕ ಸಹಾಯಧನಕ್ಕಾಗಿ ಬಂದಿರುವ ಸುಮಾರು 42,172 ಅರ್ಜಿಗಳು ಇನ್ನೂ ಬಾಕಿ ಇವೆ. ಸರ್ಕಾರದ ಯೋಜನೆಗಳು ಜನರಿಗೆ ತಲುಪುವಲ್ಲಿ ಇರುವಂತಹ ತೊಂದರೆಯೇನೆಂದರೆ, E-Governance ವ್ಯವಸ್ಥೆ ಜಾರಿಗೆ ಬಂದ ನಂತರ ಅದಕ್ಕೆ ಬೇಕಾಗಿರುವಂತಹ ವ್ಯವಸ್ಥೆಗಳು ತಳಮಟ್ಟದಲ್ಲಿ ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳು ತಡವಾಗಿ ಅರ್ಜಿಯನ್ನು ಕೊಟ್ಟಾಗ ಅಥವಾ ತಾಂತ್ರಿಕ ಕಾರಣಗಳಿಂದಾಗಿ ಆ ಅರ್ಜಿ ಪೋರ್ಟಲ್‌ಗೆ ಎಂಟ್ರಿ ಆಗದೇ ಇರುವಾಗ ಬಹಳಷ್ಟು ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಿದ್ದಾರೆ. ನನ್ನ ಮಾಹಿತಿಗೋಸ್ಕರ ಮಾನ್ಯ ಸಚಿವರಿಗೆ ಒಂದು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮೊದಲು ಈ ಯೋಜನೆ ಎಷ್ಟನೇ ತರಗತಿಯ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮತ್ತು ಅವರು ಕಾರ್ಮಿಕ ಸಚಿವರಾದ ಮೇಲೆ ಎಷ್ಟನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. 2021-22ನೇ ಸಾಲಿನಿಂದ E-Governance ಇಲಾಖೆಯ ಎಸ್.ಎಸ್.ಪಿ., ಪೋರ್ಟಲ್‌ನಲ್ಲಿ ಸಮಸ್ಯೆಯುಂಟಾಗಿರುವುದು ಸತ್ಯಸಂಗತಿಯಾಗಿದೆ. ಎರಡು ಕಾರಣಗಳಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಮೊದಲನೆಯದಾಗಿ ಇ-ಪೋರ್ಟಲ್‌ನ ಸಮಸ್ಯೆಯಾಗಿದೆ. ಆನಂತರ ಕೆನರಾ ಬ್ಯಾಂಕ್ ಮತ್ತು ಬರೋಡಾ ಬ್ಯಾಂಕ್‌ಗಳು ವಿಲೀನಗೊಂಡ ನಂತರ ಅಕೌಂಟ್‌ನಲ್ಲಿ ವ್ಯತ್ಯಾಸವಾದ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗಿತ್ತು. ಇದರಿಂದಾಗಿ ಸುಮಾರು 42,000 ವಿದ್ಯಾರ್ಥಿಗಳು ತೊಂದರೆಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ನಂತರ ಅನೇಕ ಜನ ವಿದ್ಯಾರ್ಥಿಗಳು ತಮ್ಮ ಕೋಡ್‌ಗಳನ್ನು ಮತ್ತು ಆಧಾರ್ ಕಾರ್ಡ್‌ಗಳನ್ನು ಲಿಂಕ್ ಮಾಡುವುದರಲ್ಲಿ ವ್ಯತ್ಯಾಸ ಮಾಡಿಕೊಂಡರು. ಈಗ ನಾವು ಈ ಎಲ್ಲ ಅಂಶಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, 2,27,489 ಜನ ವಿದ್ಯಾರ್ಥಿಗಳಿಗೆ 2013ನೇ ಸಾಲಿನಿಂದ 2018ರವರೆಗೆ ಸುಮಾರು 103 ಕೋಟಿ ರೂಪಾಯಿಗಳನ್ನು ವಿದ್ಯಾರ್ಥಿವೇತನದ ರೂಪದಲ್ಲಿ ಪಾವತಿ ಮಾಡಲಾಗಿದೆ. ಸಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದರೆ. 2018-19ನೇ ಸಾಲಿನಲ್ಲಿ 95,637 ಜನ ವಿದ್ಯಾರ್ಥಿಗಳಿಗೆ 53 ಕೋಟಿ 37 ಲಕ್ಷ ರೂಪಾಯಿಗಳನ್ನು ವಿದ್ಯಾರ್ಥಿವೇತನವನ್ನಾಗಿ ಪಾವತಿ ಮಾಡಲಾಗಿದೆ. 2019ನೇ ಸಾಲಿನಿಂದ ಇವತ್ತಿನವರೆಗೆ 2,78,155 ವಿದ್ಯಾರ್ಥಿಗಳಿಗೆ 1052 ಕೋಟಿ ರೂಪಾಯಿಗಳನ್ನು ವಿದ್ಯಾರ್ಥಿವೇತನದ ರೂಪದಲ್ಲಿ ನೀಡಲಾಗಿದೆ. ಇವತ್ತಿನ ಪರಿಸ್ಥಿತಿಗೆ ತಕ್ಕಂತೆ ಮಾನದಂಡಗಳನ್ನು ಬದಲಾವಣೆ ಮಾಡಿರುವ ಹಿನ್ನೆಲೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿವೇತನದ ಮೊತ್ತ ಹೆಚ್ಚಾಗುವುದಕ್ಕೆ ಕಾರಣವಾಗಿದೆ.

ಮಾನ್ಯ ಸದಸ್ಯರು, ನಾನು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ಯಾವ ತರಗತಿಯಿಂದ ಯಾವ ತರಗತಿಯವರೆಗೆ ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ. ಹಿಂದೆ ಕೆಲವೇ ಶಿಕ್ಷಣ ಪದ್ಧತಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವಂತಹ ವ್ಯವಸ್ಥೆಯಿತ್ತು. ಮೊದಲು ಎಲ್.ಕೆ.ಜಿ.ಗೆ 4,000 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು. ಅದನ್ನು ನಾವು 5,000ಕ್ಕೆ ಹೆಚ್ಚಿಸಿದ್ದೇವೆ.

ಒಂದನೆಯ ತರಗತಿಗೆ 3,000 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು, ಅದನ್ನು 5,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. 5ನೇ ತರಗತಿಯಿಂದ 8ನೇ ತರಗತಿಯವರೆಗೆ 6,000 ರೂಪಾಯಿಗಳನ್ನು ನೀಡಲಾಗುತ್ತಿತ್ತು ಅದನ್ನು 8,000 ರೂಪಾಯಿಗಳಿಗೆ ಹೆಚ್ಚಿಸಲಾಯಿತು. 8ನೇ ತರಗತಿಯಿಂದ 10 ತರಗತಿಯವರೆಗೆ 10,000 ರೂಪಾಯಿಗಳನ್ನು ನೀಡಲಾಗುತ್ತಿತ್ತು, ಅದನ್ನು ಈಗ 12,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಪಿ.ಯು.ಸಿ.,ಗೆ 12,000 ರೂಪಾಯಿಗಳನ್ನು ನೀಡಲಾಗುತ್ತಿತ್ತು, ಅದನ್ನು 15,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಡಿಪ್ಲೋಮಾ ವಿದ್ಯರ್ಥಿಗಳಿಗೆ 15,000 ರೂಪಾಯಿಗಳತ್ತು ಅದನ್ನು 20,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಬಿ.ಎಸ್ಸಿ., ಮತ್ತು ನರ್ಸಿಂಗ್‌ನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವೇ ಇರಲಿಲ್ಲ. ನಾವು ಹೊಸದಾಗಿ ಸೇರ್ಪಡೆ ಮಾಡಿ 40,000 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡುತ್ತಿದ್ದೇವೆ. ಡಿ.ಎಡ್.,ಗೆ 10,000 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು, ಅದನ್ನು 25,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಅದೇ ರೀತಿಯಲ್ಲಿ ಬಿ.ಎಡ್.,ಗೆ 15000 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು ಅದನ್ನು 35,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

(ಮುಂದು)

(1151) 23.12.2022 1.10 ಪಿಕೆ:ಬಿಎನ್‌ಎಸ್

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಮುಂದು):**

Graduation ಗೆ ಇರಲಿಲ್ಲ; ನಂತರ ರೂ. 15000 ಇದ್ದುದನ್ನು ರೂ. 25000 ಮಾಡಿದ್ದೇವೆ. LLB/ LLM ಗೆ ಇರಲಿಲ್ಲ, ಅದನ್ನು ಹೊಸದಾಗಿ ಸೇರ್ಪಡೆ ಮಾಡಿ ರೂ. 30000 ಮಾಡಿದ್ದೇವೆ. Any Post Graduation ಗೆ ರೂ. 20000 ಇತ್ತು, ಅದನ್ನು ಹೆಚ್ಚು ಮಾಡಿ ರೂ. 35000 ಮಾಡಿದ್ದೇವೆ. Technical and Medical education ಗೆ ಸಂಬಂಧಪಟ್ಟಂತೆ ರೂ. 25000 ಇದ್ದುದನ್ನು ರೂ. 50000 ಮಾಡಿದ್ದೇವೆ. M. Tech. ನವರಿಗೆ ರೂ. 35000 ಇದ್ದುದನ್ನು ರೂ. 60000 ಮಾಡಿದ್ದೇವೆ. M.B.B.S. or equivalent medical course ಗೆ ರೂ.35000

ಇತ್ತು, ಅದನ್ನು ರೂ. 60000ಕ್ಕೆ ಏರಿಸಿದ್ದೇವೆ. M.D. ಗೆ ರೂ.45000 ಇತ್ತು ಅದನ್ನು ರೂ. 75000 ಮಾಡಿದ್ದೇವೆ. ಹೀಗೆ ಇವತ್ತಿನ ಕಾಲಮಾನಕ್ಕೆ ತಕ್ಕಂತೆ ಹೆಚ್ಚಿನ ಹಣ ನೀಡುವಂತಹ ಕೆಲಸ ಮಾಡಿದ್ದೇವೆ. Ph.D. ಗೆ ರೂ. 25000 ಇತ್ತು, ಅದನ್ನು 50000 ಮಾಡಿದ್ದೇವೆ. IIT, IIIT, IIM ನಲ್ಲಿ ಪಾಸಾದಂತಹ ಕಾರ್ಮಿಕ ಮಕ್ಕಳಿಗೆ ಎಲ್ಲಾ ಹಣವನ್ನು ನಾವೇ ತುಂಬಿಕೊಡಬೇಕೆಂದು ನಿರ್ಣಯವನ್ನು ಸರ್ಕಾರ ಕೈಗೊಂಡಿತು. ಐ.ಎ.ಎಸ್.-ಕೆ.ಎ.ಎಸ್. ಪರೀಕ್ಷೆಯಲ್ಲಿ ಪಾಸಾದರೆ ಅದಕ್ಕೆ ತಗಲುವ ಎಲ್ಲಾ ಹಣವನ್ನು ನಾವೇ ತುಂಬಬೇಕು ಎಂದು ನಿರ್ಣಯ ಮಾಡಿದ್ದೇವೆ. ಆ ಕಾರಣದಿಂದ ರೂ. 1052 ಕೋಟಿ ಹಣವನ್ನು ಕೊಡಬೇಕಾಯಿತು. ಮಾನ್ಯ ಸಭಾಪತಿಯವರೇ, ಇಷ್ಟೇ ಅಲ್ಲದೇ ಎಲ್ಲರ ವೇತನಗಳನ್ನೂ ಹೆಚ್ಚು ಮಾಡಿದ್ದೇವೆ. Retirement ಭತ್ಯೆಯನ್ನು ಹೆಚ್ಚು ಮಾಡಿದ್ದೇವೆ, ಹೆರಿಗೆ ಭತ್ಯೆ ಜಾಸ್ತಿ ಮಾಡಿದ್ದೇವೆ, ಮದುವೆ ಮಾಡಿಕೊಳ್ಳಲು ನೀಡುತ್ತಿದ್ದ ರೂ. 25000 ಬದಲಿಗೆ ರೂ.60000 ಕೊಡುತ್ತಿದ್ದೇವೆ. ಈ ಕಾರಣಕ್ಕೆ 2013 ರಿಂದ 2018ರ ತನಕ 2,68,472 ಜನರಿಗೆ ರೂ. 276 ಕೋಟಿ ಹಣ ವಿನಿಯೋಗವಾಗಿತ್ತು. 2018 ರಿಂದ 2019ರ ತನಕ ಸಮ್ಮಿಶ್ರ ಸರ್ಕಾರದಲ್ಲಿ 1,14,241 ಜನಕ್ಕೆ ರೂ. 124 ಕೋಟಿ ವಿನಿಯೋಗವಾಗಿತ್ತು. 2019 ರಿಂದ 2022ರ ತನಕ ಅಂದರೆ ಇವತ್ತಿನವರೆಗೆ 44,52,611 ಫಲಾನುಭವಿಗಳಿಗೆ, ಎಲ್ಲಾ ಯೋಜನೆಗಳಿಗೂ ಸೇರಿದಂತೆ ರೂ.3048 ಕೋಟಿ ಹಣವನ್ನು ವಿತರಣೆ ಮಾಡಲಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕ ಇಲಾಖೆ ಅನೇಕ ಸೌಲಭ್ಯಗಳನ್ನು ಕೊಡುವುದರ ಜೊತೆಗೆ, ನೇರವಾಗಿ DBT (Direct Benefit Transfer) ಮುಖಾಂತರ ಹಣ ಹೋಗುತ್ತದೆ. ಮೊದಲು ಈ ವ್ಯವಸ್ಥೆ ಇಲ್ಲದ್ದರಿಂದ ದುಡ್ಡನ್ನು ಕಬಳಿಸುವ ಏಜೆಂಟ್‌ಗಳಿರುತ್ತಿದ್ದರು. ಇವತ್ತು ನಮ್ಮ ಇಲಾಖೆ ಸಂಪೂರ್ಣವಾಗಿ DBT ಮೂಲಕ ಹಣ ವಿತರಣೆ ಮಾಡುತ್ತಿರುವುದರಿಂದ ಫಲಾನುಭವಿಗಳ ಅಕೌಂಟ್‌ಗೆ ನೇರವಾಗಿ ಹಣ ಹೋಗುತ್ತಿದೆ. ಈ ರೂ. 3048 ಕೋಟಿ ಹಣ ನೇರ ಫಲಾನುಭವಿಗಳ ಅಕೌಂಟ್‌ಗೆ ಹೋಗಿದೆ. ಕಾರ್ಮಿಕರ ಶ್ರಮದ ಹಣವನ್ನು ಕಾರ್ಮಿಕರಿಗೆ ಕೊಡುವುದಕ್ಕೆ ಸರ್ಕಾರ ಕಟಿಬದ್ಧವಾಗಿದೆ. ಕಳೆದ 9 ವರ್ಷಗಳಿಂದ 3 ಲಕ್ಷ 6 ಸಾವಿರ ಅರ್ಜಿಗಳು ಪೆಂಡಿಂಗ್ ಇತ್ತು. ನಾವು ಒಂದು ತಿಂಗಳ ಅಭಿಯಾನದಲ್ಲಿ worklist ಮಾಡಿ, ಅದಾಲತ್ ಎಂದು ಮಾಡಿ 2,98,000 ಪ್ರಕರಣಗಳಿಗೆ

ಸಂಬಂಧಪಟ್ಟಂತೆ ರೂ. 96 ಕೋಟಿ 55 ಲಕ್ಷ ಹಣವನ್ನು ಕಾರ್ಮಿಕರ ಖಾತೆಗೆ ಜಮಾ ಮಾಡುವಂತಹ ಕೆಲಸ ಮಾಡಿದ್ದೇವೆ.

**ಸಭಾಪತಿಯವರು:-** ಇತರ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಿ.

**ಪ್ರಶ್ನೆ ಸಂಖ್ಯೆ: 587**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿರುವ ಒಂದು ನೀರಾ ಘಟಕದ ವಿಚಾರವಾಗಿದೆ. ಆ ಸಂದರ್ಭದಲ್ಲಿ ತೆಂಗು ಬೆಳೆಗಾರರ ಬೆಳೆಯ ಬೆಲೆ ಕುಸಿತವಾಗಿತ್ತು, ನುಸಿ ರೋಗ ಬಂದಿದ್ದರಿಂದ ಅಂತಹ ರೈತರ ರಕ್ಷಣೆಗೆ ಹುಟ್ಟಿಕೊಂಡಂಥ ಘಟಕ ಅದಾಗಿದೆ. ಸರ್ಕಾರ ಒಂದು ವರ್ಷದವರೆಗೆ ನಿರ್ವಹಿಸಿ ನಂತರ ಮುಚ್ಚಿದರು. ಅನೇಕ ವರ್ಷಗಳಿಂದ ಅದನ್ನು ಮುಚ್ಚಲಾಗಿದೆ. ನಾನು ಹಿಂದಿನ ಅಧಿವೇಶನದಲ್ಲೂ ಈ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಭಾಪತಿಯವರೇ, ಆ ಘಟಕವನ್ನು ಬೇರೆ ಸಂಸ್ಥೆಗೆ ವಹಿಸಿಕೊಡುವ ಪ್ರಕ್ರಿಯೆ ಸರ್ಕಾರದ ಮುಂದೆ ಇತ್ತು. ಆದರೆ ಇನ್ನೂ ಕೂಡ ಅದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿಲ್ಲ. ಆ ಘಟಕ ಮುಚ್ಚಿ ಹೋಗಿರುವುದರಿಂದ ಅಲ್ಲಿರುವ ಯಂತ್ರಗಳು ಹಾಳಾಗುತ್ತಿವೆ. ಉತ್ತರದಲ್ಲಿ, ಕೇರಳದ ಒಂದು ಸಂಸ್ಥೆಯೊಂದಿಗೆ ಆಗಬೇಕಿದ್ದ ಒಡಂಬಡಿಕೆ ಆಗಲಿಲ್ಲ ಎಂದು ತಿಳಿಸಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯ ರೈತ ಉತ್ಪಾದಕ ಸಂಸ್ಥೆ, ವಿಟ್ಲ, ಬಂಟ್ವಾಳ ತಾಲ್ಲೂಕು ಇವರಿಗೆ ಈ ಘಟಕವನ್ನು ವಹಿಸಬೇಕೆಂದು ಯೋಜನಾ ವರದಿಯನ್ನು ಮಾಡುವುದಕ್ಕೆ ತಿಳಿಸಿದ್ದೇವೆ ಎಂದು ಹೇಳಿದ್ದೀರಿ. ಬಹುಶಃ ನಾನು ಕಳೆದ ಸಲ ಪ್ರಶ್ನೆ ಕೇಳಿದಾಗ ತಾವು, ಶೀಘ್ರವಾಗಿ ಇದನ್ನು ವಿಲೇವಾರಿ ಮಾಡುತ್ತೇವೆ ಎಂದು ಹೇಳಿದ್ದಿರಿ. ಈಗ 6 ತಿಂಗಳು ಕಳೆದು ಹೋಗಿದೆ. ನಿಮ್ಮ ಅಧಿಕಾರಿಗಳು ಮೊನ್ನೆಯವರೆಗೆ ಅದರ ಬಗ್ಗೆ ಕ್ರಮ ಕೈಗೊಂಡಿಲ್ಲ. ಈ ಪ್ರಶ್ನೆ ಹೋದಮೇಲೆ, ಶ್ರೀಘ್ರವಾಗಿ ಅವರನ್ನು ರಾತ್ರೋ-ರಾತ್ರಿ ಕರೆಸಿ ಉತ್ತರ ತರಿಸಿದ್ದೀರಿ.

**ಶ್ರೀ ಮುನಿರತ್ನ:-** ಮಾನ್ಯ ಸಭಾಪತಿಯವರೇ, ಈ ಘಟಕ 2011ರಲ್ಲಿ ಪ್ರಾರಂಭವಾಯಿತು. ಅದಾದ ಮೇಲೆ ಈ ಘಟಕ ನಿಂತು ಹೋದಾಗ, ಕೇರಳ ರಾಜ್ಯದ ಒಂದು ಸಂಸ್ಥೆ ಮುಂದೆ ಬಂದು, ನಾವು ಇದನ್ನು ನಡೆಸುತ್ತೇವೆ ಎಂದು ಹೇಳಿತ್ತು. ಅವರು 2014-15ರಲ್ಲಿ ಪ್ರಾರಂಭ ಮಾಡಿ, ನಂತರ ಮತ್ತೆ ನಿಂತು ಹೋಯಿತು. ಅದಾದ ಮೇಲೆ ಅವರ ಜೊತೆ ಸಂಪರ್ಕ ಮಾಡುವ ಪ್ರಯತ್ನ ಮಾಡಿದಾಗ ಅದಕ್ಕೆ ಸ್ಪಂದಿಸುವಂತಹ ಕೆಲಸ ಮಾಡಿಲ್ಲ. ಮತ್ತೆ ಇದನ್ನು FPO (Farmers

Producers Organisation) ನಲ್ಲಿ, ರೈತ ಉತ್ಪಾದಕ ಸಂಸ್ಥೆ ಮೂಲಕ ನಿರ್ವಹಿಸುವ ದಿಸೆಯಲ್ಲಿ 2020ರಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. 3 ಸಲ ನಮ್ಮ ಡೈರೆಕ್ಟರ್‌ಗಳು ಸಭೆಯನ್ನು ಮಾಡಿದ್ದಾರೆ. ಆದರೂ ಅದರಿಂದ ಏನೂ ಪ್ರಯೋಜನವಾಗಿಲ್ಲ. ಈಗ ಒಂದು ಏಜೆನ್ಸಿ, ನಾವು ಇದನ್ನು ಮಾಡುತ್ತೇವೆ ಎಂದು ನಮ್ಮ ಜೊತೆಗೆ ಬಂದಿದೆ. ಆದರೆ ಅವರಿಗೆ ನೇರವಾಗಿ ವಹಿಸಿಕೊಡುವುದಕ್ಕೆ ನಮ್ಮಲ್ಲಿ ಅವಕಾಶ ಇಲ್ಲ. ಟೆಂಡರ್ ಮೂಲಕ ಕೊಡಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಬಂದಿರುವಂತಹ ಏಜೆನ್ಸಿ ಜೊತೆ, ಅಬಕಾರಿ ಅಧಿಕಾರಿಗಳ ಜೊತೆ ಮತ್ತು ಶಾಸಕರ ಜೊತೆ ಮಂಗಳವಾರ ಸಂಜೆ 5.00 ಗಂಟೆಗೆ ಒಂದು ಸಭೆ ಮಾಡುತ್ತೇನೆ. ಈ ಘಟಕವನ್ನು ಪುನಃ ಪ್ರಾರಂಭ ಮಾಡುವ ಪ್ರಯತ್ನ ಮಾಡುತ್ತೇನೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಟೆಂಡರ್ ಮುಖಾಂತರ ಕರೆಯುವುದಾದರೆ ಆ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನು ಏಕೆ ಕೇಳಬೇಕಾಗಿತ್ತು? ಮೊದಲೇ ಟೆಂಡರ್ ಕರೆದು, ನಂತರ ಯೋಜನಾ ವರದಿಯನ್ನು ಕೇಳುವುದು ಕ್ರಮವಾಗಿದೆ.

**ಶ್ರೀ ಮುನಿರತ್ನ:-** ಮುಂದೆ ಈ ಕುರಿತು ಏನು ಮಾಡಬೇಕು ಎಂದು ತಿಳಿದುಕೊಳ್ಳಲು ಅಬಕಾರಿ ಇಲಾಖೆಯ ಅಧಿಕಾರಿಗಳು ಇರಬೇಕು ಎನ್ನುವ ಉದ್ದೇಶದಿಂದಲೇ ಒಂದು ಸಭೆ ಮಾಡುತ್ತೇನೆ ಎಂದು ಹೇಳುತ್ತಿದ್ದೇನೆ. ಮಂಗಳವಾರ ಸಂಜೆ 5.00 ಗಂಟೆಗೆ ಈ ಸಭೆಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 660, ಶ್ರೀ ರಾಜೇಂದ್ರ ರಾಜಣ್ಣನವರು ಅನುಪಸ್ಥಿತರಾಗಿದ್ದಾರೆ.

**ಪ್ರಶ್ನೆ ಸಂಖ್ಯೆ: 629**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ದೇವನಹಳ್ಳಿ ತಾಲ್ಲೂಕಿನಲ್ಲಿ 40 ಕ್ವಾರಿಗಳೂ ಮತ್ತು 160 ಗ್ರಾನೈಟ್ ಫ್ಯಾಕ್ಟರಿ / ಕಟ್ಟಿಂಗ್ ಕೇಂದ್ರಗಳಂದ ಏನು ಧೂಳು ಬರುತ್ತದೆಯೋ ಅದರಿಂದ ಅಕ್ಕಪಕ್ಕದ ಗ್ರಾಮಗಳಲ್ಲಿ ಬೆಳೆಯುತ್ತಿರುವ ರೇಷ್ಮೆ ಬೆಳೆಗೆ ಹಾನಿಯಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಕುರಿತು ಕ್ರಮ ಕೈಗೊಳ್ಳಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಅದರ ಬಗ್ಗೆ ವಿವರವಾಗಿ ಉತ್ತರ ಕೊಟ್ಟು ಅದರಿಂದ ಹಾನಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆ ಹಾನಿಯ ಬಗ್ಗೆ ತಲಘಟ್ಟಪುರ ರೇಷ್ಮೆ ಸಂಶೋಧನಾ ಕೇಂದ್ರದವರು ತನಿಖೆ ಮಾಡಿದ್ದಾರೆ, ಕಂದಾಯ ಇಲಾಖೆ ಮತ್ತು ರೇಷ್ಮೆ ಇಲಾಖೆಯವರೂ ತನಿಖೆ ಮಾಡಿದ್ದಾರೆ. ಇವರೆಲ್ಲರ ವರದಿಗಳಲ್ಲಿ ಹಾನಿಯಾಗುತ್ತಿರುವ ಬಗ್ಗೆ ಒಪ್ಪಿಕೊಂಡಿದ್ದಾರೆ. ನೀವು ಅದಕ್ಕೆ ಪರಿಹಾರ ಏನು ಮಾಡಿದ್ದೀರಿ ಎಂದರೆ, ಕ್ರಷರ್ ಧೂಳನ್ನು ತಡೆಯಲು jet sprayer ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈ ರೀತಿ ಉತ್ತರ ಕೊಟ್ಟರೆ ರೈತರ ಕಥೆ ಏನಾಗಬೇಕು? ರೇಷ್ಮೆ ಬೆಳೆಯುವುದೇ ಕಷ್ಟ. ಸೊಪ್ಪು ಬೆಳಸುವ ಒಂದು ದಿನದ ಮೊದಲು ಸೊಪ್ಪಿಗೆ ಜೆಟ್ ಸ್ಪ್ರೇಯರ್ ಮುಖಾಂತ ನೀರು ಹಾಯಿಸಿ ನಂತರ ಸೊಪ್ಪು ಕಟಾವು ಮಾಡಿ ಎಂದು ಹೇಳುತ್ತೀರಿ. ಸರ್ಕಾರ ಅವರಿಗೆ ಪರಿಹಾರ ಒದಗಿಸಿ ಕೊಡುವ ನಿಟ್ಟಿನಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕು. DMF ನಲ್ಲಿ ಹಣ ಇದೆ. ಅದಕ್ಕೆ ಕೊರತೆ ಇಲ್ಲ. ಮಾನ್ಯ ಸಭಾಪತಿಯವರೇ, ಧೂಳು ಹಿಡಿದಿರುವಂತಹ ಸೊಪ್ಪನ್ನು ಹುಳುಗಳಗೆ ಹಾಕಿದರೆ ರೇಷ್ಮೆಯ ಕ್ವಾಲಟಿ ಬರುವುದಿಲ್ಲ, ಅದರಿಂದ ಉತ್ಪತ್ತಿಯಾಗುವಂತಹ ಗೂಡು ಸಹಜವಾಗಿರುವುದಿಲ್ಲ. ಎಷ್ಟು ತೂಕ ಬರಬೇಕಾಗಿತ್ತೋ ಅಷ್ಟು ತೂಕ ಬರುವುದಿಲ್ಲ. ಹಾಗಾದರೆ ರೈತ ರೇಷ್ಮೆ ಕೃಷಿಯನ್ನೇ ಬಿಟ್ಟು ಬಿಡಬೇಕಾಗುತ್ತದೆ. ಈ ಕೃಷಿಯನ್ನು ಆತ ಮಾಡಲೇಬೇಕಾದರೆ ನೀವು ಇಂತಹ ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸಿಕೊಡಬೇಕಾಗುತ್ತದೆ. ನಿಮ್ಮಲ್ಲಿ ದುಡ್ಡಿಗೆ ಕೊರತೆ ಇಲ್ಲ. ಧೂಳು ಬರದೇ ಇರುವ ಹಾಗೆ ವೇರ್‌ಹೌಸ್‌ಗಳನ್ನು ಬಿಗಿಯಾಗಿ ಕಟ್ಟುವುದಕ್ಕೆ, ಹುಳು ಸಾಕಾಣಿಕೆ ಮನೆಗಳಗೆಂದು ರೈತರಿಗೆ ಹೆಚ್ಚು ಹಣ ಕೊಡಿ. ಇದನ್ನು ಸ್ಪೆಷಲ್ ಕೇಸ್ ಎಂದು ಕನ್ಸಿಡರ್ ಮಾಡಿ. ನಿಮ್ಮ ಹತ್ತಿರ ಹಣ ಇಲ್ಲದೇ ಇದ್ದರೆ ಡಿ.ಸಿ. ಹತ್ತಿರ ಮಾತನಾಡಿ. ನೀವು ಅವರ

ಜೊತೆ ಮಾತನಾಡಿ DMF ನಿಂದಲೇ ರೂ. 5 ಲಕ್ಷ ಕೊಡುವುದರ ಬದಲು ರೂ. 10 ಲಕ್ಷ ಕೊಡಿ. ಸುಸಜ್ಜಿತ ಹುಳು ಸಾಕಾಣಿಕೆ ಮನೆಗಳನ್ನು ಕಟ್ಟಲಿ. ಕ್ರಷರ್‌ಗಳು ಮತ್ತು ಕ್ವಾರಿಗಳಿಂದ ಧೂಳು ಬರದ ಹಾಗೆ ವ್ಯವಸ್ಥೆ ಮಾಡಿ. ಕ್ರಷರ್ ಮತ್ತು ಕ್ವಾರಿಗಳನ್ನು ನಿಲ್ಲಿಸಬೇಕು ಎಂದು ಹೇಳುವುದಕ್ಕೂ ಆಗುವುದಿಲ್ಲ, ಅದೂ ಕೂಡ ಬೇಕು. ಆದರೆ, ಓಡಾಡುವಂತಹ ಸ್ಥಳಗಳಲ್ಲಿ ನೀರು ಹಾಕುವುದು, ಸುಸಜ್ಜಿತವಾದ ರಸ್ತೆಗಳ ನಿರ್ಮಾಣ ಮಾಡುವುದು ಇಂಥದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಬೇಕು. ಮಾನ್ಯ ಸಚಿವರೇ ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಇನ್ನೊಂದು ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ನೀವು automatic reeling machine ಗೆ ಸಬ್ಸಿಡಿಯನ್ನು ಜಾಸ್ತಿ ಮಾಡಿ.

(ಮುಂದು)

(1152) 23-12-2022 1.20 ಡಿಎಸ್-ಬಿಎನ್‌ಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ(ಮುಂದು):**

ಈ ರಾಜ್ಯದಲ್ಲಿ ರೇಷ್ಮೆ ಕೃಷಿ ಉಳಿಯಬೇಕೆಂದರೆ ARM (automatic reeling machine) ಗಳು ಇವೆಯಲ್ಲಾ, ARM ಗೆ ಚೈನಾ ಬೇಡ, ಕೊಯಮುತ್ತೂರುಗೆ indigenously ಕೊಡುತ್ತೇವೆ ಎಂದು ಹೇಳಿದ್ದಾರಂತೆ. ಕೊಯಮುತ್ತೂರಿನ ARM ನ ಗುಣಮಟ್ಟ ಇದ್ದರೆ ಕೊಡಿ, ಚೈನಾ made ARMs ಗುಣಮಟ್ಟ ಇದೆ. Reeling ಕ್ಷೇತ್ರವನ್ನು ಬಲಿಷ್ಠ ಮಾಡಲಿಲ್ಲವೆಂದರೆ ರೇಷ್ಮೆ ಕೃಷಿ ಉಳಿಯುವುದಿಲ್ಲ. ARM ಗಳನ್ನು ಸ್ಥಾಪನೆ ಮಾಡುವುದಕ್ಕೆ, ಅಲ್ಲಿ ARM ಗಳನ್ನು ಮಾಡಿದ ತಕ್ಷಣ ಗುಣಮಟ್ಟದ ನೂಲು ಉತ್ಪಾದನೆಯಾಗುತ್ತದೆ. Bivoltine ಉತ್ಪಾದನೆ ಜಾಸ್ತಿಯಾಗುತ್ತದೆ. ಆದ್ದರಿಂದ ರೇಷ್ಮೆ ಕೃಷಿ ಉಳಿಯುತ್ತದೆ. ಅದೊಂದು ಮಾಡಿ. Dryer ಗಳನ್ನು ಸ್ಥಾಪನೆ ಮಾಡಿ. ಮೂರು ದಿನದಲ್ಲಿ ರೈತ ಹರಾಜಿನಲ್ಲಿ ಮಾರಿಕೊಳ್ಳಲೇಬೇಕು. ಇಲ್ಲದಿದ್ದರೆ ಆ ಗೂಡು ತೂತು ಆಗುತ್ತದೆ. ಹುಳ ಗೂಡನ್ನು ಕೊರೆದುಕೊಂಡು ಆಚೆ ಬಂದುಬಿಡುತ್ತದೆ. ವಿಧಿಯಿಲ್ಲದೆ ರೀಲರ್ ಕೇಳಿದ ಬೆಲೆಯನ್ನು ಕೊಡಬೇಕಾಗುತ್ತದೆ. ಮಾರುಕಟ್ಟೆಯಲ್ಲೇ dryer ಗಳನ್ನು ಮಾಡಿಬಿಡಿ. ಒಂದೊಂದು ಹೋಬಳಿಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಹೆಚ್ಚು ರೇಷ್ಮೆ ಬೆಳೆಯುತ್ತಿದ್ದಾರೆಯೋ ಆ dryer ಗಳನ್ನು ಸ್ಥಾಪನೆ

ಮಾಡಿ. Dryers ಸ್ಥಾಪನೆ ಮಾಡಿದರೆ ರೈತ ಒಂದು ತಿಂಗಳು ಬಿಟ್ಟುಕೊಂಡು ಗೂಡನ್ನು ಮಾರಿಕೊಳ್ಳುತ್ತಾನೆ. ಎರಡು ತಿಂಗಳು ಬಿಟ್ಟು ಮಾರಿಕೊಳ್ಳುತ್ತಾನೆ. ತಾವು ಕೊಟ್ಟ ಅವಕಾಶವನ್ನು ಬಳಸಿಕೊಂಡು ಈ ಮಾತುಗಳನ್ನು ಹೇಳಿದೆ. ಮಾನ್ಯ ಸಚಿವರಿಂದ ನಾನು ಸಮರ್ಪಕ ಉತ್ತರ ಬಯಸುತ್ತಿದ್ದೇನೆ.

**ಡಾ||ನಾರಾಯಣಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ರವಿ ಯವರು ಹೇಳುತ್ತಿರುವುದು ಸತ್ಯ. ಅಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನನಗೆ ರೈತರು ಕೊಟ್ಟಿರುವ ವರದಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಎಸ್ ರವಿಯವರು ರೈತರು ಕೊಟ್ಟಿರುವ ವರದಿಯನ್ನು
ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟರು)

**ಡಾ||ನಾರಾಯಣಗೌಡ:-** ಮಾನ್ಯ ಸಭಾಪತಿಯವರೆ, 6 ಹಳ್ಳಿಗಳಲ್ಲಿ 37 ರೈತರು 40 ಎಕರೆ ಜಮೀನಿನಲ್ಲಿ ಬೆಳೆದಿರುವ ರೇಷ್ಮೆ ನಷ್ಟವಾಗಿದೆ. ಅಲ್ಲಿ ಕ್ರಷರ್ ಮತ್ತು ಗಣಿಗಾರಿಕೆಗೆ ಕೊಟ್ಟಿರುವ ಲೈಸೆನ್ಸ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅಲ್ಲಿನ ಜಿಲ್ಲಾಧಿಕಾರಿಗಳಿಗೆ, ಗಣಿಗಾರಿಕೆ ಸಚಿವರಿಗೆ ಮತ್ತು ಸಚಿವರಿಗೆ, ಈ ಮೂರು ಜನರಿಗೆ ಪತ್ರವನ್ನು ಬರೆದಿದ್ದೇನೆ. ಅದರ ಕಾಪಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಏಕೆಂದರೆ, ಅಲ್ಲಿ ಶಕ್ತಿ ತುಂಬುವುದಕ್ಕೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಕೊಟ್ಟಿರುವ jet sprayer ನಿಂದ ಅನುಕೂಲ ಇಲ್ಲ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಮಗೂ ಕೂಡ ಅರ್ಥವಾಗುತ್ತಿದೆ. ಮೂರು ಜನರಿಗೂ ಪತ್ರ ಬರೆದಿರುವ ಕಾಪಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಅಲ್ಲೇ ಒಂದು ಸಭೆಯನ್ನು ಮಾಡಿ ಮಾನ್ಯ ಸದಸ್ಯರನ್ನು ಕರೆಯುತ್ತೇನೆ. ಏಕೆಂದರೆ, ತುಂಬಾ ಹಣವಿದೆ. ಅದರಲ್ಲಿ ಹಣ ಕೊಟ್ಟು ಆ ರೈತರಿಗೆ ಅನುಕೂಲ ಮಾಡುವಂತಹ ಕೆಲಸಗಳನ್ನು, ರಸ್ತೆಯನ್ನು ನಿರ್ಮಾಣ ಮಾಡುವಂತಹ ಕೆಲಸಗಳನ್ನು ಮಾಡುವುದಕ್ಕೆ ಈಗಾಗಲೇ ಪತ್ರವನ್ನು ಮೊನ್ನೆಯೇ ಬರೆದಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರನ್ನು ಕರೆದು ಸಭೆಯನ್ನು ಮಾಡಿ.

**ಡಾ||ನಾರಾಯಣಗೌಡ:-** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಅವರನ್ನು ಸಭೆಗೆ ಕರೆಯುತ್ತೇನೆ. ಏಕೆಂದರೆ, ಇದರ ಬಗ್ಗೆ ಅವರಿಗೆ ತುಂಬಾ knowledge ಇದೆ. ಅವರು ತುಂಬಾ ಸಲ ಕೊಟ್ಟಿರುವ ಸಲಹೆ ಅನುಕೂಲವಾಗಿದೆ. ಅವರಿಗೆ ನಾನು ಅಭಿನಂದನೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೇಂದ್ರ ಸರ್ಕಾರದಿಂದ 200 ಕೋಟಿ ರೂಪಾಯಿಗಳ ಅನುದಾನ ಬರುತ್ತಿದೆ. ಡ್ರೈಯರ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದು small ARM ನ್ನು ಮಾಡಬೇಕು. Small ARM ನಲ್ಲಿ ಒಬ್ಬ ಹೆಣ್ಣುಮಗಳು tailoring machine ನಡೆಸುವ ರೀತಿ 350 ಗ್ರಾಂ ನ್ನು ಮನೆಯಲ್ಲಿ ಕುಳಿತುಕೊಂಡು ನೂಲನ್ನು ತಯಾರು ಮಾಡುವಂಥ ಒಂದು ಯೋಜನೆ ಬಂದಿದೆ. ಆ machine sample ನ್ನು ನಾನು ತರಿಸಿದ್ದೇನೆ. ಅಂತಹದ್ದಕ್ಕೂ ಕೊಡುವುದಕ್ಕೆ ಕೇಂದ್ರ ಸರ್ಕಾರದಿಂದ ರೂ. 200 ಕೋಟಿ ಅನುದಾನ ಬರುವುದಿದೆ. ಮಾನ್ಯ ಸದಸ್ಯರು ಹೇಳಿದಂತೆ dryer ಜೊತೆಗೆ mini ARM ನ್ನು ಕೊಟ್ಟು ಸಬ್ಸಿಡಿಯನ್ನು ಕೊಡುವುದು. ಈಗ ಅದಕ್ಕೂ ಮತ್ತು ಇದಕ್ಕೂ machine ನನ್ನು ನಮ್ಮ ಚನ್ನಪಟ್ಟಣದಲ್ಲಿ ಎರಡು ಮಿಷನ್ ನ್ನು ಕೂರಿಸುವಂಥಾದ್ದನ್ನು ಮಾಡಿದ್ದೇವೆ. ಅದರ ಬಗ್ಗೆ ವಿವರಗಳನ್ನು ಸಹ ನಿಮಗೆ ಕೊಡುತ್ತೇನೆ. ಅದನ್ನು ಕೊಡುವುದರಿಂದ ರೇಷ್ಮೆಗೆ ತುಂಬಾ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ರೈತರನ್ನು ಇನ್ನು ಉತ್ತಮ ಸ್ಥಾನಕ್ಕೆ ತೆಗೆದುಕೊಂಡು ಹೋಗುವಂಥ ಕೆಲಸಗಳನ್ನು ನಮ್ಮ ಸರ್ಕಾರ ಮತ್ತು ನಾವುಗಳು ಸೇರಿ ಮಾಡೋಣ. ನಿಮ್ಮ ಸಲಹೆಗಳಿಗೆ ಅಭಿನಂದನೆಗಳನ್ನು ಹೇಳುತ್ತೇನೆ. ಖಂಡಿತವಾಗಿಯೂ ಶೀಘ್ರದಲ್ಲಿಯೇ ಈ ಬಗ್ಗೆ ಒಂದು ಸಭೆಯನ್ನು ಮಾಡೋಣ, ಧನ್ಯವಾದಗಳು.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ 23ನೇ ಡಿಸೆಂಬರ್, 2022, ಸಮೂಹ-5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 134 ಪ್ರಶ್ನೆಗಳ ಪೈಕಿ 112 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**೦5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ: ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಶಹಾಪೂರ ಗ್ರಾಮದಲ್ಲಿ 2019ರಲ್ಲಿ ಉಂಟಾದ ನೆರೆ ಹಾವಳಿಯಿಂದ ನದಿ ಪಾತ್ರದ ಜನರ ಜೀವನ ಬೀದಿ ಪಾಲಾಗಿದ್ದು ಅವರುಗಳಿಗೆ ಪರಿಹಾರವನ್ನು ಒದಗಿಸುವ ಕುರಿತು.**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-**

ಮಾನ್ಯ ಸಭಾಪತಿಯವರೆ, ಶ್ರೀ ಪ್ರಕಾಶ್ ಕೆ. ರಾಥೋಡ್ ಅವರು ದಿನಾಂಕ 21.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ: ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಮತ್ತು ಮಹಾಲಿಂಗಪೂರ ಪಟ್ಟಣಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಿಸುವ ಬಗ್ಗೆ.**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-**

ಮಾನ್ಯ ಸಭಾಪತಿಯವರೆ, ಶ್ರೀ ಹಣಮಂತ ರುದ್ರಪ್ಪ ನಿರಾಣಿ ರವರು ದಿನಾಂಕ: 21.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ಇ) ವಿಷಯ: ರಾಜ್ಯದಲ್ಲಿ 2019 ರಿಂದ 2022 ರವರೆಗೆ ಪ್ರವಾಹದಿಂದ ಉಂಟಾದ ಮನೆಹಾನಿಯನ್ನು ಪುನರ್ ನಿರ್ಮಾಣ ಕಾಮಗಾರಿಗಳು ಪೂರ್ಣವಾಗಿಲ್ಲದಿರುವ ಕುರಿತು

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಶ್ರೀ ಮಂಜುನಾಥ ಭಂಡಾರಿ ಯವರು ದಿನಾಂಕ: 21.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ಈ) ವಿಷಯ: ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸುವ ಮತ್ತು
ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಭಷ್ಟಾಚಾರಕ್ಕೆ ಅವಕಾಶವಿಲ್ಲದಂತೆ
ಸರ್ಕಾರ ಕ್ರಮ ಕೈಗೊಳ್ಳುವ ಕುರಿತು

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ನಾಗರಾಜು ರವರು ದಿನಾಂಕ:21.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಉ) ವಿಷಯ: ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸುವ ಕುರಿತು.**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-**
ಮಾನ್ಯ ಸಭಾಪತಿಯವರೆ, ಶ್ರೀ ಕೆ.ಎ.ತಿಪ್ಪೇಸ್ವಾಮಿ ಯವರು ದಿನಾಂಕ:21.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಊ) ವಿಷಯ: ಗದಗ ಜಿಲ್ಲೆಯ ರೋಣ, ಮುಂಡರಗಿ ಮತ್ತು ಗಜೇಂದ್ರಗಡಗಳಲ್ಲಿ ಶಾಲಾ ಸಮಯಕ್ಕೆ ಸರಿಯಾಗಿ ಬಸ್ ಸಂಚಾರಕ್ಕೆ ವ್ಯವಸ್ಥೆ ಒದಗಿಸಲು ಸಾರಿಗೆ ಘಟಕದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಕುರಿತು.**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಶ್ರೀ ಎಸ್.ವ್ಹಿ.ಸಂಕನೂರ ರವರು ದಿನಾಂಕ:22.12.2022ರಂದು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

## ೦6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ವರ್ಗಾವಣೆ ಕೌನ್ಸಿಲಿಂಗ್ ಮುಖಾಂತರ ನಡೆಯುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ತೊಂದರೆ ಕುರಿತು.

-----

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ವರ್ಗಾವಣೆ ಕೌನ್ಸಿಲಿಂಗ್‌ನ್ನು ಪ್ರಾರಂಭಿಸಲಾಗಿದೆ. ಮೊದಲಿಗೆ ಕಾರ್ಯಭಾರದ ಕೊರತೆಯಿಂದ ಹೆಚ್ಚುವರಿಯಾಗಿರುವ ಅಧ್ಯಾಪಕರನ್ನು ಕಾರ್ಯಭಾರವಿರುವ ಕಾಲೇಜುಗಳಿಗೆ ಕೌನ್ಸಿಲಿಂಗ್ ಮುಖಾಂತರ ಸ್ಥಳನಿಯುಕ್ತಿಗೊಳಿಸುವ ಪ್ರಕ್ರಿಯೆಯಲ್ಲಿ ತುಂಬಾ ಅನ್ಯಾಯವಾಗಿದೆ. ಇದರಲ್ಲಿ ಸದರಿ ಅಧ್ಯಾಪಕರು ಕಾರ್ಯನಿರ್ವಹಿಸುತ್ತಿರುವ ವಲಯಗಳಲ್ಲಿ ಕಾರ್ಯಭಾರವಿರುವ ಕಾಲೇಜುಗಳನ್ನು ತೋರಿಸದೆ ಸುಮಾರು 300-400 ಕಿ.ಮೀ. ದೂರವಿರುವ ಎರಡು ಕಾಲೇಜುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವಂತೆ ತೋರಿಸಿ ತುಂಬಾ ತೊಂದರೆ ಉಂಟು ಮಾಡುತ್ತಿದ್ದಾರೆ. ಉದಾಹರಣೆಗೆ, ಭದ್ರಾವತಿಯವರಿಗೆ ಬಾಗಲಕೋಟೆ, ಕೋಲಾರದವರಿಗೆ ಧಾರವಾಡ, ಶ್ರೀರಂಗಪಟ್ಟಣದವರಿಗೆ ಹುಮ್ನಾಬಾದ್, ಧಾರವಾಡದವರಿಗೆ ಕೆ.ಆರ್.ಪೇಟೆ, ಮಧುಗಿರಿ ಹೀಗೆ ಎರಡು ಕಾಲೇಜುಗಳನ್ನು ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ತೋರಿಸಿ ತುಂಬಾ ತೊಂದರೆ ಉಂಟು ಮಾಡಿದ್ದಾರೆ. ಆದ್ದರಿಂದ ಹೆಚ್ಚುವರಿ ಅಧ್ಯಾಪಕರ ವರ್ಗಾವಣೆ ಪ್ರಕ್ರಿಯೆಯನ್ನು ಪುನಃ ಕೌನ್ಸಿಲಿಂಗ್ ಮಾಡಿ ಆಯಾ ವಲಯಗಳಲ್ಲಿ ಖಾಲಿ ಇರುವ ಎಲ್ಲಾ ಖಾಲಿ ಹುದ್ದೆಗಳನ್ನು ತೋರಿಸಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸಹಾಯಕ ಪ್ರಾಧ್ಯಾಪಕರ ವರ್ಗಾವಣೆ ಕುರಿತು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಈ ಸಂದರ್ಭದಲ್ಲಿ ಮಧ್ಯಂತರ ಅವಧಿಯ ಡಿಸೆಂಬರ್ ಮಾಹೆಯಲ್ಲಿ ನಡೆಸಲು ಆಯುಕ್ತಾಲಯ ಪ್ರಕಟಣೆ ಹೊರಡಿಸಿರುವುದು ನಿಯಮಬಾಹಿರ ಕ್ರಮವಾಗಿದೆ. ಕೆಲವು ಪ್ರಕರಣಗಳಲ್ಲಿ ಕೌನ್ಸಿಲಿಂಗ್ ವರ್ಗಾವಣೆ ಬದಲಾಗಿ ನೇರ ವರ್ಗಾವಣೆ ಮಾಡಿರುವುದು ಸಹ ನಿಯಮಬಾಹಿರ. ಏಕಕಾಲಕ್ಕೆ ಶೈಕ್ಷಣಿಕ ವರ್ಷ ಪ್ರಾರಂಭಿಸಬೇಕೆಂಬ

ತೀರ್ಮಾನದಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಗೊಂದಲವುಂಟಾಗಿ ಎಂಟು ತಿಂಗಳಾದರೂ ಕೆಲವು ಸೆಮಿಸ್ಟರ್‌ಗಳ ಫಲಿತಾಂಶವೇ ಪ್ರಕಟವಾಗಿಲ್ಲ.

ಇನ್ನು ಮುಂದೆ ಮಾಡುವ ಸಾಮಾನ್ಯ ವರ್ಗಾವಣೆಯಲ್ಲಿಯೂ ಅಧ್ಯಾಪಕರಿಗೆ ತೊಂದರೆಯಾಗದಂತೆ ಎಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೋ ಆ ವಲಯಗಳಲ್ಲಿಯೇ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಸ್ಥಳ ಆಯ್ಕೆ ಮಾಡಿಕೊಳ್ಳಲು ತೋರಿಸಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೆ ಅವಕಾಶ ಮಾಡಿಕೊಡಬೇಕೆಂದು ಕಾಲೇಜು ಶಿಕ್ಷಣ ಆಯುಕ್ತರಿಗೆ ನಿರ್ದೇಶನ ನೀಡಬೇಕೆಂದು ಸದನದ ಶೂನ್ಯವೇಳೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಶ್ರೀ ಪುಟ್ಟಣ್ಣ ಮತ್ತು ಶ್ರೀ ಮರಿತಿಬ್ಬೇಗೌಡರು ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರವನ್ನು ಪಡೆದು ಮಂಡಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಈ ವಿಚಾರದ ಬಗ್ಗೆ ನೀವು ಸೋಮವಾರದ ದಿವಸವೇ ಎಷ್ಟು ಹೊತ್ತಾದರೂ ಉತ್ತರವನ್ನು ಕೊಡಿಸಬೇಕು. ಏಕೆಂದರೆ ರಾಜ್ಯದ ತುಂಬಾ ಈ ವಿಚಾರವಾಗಿ ಸಮಸ್ಯೆಯಾಗಿದೆ, ಗಲಾಟೆಯಾಗಿದೆ.

ಆ) ವಿಷಯ: ತುಮಕೂರು ಜಿಲ್ಲೆ ಕೋಲೂರು ದಿಣ್ಣೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮತಾಂತರದ ಕುರಿತು.

-----

**ಶ್ರೀ ಎಸ್.ಕೇಶವ ಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ದಿನಾಂಕ: 21.12.2022 ರಂದು ಸುವರ್ಣ ನ್ಯೂಸ್ ಚಾನಲ್‌ನಲ್ಲಿ ತುಮಕೂರು ಜಿಲ್ಲೆಯ ಕೋಲೂರು ದಿಣ್ಣೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮತಾಂತರದ ಬಗ್ಗೆ ವರದಿಯಾಗಿದೆ. ಸಣ್ಣ ಸಣ್ಣ ಗುಂಪುಗಳಾಗಿ ಮಹಿಳೆಯರಿಂದ ಕೂಡಿರುವ ತಂಡಗಳು ಕ್ರಿಸ್ತ ಜನ್ಮ ದಿನಾಚರಣೆಗೆ ಮುನ್ನ ನಾವು ಸುವಾರ್ತೆಯನ್ನು ಪ್ರಚಾರ ಮಾಡುತ್ತೇವೆ ಎಂದು ಪೋಲೀಸ್ ಅನುಮತಿ ಪಡೆದು ಮನೆ ಮನೆಗೆ ತೆರಳ ಹಿಂದೂ ಧರ್ಮದ ದೇವರುಗಳ ಬಗ್ಗೆ ಅವಹೇಳನ ಮಾಡಿ ಆಮಿಷ ಒಡ್ಡಿ ಮತಾಂತರಕ್ಕೆ ಪ್ರಯತ್ನ ಮಾಡಿರುವ ಕುರಿತು ವರದಿಯಾಗಿದೆ. ಮತಾಂತರ ನಿಷೇಧ ಕಾಯ್ದೆ ಜಾರಿಗೆ ಬಂದ ನಂತರ ಸದರಿ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಅಧಿಕಾರಿಗಳು, ಪೋಲೀಸ್ ಇಲಾಖೆ ಅಸಮರ್ಥವಾಗಿದೆ. ಈ ಘಟನೆಗೆ ಕಾರಣಕರ್ತರಾದವರ ವಿರುದ್ಧ ಮತಾಂತರ ನಿಷೇಧ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮತಾಂತರ ನಿಷೇಧ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರ ತುರ್ತಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಶ್ರೀ ಎಸ್. ಕೇಶವ ಪ್ರಸಾದ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರಕ್ಕೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಾಗರಿಕರು ಪಾವತಿಸಿದ ನೀರಿನ ಬಿಲ್ ಹಣದ ದುರ್ಬಳಕೆ ಕುರಿತು**

-----

**ಶ್ರೀ ಯು.ಬಿ.ವೆಂಕಟೇಶ್ (ವಿಧಾನ ಸಭೆಯಿಂದ ಚುನಾಯಿತರಾದವರು)):-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಜಲಮಂಡಳಿಯ 10 ಕೋಟಿ ರೂಪಾಯಿಗಳ ಗುಳುಂ – ಬಿಲ್‌ಗೆಂದು ಪಾವತಿಸಿದ ಮೊತ್ತ ಬಳಸಿಕೊಂಡ ಸಿಬ್ಬಂದಿ ವಿಚಾರದ ಬಗ್ಗೆ ದಿನಾಂಕ: 19.12.2022ರ ವಿಶ್ವವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಶುದ್ಧ ನೀರಿಗಾಗಿ ಬೆಂಗಳೂರು ಜಲಮಂಡಳಿಗೆ ಪ್ರತಿ ತಿಂಗಳು ಸಾರ್ವಜನಿಕರು ಪಾವತಿಸಿದ ನೀರಿನ ಬಿಲ್‌ಗಳ ಹಣವನ್ನೊಳಗೊಂಡ ಸುಮಾರು 10 ಕೋಟಿ ಹಣವನ್ನು ದುರ್ಬಳಕೆ ಮಾಡಿಕೊಂಡ ಹಗರಣವನ್ನು ಮಂಡಳಿ ಪತ್ತೆ ಮಾಡಿದ್ದು, ಪ್ರಸ್ತುತ ಈ ದಾಖಲೆಗಳನ್ನು ಆಡಿಟ್ ಮಾಡಲಾಗುತ್ತಿದ್ದು, ಅಕ್ರಮ ಎಸಗಿದವರ ಮೇಲೆ ಕ್ರಮ ಕೈಗೊಳ್ಳುವ ಸೂಚನೆಯನ್ನು ನೀಡಿರುವುದು ತಿಳಿದುಬಂದಿರುತ್ತದೆ.

ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಉದ್ಯೋಗಿಗಳ ಅನುಮಾನಾಸ್ಪದ ಚಟುವಟಿಕೆ ಅಕ್ರಮದ ಸುಳಿವು ಇದರಲ್ಲಿ ಕಂಡಬಂದಿದ್ದು, ಜಲಮಂಡಳಿಯ ಆಂತರಿಕ ಸಭೆಯಲ್ಲಿ ನಡೆದ ವಿಚಾರಣೆಯಲ್ಲಿ ಈ ವಿಚಾರವೂ ಬೆಳಕಿಗೆ ಬಂದಿದ್ದು, ನಗದು, ಡಿಮ್ಯಾಂಡ್ ಡ್ರಾಫ್ಟ್, ಚೆಕ್ ಗಳ ಮೂಲಕ ನೀರಿನ ಬಿಲ್ ಸಂಗ್ರಹಿಸಲಾಗಿದ್ದರೂ ಕೂಡ ಯುಟಿಆಟಿ ಖಾತೆಗೆ ಮಾತ್ರ ಈ ಬಿಲ್ ಮೊತ್ತ ತಲುಪಿರುವುದಿಲ್ಲ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಾಗರಿಕರು ನೀರಿನ ಬಿಲ್‌ಗಳಿಗೆ ಪಾವತಿಸಿದ ಹಣವನ್ನು ಒಳಗೊಂಡ 10 ಕೋಟಿ ರೂಪಾಯಿಗಳ ಹಗರಣವನ್ನು ಪತ್ತೆ ಹಚ್ಚಿದ ನಂತರ ಅದರ ಪುಸ್ತಕಗಳ ವಿಶೇಷ ಆಡಿಟ್ ಗೆ ಆದೇಶಿಸಲಾಗಿದೆ. 2017 ರಿಂದ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆನ್‌ಲೈನ್ ಅಥವಾ ಅಧಿಕೃತ ಪಾವತಿಯಿಲ್ಲದೇ,

ನೇರವಾಗಿ ಸಿಬ್ಬಂದಿಗಳಿಗೆ ಪಾವತಿಸಿರುವ ಮೊತ್ತವನ್ನು ಜಲಮಂಡಳಿಗೆ ನೀಡದೇ ವಂಚನೆ ಮಾಡಿರುವ ಆರೋಪ ಕೇಳಿಬಂದಿರುತ್ತದೆ. ಈ ರೀತಿ ಹಣ ವಂಚನೆ ಮಾಡುವುದಕ್ಕಾಗಿಯೇ ನಕಲಿ ಐಡಿಗಳನ್ನು ಸಿದ್ಧಪಡಿಸಿರುವ ಆರೋಪವು ಕೇಳಿ ಬಂದಿರುತ್ತದೆ.

ಈ ಎಲ್ಲಾ ವಿಚಾರಗಳ ಬಗ್ಗೆ ಸಮಗ್ರ ತನಿಖೆ ಕೈಗೊಂಡು ಅಕ್ರಮ ನಡೆಸಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಶ್ರೀ ಯು.ಬಿ.ವೆಂಕಟೇಶ್ ರ ವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಮಂಡಿಸಲಾಗುವುದು.

(ಮುಂದು)

(1153) 23/12/2022/ಎಸ್‌ಪಿಆರ್-ಜಿಆರ್/1:30 (ಸಭಾಪತಿಯವರ ಉಪಸ್ಥಿತಿ)

**ಈ) ವಿಷಯ :- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಅನುದಾನ ಪಡೆಯುವಲ್ಲಿ ಪರಿಶಿಷ್ಟ ಜಾತಿ / ಪಂಗಡ ವರ್ಗದವರು ವಂಚಿತರಾಗುತ್ತಿರುವ ಬಗ್ಗೆ**

- - - -

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕೇಂದ್ರದ ಮಹತ್ವಾಕಾಂಕ್ಷಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಹಣ ಅರ್ಧಕ್ಕರ್ಧ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಸೇರಿದ ರೈತರಿಗೆ ತಲುಪುತ್ತಿಲ್ಲ. ಇದು ಸ್ವತಃ ಕೃಷಿ ಇಲಾಖೆಯವರು ನಡೆಸಿರುವ "ಕೃಷಿ ಸಮೀಕ್ಷೆ ಪ್ರಕಾರ" ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಜಮೀನು ಹೊಂದಿದ ರೈತರ ಸಂಖ್ಯೆ ಕ್ರಮವಾಗಿ 9.73 ಲಕ್ಷ

ಹಾಗೂ 5.21 ಲಕ್ಷ ಈ ಪೈಕಿ ಸಣ್ಣ ಮತ್ತು ಅತೀ ಸಣ್ಣ ರೈತರ ಸಂಖ್ಯೆ (ಎರಡು ಹೆಕ್ಟೇರ್ ಒಳಗಿನ) ಕ್ರಮವಾಗಿ 8.30 ಲಕ್ಷ ಹಾಗೂ 4 ಲಕ್ಷಗಳು ಎಂದು ಅಂದಾಜಿಸಲಾಗಿದೆ. ಇದರಲ್ಲಿ ಪ್ರಸ್ತುತ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಗಳ ಸಂಖ್ಯೆ ಕೇವಲ 7 ಲಕ್ಷ ಮಾತ್ರ ಎನ್ನುವುದು ತಡವಾಗಿ ಬೆಳಕಿಗೆ ಬಂದಿದೆ.

ಎಸ್‌ಇಪಿ/ಟಿಎಸ್‌ಪಿ ಮೂಲಕ 2021-22 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಅರ್ಹ 4.36 ಲಕ್ಷ ಫಲಾನುಭವಿಗಳಿಗೆ 145 ಕೋಟಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 2.63 ಲಕ್ಷ ರೈತರಿಗೆ 81 ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ. ಉಳಿದ ಸುಮಾರು 6 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರು ಯೋಜನೆಯಿಂದ ವಂಚಿತರಾಗಿದ್ದಾರೆ. ಈ ಮಧ್ಯೆ 2022-23 ನೇ ಸಾಲಿಗೆ ಪರಿಶಿಷ್ಟ ಜಾತಿಗೆ 240 ಕೋಟಿ ಹಾಗೂ ಪರಿಶಿಷ್ಟ ಪಂಗಡಕ್ಕೆ 120 ಕೋಟಿ ರೂಪಾಯಿ ನೀಡಲಾಗಿದೆ ಎಂದು ಹೇಳಲಾಗಿದೆ.

ಈ ಯೋಜನೆಯಿಂದ ವಂಚಿತರಾಗಲು ಪ್ರಮುಖ ಕಾರಣ, ಬಹುತೇಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಸೇರಿದ ರೈತರ ಜಮೀನುಗಳು ಅವರ ತಂದೆ ಅಥವಾ ತಾತನ ಹೆಸರಿನಲ್ಲಿರುತ್ತದೆ; ತಮ್ಮ ಹೆಸರಿಗೆ ಖಾತೆ ಆಗಿರುವುದಿಲ್ಲ. ಆದರೆ, ಕೃಷಿ ಇಲಾಖೆಗೆ ತಮ್ಮ ಆಧಾರ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆ ನೀಡಿರುತ್ತಾರೆ. ಇದರಿಂದ ಅನಾಯಾಸವಾಗಿ ಅರ್ಜಿಗಳು ತಿರಸ್ಕೃತಗೊಳ್ಳುತ್ತಿದೆ. ಈ ಬಗ್ಗೆ ಬಹುತೇಕ ರೈತರಿಗೆ ಗೊತ್ತಿಲ್ಲ; ಆದರೆ, ಅಧಿಕಾರಿಗಳು ಇದಕ್ಕೆ ಸಂಬಂಧಿಸಿದಂತೆ ಅರಿವು ಮೂಡಿಸುವ ಗೋಜಿಗೂ ಸಹ ಹೋಗಿಲ್ಲ. ಇದರ ಪರಿಣಾಮ ಬಹು ದೊಡ್ಡ ವರ್ಗ ಯೋಜನೆಯಿಂದ ವಂಚಿತವಾಗುತ್ತಿರುವ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಿಸಾನ್ ಸಮ್ಮಾನ್ ಯೋಜನೆಯು ಪರಿಪೂರ್ಣ ಪ್ರಮಾಣದಲ್ಲಿ ತಲುಪುತ್ತಿಲ್ಲ ಎಂದು ಸದಸ್ಯರು ಹೇಳುತ್ತಿದ್ದಾರೆ. ಇವರು

ತಿಳಿಸುವ ಕಾರಣಗಳೂ ಸಹ ಸರಿಯಾಗಿವೆ. ಏಕೆಂದರೆ, ತುಂಬಾ ಹಿರಿಯರ ಹೆಸರಿಗೆ ಅಂದರೆ, ತಾತ-ಮುತ್ತಾತಂದಿರ ಕಾಲದಲ್ಲಿರುವ ಹೆಸರುಗಳ ಖಾತೆಗಳು ತಿದ್ದುಪಡಿಯಾಗದೇ ಇರುವುದರಿಂದಾಗಿ ಅವರ ಖಾತೆಗಳಿಗೆ ಅನುದಾನದ ಮೊತ್ತವು ಹೋಗಲಿಕ್ಕೆ ಸಮಸ್ಯೆಯಾಗುತ್ತದೆ ಎಂದು ಸದಸ್ಯರು ಹೇಳಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮರು ಸಮೀಕ್ಷೆ ಮಾಡಬೇಕೆಂಬ ಸೂಚನೆ ನೀಡಿದ್ದೇನೆ. ಯಾರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ ಇವರುಗಳು ಯಾರು ಕಿಸಾನ್ ಸಮ್ಮಾನ್ ಯೋಜನೆಯಿಂದ ವಂಚಿತರಾಗುವವರಿಗೆ ಯೋಜನೆಗಳ ಫಲವನ್ನು ತಲುಪಿಸಲು ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುವ ಸೂಚನೆಗಳನ್ನು ನೀಡಲಾಗಿದೆ. ಈ ವಾರದಲ್ಲಿ ನಾನೇ ಖುದ್ದಾಗಿ ಪುನಃ ಸಭೆಯನ್ನು ನಡೆಸಿ, ಅವರಿಗೆ ಅನ್ಯಾಯವಾಗದಂತೆ ನೋಡುತ್ತೇನೆ.

**ಉ) ವಿಷಯ:- ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮಧ್ಯಮರ್ತಿಗಳ ಹಾವಳ ಕುರಿತು.**

- - -

**ಶ್ರೀ ಎಂ.ನಾಗರಾಜು(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ದಿನಾಂಕ:22/12/2022 ರ ವಿಶ್ವವಾಣಿ ದಿನ ಪತ್ರಿಕೆಯಲ್ಲಿ ಸಾರಿಗೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ, ಕನ್ನಡಿಯೊಳಗಿನ ಗಂಟಿನಂತಾದ ಆನ್‌ಲೈನ್, ಹೈರಾಣಾದ ಸಾರ್ವಜನಿಕರು, ಕೈಬಿಸಿ ಮಾಡದೇ ಇದ್ದರೆ ಯಾವ ಕೆಲಸವೂ ಆಗಲ್ಲ ಎಂಬ ವಿಚಾರವು ವರದಿಯಾಗಿರುತ್ತದೆ.

ಪ್ರತಿದಿನವೂ ಹೊಸ ಹೊಸ ಆವಿಷ್ಕಾರಗಳೊಂದಿಗೆ ಮುನ್ನಡೆಯುತ್ತಿರುವ ಇಂದಿನ ಕಾಲಘಟ್ಟದಲ್ಲಿ ತಂತ್ರಜ್ಞಾನ ಬಳಕೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಇಂತಹ ತಂತ್ರಜ್ಞಾನ ಸೌಲಭ್ಯಗಳನ್ನು ಒದಗಿಸಿದ್ದರೂ ಸಹ ಭ್ರಷ್ಟ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಆನ್‌ಲೈನ್ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಂಡು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ಬದಲು ಆ ವ್ಯವಸ್ಥೆಯನ್ನು ಬಳಸದೇ ಸಬೂಬು ನೀಡಿ, ಸಾರ್ವಜನಿಕರ ಕೆಲಸಗಳನ್ನು ಸಕಾಲದಲ್ಲಿ ನಿರ್ವಹಿಸದೇ ಕಾಲವಿಳಂಬ ಮಾಡುತ್ತಿರುವುದು ಜಗಜ್ಜಾಹೀರವಾಗಿದೆ.

ನೇರವಾಗಿ ಹೋದರೆ ಆರ್.ಟಿ.ಓ. ಕಛೇರಿಗಳಲ್ಲಿ ಕೆಲಸ ಕಾರ್ಯವಾಗದೇ ವಿನಾಕಾರಣ ಅವರನ್ನು ಅಲೆಸುತ್ತಿರುವುದು ಪ್ರತಿ ದಿನದ ವಾರ್ತೆಯಾಗಿದೆ. ಮಧ್ಯವರ್ತಿಗಳ ಮುಖಾಂತರ ಹೋದರೆ, ಒಂದೇ ದಿನದಲ್ಲಿ ಕೆಲಸವಾಗುತ್ತದೆ. ಪ್ರಭಾವಿ ಅಧಿಕಾರಿಗಳ ಸಿಂಡಿಕೇಟ್ ಸಾರಿಗೆ ಇಲಾಖೆಯನ್ನು ದೀರ್ಘಕಾಲದಿಂದ ಹಿಡಿತದಲ್ಲಿಟ್ಟುಕೊಂಡಿರುವುದು ಕೂಡ ಇಲಾಖೆಯಿಂದಲೇ ಬಹಿರಂಗವಾಗಿದೆ. ಇಂತಹ ಪರಿಸ್ಥಿತಿಯಿಂದ ಸಾರಿಗೆ ಇಲಾಖೆಯನ್ನು ಹೊರತಂದು ಸಾರ್ವಜನಿಕರಿಗೆ ನೇರವಾಗಿ ಮತ್ತು ಆನ್‌ಲೈನ್ ಮುಖಾಂತರ ಸೇವೆಗಳನ್ನು ಒದಗಿಸುವಂತೆ ಕೋರಿ ಮಾನ್ಯ ಸಾರಿಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಎಂ.ನಾಗರಾಜು ಹಾಗೂ ಶ್ರೀ ಕೆ.ಹರೀಶ್ ಕುಮಾರ್ ರವರುಗಳು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಸಾರಿಗೆ ಸಚಿವರಿಂದ ಉತ್ತರ ಪಡೆದು ಮಂಡಿಸಲಾಗುವುದು.

ಊ) **ವಿಷಯ:- ವಿದ್ಯುತ್ ದರ ಏರಿಕೆ ಕುರಿತು**

- - -

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಮತ್ತೆ ವಿದ್ಯುತ್ ದರ ಏರುತ್ತಾ?" ಎಂಬ ಶೀರ್ಷಿಕೆಯಡಿ ದಿನಾಂಕ 22/12/2022 ರ ಉದಯವಾಣಿ ಪತ್ರಿಕೆಯ ಮುಖಪುಟದಲ್ಲಿ ವರದಿಯಾಗಿದೆ. ಅತ್ತ ಇಂಧನ ಸಚಿವರು ಹೊಸ ವರ್ಷಕ್ಕೆ ವಿದ್ಯುತ್ ದರ ಇಳಿಕೆಯ ಮುನ್ಸೂಚನೆ ನೀಡಿದರೆ, ಇತ್ತ ಅದಕ್ಕೆ ತದ್ವಿರುದ್ಧವೆಂಬಂತೆ ವಿದ್ಯುತ್ ಸರಬರಾಜು ಕಂಪನಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ದರ ಏರಿಕೆಗೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿವೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಸೇರಿದಂತೆ ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನ ಹಾಗೂ ಪಿಂಚಣಿ ಪರಿಷ್ಕರಣೆಯ ಬಾಬ್ತು ಕೂಡ ಪ್ರಸ್ತಾವನೆಯಲ್ಲಿ ಸೇರ್ಪಡೆಯಾಗಿವೆ. ವಿದ್ಯುತ್ ಖರೀದಿ ಮತ್ತು ಸರಬರಾಜುಗಳ ಮತ್ತು ಸೋರಿಕೆ, ಸಬ್ಸಿಡಿ ಒಳಗೊಂಡಂತೆ ವಿವಿಧ ಪ್ರಕಾರದ ವೆಚ್ಚಗಳನ್ನು ಆಧರಿಸಿ ಸರಾಸರಿ ಯೂನಿಟ್‌ಗೆ 1.20 ರಿಂದ 1.40 ರೂಪಾಯಿಗಳವರೆಗೆ ಪರಿಷ್ಕರಣೆಗೆ ಬೇಡಿಕೆ ಇಟ್ಟಿವೆ. ಕಳೆದ ಬಾರಿ ಯೂನಿಟ್‌ಗೆ 1.85 ರೂಪಾಯಿ ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಸಿದ್ದವು. ದರ ಪರಿಷ್ಕರಣೆಯ ಸಾಧಕ ಬಾಧಕಗಳು ಅಗತ್ಯತೆಗಳ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಪರಿಶೀಲನೆ ನಡೆಸಿ, ಫೆಬ್ರವರಿಯಲ್ಲಿ ಸಾರ್ವಜನಿಕ ಅಹವಾಲು ಮತ್ತು ವಿಚಾರಣೆ ನಡೆಸಿ ಅಂತಿಮ ನಿರ್ಣಯ ಕೈಗೊಳ್ಳುವ ಸಂಭವವಿದೆ. ಈಗಾಗಲೇ ರಾಜ್ಯದಲ್ಲಿ ಸಾರ್ವಜನಿಕರು ಬೆಲೆ ಏರಿಕೆಯಿಂದಾಗಿ ಸಂಕಷ್ಟಕ್ಕೀಡಾಗಿದ್ದಾರೆ. ಆದ್ದರಿಂದ ಯಾವುದೇ ಕಾರಣಕ್ಕೂ ವಿದ್ಯುತ್ ಬೆಲೆ ಏರಿಕೆಯ ಹೊರೆಯನ್ನು ಸಾರ್ವಜನಿಕರ ಮೇಲೆ ಹೊರೆಸಬಾರದಾಗಿ ಮಾನ್ಯ ಇಂಧನ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಇಂಧನ ಸಚಿವರಿಂದ ಉತ್ತರ ಪಡೆದು ಮಂಡಿಸಲಾಗುವುದು.

ಖು) **ವಿಷಯ :- ರಾಜ್ಯದಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ**

- - - -

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಲವ್ ಜಿಹಾದ್ ಪ್ರಕರಣಗಳು ಕಳೆದ ಹಲವು ವರ್ಷಗಳಿಂದ ಎಗ್ಗಿಲ್ಲದೆ ತಾಂಡವವಾಡುತ್ತಿರುವುದು, ಲಂಗು ಲಗಾಮಿಲ್ಲದೇ ಜರುಗುತ್ತಿರುವ ಬಗ್ಗೆ ದಿನಾಂಕ 22/12/2022 ರ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಇಂತಹ ಪ್ರಕರಣಗಳು ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ ಬೇರೆ ಬೇರೆ ರಾಜ್ಯಗಳಲ್ಲಿ ಜರುಗುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಲವ್ ಜಿಹಾದ್ ಎಂಬ ಹೆಸರಿನಲ್ಲಿ ಹೆಣ್ಣುಮಕ್ಕಳ ಮೇಲಿನ ಮಾನಸಿಕ ಮತ್ತು ದೈಹಿಕ ಕ್ರೌರ್ಯ ಹೆಚ್ಚಾಗುತ್ತಿರುವುದು ಕಳವಳಕ್ಕೆ ಕಾರಣವಾಗಿರುತ್ತದೆ. ಕರ್ನಾಟಕದ ಮಂಗಳೂರು ಸೇರಿದಂತೆ, ಬೆಂಗಳೂರು, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಜರುಗಿವೆ. ಹೆಣ್ಣುಮಕ್ಕಳನ್ನು ಪ್ರೀತಿಯ ಬಲೆಯಲ್ಲಿ ಬೀಳಿಸಿ ಮದುವೆಯ ನೆಪವೊಡ್ಡಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಲಾಗುತ್ತಿರುವುದು ದಿನೇ ದಿನೇ ವರದಿಯಾಗುತ್ತಿದೆ. ರಾಜ್ಯದಲ್ಲಿಯೂ ಉತ್ತರ ಪ್ರದೇಶದ ಮಾದರಿಯಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ಕಠಿಣವಾಗಿ ಜಾರಿ ಮಾಡಬೇಕೆನ್ನುವ ಕೂಗು ಸಾರ್ವತ್ರಿಕವಾಗಿ ಕೇಳಿ ಬರುತ್ತಿದೆ. ಈ ಲವ್ ಜಿಹಾದ್‌ನಲ್ಲಿ ಹಿಂದೂ ಹುಡುಗಿಯರೇ ಗುರಿಯಾಗಿರುವುದೂ ಸಹ ಬಹುತೇಕ ಪ್ರಕರಣಗಳಲ್ಲಿ ಕಂಡು ಬಂದಿರುತ್ತದೆ. ಈ ಬೆನ್ನಲ್ಲೆ ಹಲವು ಹಿಂದೂ ಜಾಗೃತಿ ಸಂಘಟನೆಗಳು ರಾಜ್ಯದಲ್ಲೂ ಲವ್‌ಜಿಹಾದ್ ವಿರೋಧಿ ವಿಶೇಷ ದಳ ರಚಿಸಲು ಆಗ್ರಹಿಸಿರುತ್ತಾರೆ. ರಾಜ್ಯ ಸರ್ಕಾರ ಲವ್ ಜಿಹಾದ್ ತಡೆಗೆ ಪ್ರತ್ಯೇಕ ಕಾಯ್ದೆ ರೂಪಿಸುವ ಬದಲು ಈಗಾಗಲೇ ಎರಡೂ ಸದನದಲ್ಲಿ ಅಂಗೀಕಾರವಾಗಿರುವ ಮತಾಂತರ ನಿಷೇಧ ಕಾಯ್ದೆಯಲ್ಲೇ ಇದನ್ನು ಸೇರಿಸಲು ಮುಂದಾಗಿರುವುದು ತಿಳಿದು ಬಂದಿರುತ್ತದೆ. ಇದು ನಿಜವೇ ಆಗಿದ್ದಲ್ಲಿ ಆದಷ್ಟು ಶೀಘ್ರ ಕಠಿಣ ನಿಯಮಗಳನ್ನು ಒಳಗೊಂಡ ಕಾನೂನನ್ನು ಸಿದ್ಧಪಡಿಸಿ

ಜಾರಿಗೆ ತರಲು ಸರ್ಕಾರ ಕ್ರಮ ವಹಿಸಬೇಕೆಂದು ಮಾನ್ಯ ಗೃಹ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಗೃಹ ಸಚಿವರಿಂದ ಉತ್ತರ ಪಡೆದು ಮಂಡಿಸಲಾಗುವುದು.

**ಎ) ವಿಷಯ:- ಕುಡಚಿ-ಬಾಗಲಕೋಟೆ ರೈಲು ಮಾರ್ಗದ ಅನುಷ್ಠಾನದ ನಿರ್ಲಕ್ಷತೆ ಬಗ್ಗೆ**

**- - -**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಕುಡಚಿ-ಬಾಗಲಕೋಟೆ ರೈಲು ಮಾರ್ಗದ ಅನುಷ್ಠಾನಕ್ಕೆ ನಿರ್ಲಕ್ಷ್ಯ ತೋರುತ್ತಿರುವುದು ಆ ಭಾಗದ ಸಾರ್ವಜನಿಕರ ಅನೇಕ ವರ್ಷಗಳ ಬೇಡಿಕೆಯಾಗಿದೆ. ಈಗಾಗಲೇ ಕುಡಚಿ-ಬಾಗಲಕೋಟೆ ರೈಲು ಮಾರ್ಗದ ಪ್ರಗತಿಗಾಗಿ ಅಗತ್ಯ ಅನುದಾನ ಒದಗಿಸಲಾಗಿದೆ. ಆದರೆ, ಬಾಗಲಕೋಟೆಯಿಂದ ಕುಡುಚಿ ನಡುವೆ ಸುಮಾರು 30 ಕಿ.ಮೀ. ಹೊಸ ಮಾರ್ಗ ಕಾರ್ಯಾರಂಭ ಮಾಡಿದೆ. ಖಜ್ಜಿಡೋಣಿಯಲ್ಲಿರುವ ಸರಕುಗಳ ಗೂಡ್ಸ್‌ಶೆಡ್ ಸಹ ಕಾರ್ಯನಿರ್ವಹಿಸುತ್ತಿವೆ. ಲೋಕಾಪುರದಿಂದ ಯಾದವಾಡವರೆಗೆ 20 ಕಿ.ಮಿ. ವ್ಯಾಪ್ತಿ ನಿರ್ಮಾಣಕ್ಕೆ ಟೆಂಡರ್ ಸಹ ಕರೆಯಲಾಗಿದೆ. ಉಳಿದಿರುವ ಯಾದವಾಡ-ಕುಡಚಿ ವಿಭಾಗದ ಸುಮಾರು 83 ಕಿ.ಮಿ. ವ್ಯಾಪ್ತಿಯಲ್ಲಿ ಭೂ-ಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಲು ರಾಜ್ಯ ಸರ್ಕಾರ ಮುಂದಾಗಬೇಕಾಗಿದೆ; ಹಾಗೂ ಬಾಗಲಕೋಟೆ-ಕುಡಚಿ ಮಾರ್ಗಕ್ಕೆ 2,460 ಎಕರೆ ಜಮೀನು ಅಗತ್ಯವಿದು, ಈಗಾಗಲೇ 1,801 ಎಕರೆ ಜಮೀನು ಹಸ್ತಾಂತರವಾಗಿದ್ದು, ಉಳಿದ ಜಮೀನು ಸ್ವಾಧೀನ ಪ್ರಕ್ರಿಯೆಯು ಶೀಘ್ರದಲ್ಲಿ ಪೂರ್ಣಗೊಂಡರೆ, ಆ ಭಾಗದ ಅನೇಕ ರೈತರು ಬೆಳೆದ ದವಸ-ಧಾನ್ಯಗಳನ್ನು ಬೇರೆ ರಾಜ್ಯಗಳಿಗೆ ಸರಕು ಮಾಡಿ ಆ ಭಾಗದ ರೈತರನ್ನು ಆರ್ಥಿಕವಾಗಿ ಸದೃಢ ಮಾಡಿದಂತಾಗುತ್ತದೆ ಹಾಗೂ ಈಗಾಗಲೇ ರೈಲ್ವೆ ಮಾರ್ಗಕ್ಕಾಗಿ ಭೂಮಿ ನೀಡಿದ ರೈತರ ಕುಟುಂಬಕ್ಕೆ ಸರ್ಕಾರಿ ಉದ್ಯೋಗವನ್ನು ನೀಡುವಂತೆ ಆ ಭಾಗದ ರೈತರು ವಿನಂತಿಸುತ್ತಿದ್ದಾರೆ.

ಪ್ರಸ್ತುತ ಆ ಭಾಗದ ಸಾರ್ವಜನಿಕರು ಮತ್ತು ಹೋರಾಟಗಾರರು ತ್ವರಿತಗತಿಯ ಕಾಮಗಾರಿಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಖಜ್ಜಿಡೋಣಿಯಿಂದ ಮುಂದಿನ ಮಾರ್ಗ ನಿರ್ಮಾಣವಾಗುವವರೆಗೂ ಖಜ್ಜಿಡೋಣಿಯ ರೈಲು ನಿಲ್ದಾಣದಲ್ಲಿನ ಸರಕು ಸಾಗಾಣಿಕೆಯನ್ನು ಸ್ಥಗಿತಗೊಳಸಬೇಕೆಂದು ಪ್ರತಿಭಟನೆ ನಡೆಸುತ್ತಿದ್ದಾರೆ. ಆದಕಾರಣ ತ್ವರಿತಗತಿಯಲ್ಲಿ ಉಳಿದ ಕಾಮಗಾರಿಗಳನ್ನು ಶೀಘ್ರವೇ ಪ್ರಾರಂಭಿಸಲು ಸಂಬಂಧಪಟ್ಟ ಕೇಂದ್ರ ರೈಲ್ವೆ ಸಚಿವರು ಅಥವಾ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಆ ಭಾಗದ ಅನೇಕ ವರ್ಷಗಳ ಕನಸು ನನಸು ಮಾಡುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಪಡೆದು ಮಂಡಿಸಲಾಗುವುದು.

(ಮುಂದು)

(1154) 23-12-2022 1-40/bkp-gr

07. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ-III) 31ನೇ ಮಾರ್ಚ್, 2021ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು (2022ನೇ ವರ್ಷದ ವರದಿ ಸಂಖ್ಯೆ-6) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

೦೮. <u>ವರದಿಯನ್ನೊಪ್ಪಿಸುವುದು</u>

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 215ರ ರೀತ್ಯಾ ಸಮಿತಿಯ ಮೊದಲನೆ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

೦೯. <u>ಖಾಸಗಿ ಸದಸ್ಯರ ಕಾರ್ಯಕಲಾಪ</u>

<u>**ಖಾಸಗಿ ನಿರ್ಣಯ**</u>

**ವಿಷಯ:- ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ಕುರಿತು ಸಂವಿಧಾನ ತಿದ್ದುಪಡಿಗಾಗಿ ಕೋರಿ ಖಾಸಗಿ ನಿರ್ಣಯದ ಮಂಡನೆ ಬಗ್ಗೆ.**

- - - -

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

**"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ಕುರಿತು ಸಂವಿಧಾನಕ್ಕೆ ತಿದ್ದುಪಡಿ ತರುವ ಸಲುವಾಗಿ ಖಾಸಗಿ ನಿರ್ಣಯ"**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ಕುರಿತು ಸಂವಿಧಾನಕ್ಕೆ ತಿದ್ದುಪಡಿ ತರುವ ಸಲುವಾಗಿ ಖಾಸಗಿ ನಿರ್ಣಯವನ್ನು ಮಂಡಿಸಲು ಅನುಮತಿ ನೀಡುವುದು"**

**ನಿರ್ಣಯವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಸದನವನ್ನು ದಿನಾಂಕ 26-12-2022ರ ಸೋಮವಾರ, ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 01 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 26ನೇ ಡಿಸೆಂಬರ್ ಮಾಹೆ 2022ರ ಸೋಮವಾರದಂದು ಬೆಳಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**